ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಪ್ರೊ. ಬ್ರಿಜ್ ಬಿಹಾರಿ ಕುಮಾರ್

ಇವರು ಯಾರು ಬಲ್ಲಿರಾ?

ಉತ್ತರ ಪು.12

ಸಂಪುಟ 11 | ಸಂಚಿಕೆ 21 | ಪುಟ 16 | ಮೇ 15-21, 2017 | ರೂ. 10/-

web: www.janashakthi.co.in | e-mail : js_weekly@yahoo.com

ಹೌದು
ನಾವು ಮುಸಲ್ಮಾನರು
ದೇಶ ನಮ್ಮದು ಭಾರತ
ನಮ್ಮ ಪೂರ್ವಜರು ಇಲ್ಲಿಯೇ ಹುಟ್ಟಿ
ಬಾಳಿಗಾಗಿ ನಾಡಿಗಾಗಿ ದುಡಿದವರು
ನಾವೇಕೆ ನಮ್ಮ ಧರ್ಮ ಗುರುತಿನ ಕಾರಣಕ್ಕೆ ಶಂಕಿತರಾಗಬೇಕು?
ಧರ್ಮದ ಹೆಸರಿನ ರಾಜಕಾರಣವೇಕೆ ನಮ್ಮನ್ನಾಳಬೇಕು ?
ಮಾಡದ ತಪ್ಪಿಗೇಕೆ ಕಟಕಟೆಯಲ್ಲಿ ನಿಲ್ಲಬೇಕು?
ಸಾಕು ಸಾಕಿನ್ನು ಅನುಮಾನ, ಅವಮಾನದ
ಬೆಂಕಿಯಲ್ಲಿ ಬೇಯುವುದು.
ಎದ್ದು ನಿಂತಿದ್ದೇವೆ ನಾವು ಸಮಾನತೆಗಾಗಿ.
ಸ್ವಾತಂತ್ರ್ಯಕ್ಕಾಗಿ ಕೊರಳು ಕೊಟ್ಟವರ ವಂಶಸ್ಥರು
ನಾವು ಕೇಳುತ್ತೇವೆ. ಪ್ರಜಾಪ್ರಭುತ್ವ ಎಂಬುದಿದ್ದರೆ
ಎಲ್ಲಿ ನಮ್ಮ ಸಮಪಾಲು?
ಕಲೆ, ಸಾಹಿತ್ಯ, ಸಂಸ್ಕೃತಿ ಕಟ್ಟಿದವರ ಹೆಮ್ಮೆಯ
ಕುಡಿಗಳು ನಾವು, ಎದೆ ಸೆಟೆಸಿ ನುಡಿಯುತ್ತೇವೆ
ಈ ದೇಶ ಯಾರೊಬ್ಬರ ಸ್ವತ್ತೂ ಅಲ್ಲ.
ಇದು ನಮ್ಮ ಜನ್ಮ ಭೂಮಿ.
ಇದು ನಮ್ಮ ಪುಣ್ಯ ಭೂಮಿ.
ನಮ್ಮ ಕೊನೆ ಉಸಿರಿನ ಸಮರ್ಪಣೆ
ಈ ನಾಡಿಗೆ ಈ ನೆಲಕ್ಕೆ.



ಕೇಂದ್ರದ ಜನವಿರೋಧಿ ನೀತಿಗಳ ವಿರುದ್ಧ

ಪ್ರಚಾರಾಂದೋಲನ ವಾರ: ಮೇ 18-25


ಬಗರ್ ಹುಕುಂ ಸಕ್ರಮಕ್ಕೆ ಅಡೆತಡೆ ನಿವಾರಿಸಿ

ಬ್ಯಾಂಕುಗಳ ಮರು ಖಾಸಗೀಕರಣ

ತ್ರಿಪುರಾ: ಬಿಜೆಪಿ ಆಟ ಸಾಗದು



- ಕಾರಟ್



ನಿರ್ಭಯ ಬಿಲ್ಕಿಸ್ ಭಿನ್ನ ಮಾನದಂಡ: ಬೃಂದಾ



ಮಹಿಳೆಯರ ವಿರುದ್ಧ ಹಿಂಸಾಚಾರಗಳಿಗೆ ಶಿಕ್ಷೆ ಖಂಡಿತ ಎಂದಾಗಬೇಕು–ಎಐಡಿಡಬ್ಲ್ಯುಎ

ಭೀಕರ 'ನಿರ್ಭಯಾ' ಸಾಮೂಹಿಕ ಅತ್ಯಾಚಾರದ ಕೇಸಿನಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯ ಕಾನೂನಿನಲ್ಲಿ ಅವಕಾಶ ವಿರುವ ಗರಿಷ್ಟ ಶಿಕ್ಷೆಯನ್ನು ವಿಧಿಸುವ ತೀರ್ಪು ನೀಡಿದೆ. ಇದು ಸ್ವಾಗತಾರ್ಹ ತೀರ್ಪು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಮಘ (ಎಐಡಿಡಬ್ಲ್ಯುಎ) ಹೇಳಿದೆ.

ಆದರೆ ಎಐಡಿಡಬ್ಲ್ಯುಎಎ ಮರಣದಂಡನೆಗೆ ವಿರುದ್ಧವಾಗಿದೆ, ಏಕೆಂದರೆ ಅದನ್ನು ಕೆಲವೊಮ್ಮೆ ಮನಬಂದ ರೀತಿಯಲ್ಲಿ ಕೇಳಲಾಗುತ್ತಿದೆ ಮತ್ತು ಕೊಡಲಾಗುತ್ತಿದೆ.

ಈ ದಿನವೇ ಬಂದಿರುವ ಇನ್ನೊಂದು ತೀರ್ಪಿನ ಸಂದರ್ಭದಲ್ಲಿ ಇದನ್ನು ಕಾಣಬಹುದು. ಗುಜರಾತಿನ ಬಿಲ್ಕಿಸ್ ಬಾನೊ ಕೇಸ್ ಕೂಡ ಸಾಮೂಹಿಕ ಅತ್ಯಾಚಾರದ್ದು. ಜತೆಗೆ ಆ ಮುಸ್ಲಿಂ ಕುಟುಂಬದ ಹಲವಾರು ಸದಸ್ಯರ ಹತ್ಯೆಯೂ ಅದರೊಂದಿಗೇ ನಡೆದ ಪ್ರಕರಣ. ಕೋಮುವಾದಿ ಹಿನ್ನೆಲೆಯಲ್ಲಿ ನಡೆದ ಈ ಪ್ರಕರಣ ಅಷ್ಟೇ ಬರ್ಬರ ಮತ್ತು ಭೀಕರವಾಗಿತ್ತು. ಮುಂಬೈ ಹೈಕೋರ್ಟ್ ಇದರಲ್ಲಿ 11 ಆಪಾದಿತರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಸಿಬಿಐ ಮರಣದಂಡನೆಗೆ ಒತ್ತಾಯ ಮಾಡಲಿಲ್ಲ.

ಎಐಡಿಡಬ್ಲ್ಯುಎ ಮತ್ತಿತರ ಮಹಿಳಾ ಸಂಘಟನೆಗಳು ಈಗಾಗಲೇ ಕ್ರಿಮಿನಲ್ ಕಾಯ್ದೆ ತಿದ್ದುಪಡಿ, 2013 ರ ಮೂಲಕ ಭಾರತೀಯ ದಂಡಸಂಹಿತೆಯಲ್ಲಿ ಕನಿಷ್ಟ ಏಳು ವರ್ಷಗಳ ಶಿಕ್ಷೆ , ಹತ್ತು ವರ್ಷಗಳು ಮತ್ತು ಜೀವಾವಧಿ ವರೆಗಿನ ಶಿಕ್ಷೆಯ ಅಂಶವನ್ನು ಸೇರಿಸಲು ಆಗ್ರಹಿಸಿವೆ. ಇಲ್ಲಿ ಮರಣದಂಡನೆಗಿಂತ ಹೆಚ್ಚಾಗಿ ಇಂತಹ ಅಪರಾಧಗಳಿಗೆ ಖಂಡಿತ ಶಿಕ್ಷೆಯಾಗುತ್ತದೆ ಎನ್ನುವುದು ಮುಖ್ಯ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ನಿರ್ಭಯಾ ಕೇಸಿನ ಮೊದಲು ಮತ್ತು ನಂತರ ಕೂಡ ಬಹಳಷ್ಟು ಅತ್ಯಾಚಾರದ ಪ್ರಕರಣಗಳು ನಡೆದಿವೆ. ಇವುಗಳ ಸರಿಯಾದ ತನಿಖೆಗಳು ನಡೆದಿಲ್ಲ, ಅಪರಾಧಿಗಳಿಗೆ ಶಿಕ್ಷೆಯಾಗಿಲ್ಲ. ಅತ್ಯಾಚಾರ ಸೇರಿದಂತೆ ಮಹಿಳೆಯರ ವಿರುದ್ಧ ಅಪರಾಧಗಳ ಎಲ್ಲ ಕೇಸುಗಳನ್ನು, ತ್ವರಿತವಾಗಿ ನಿರ್ವಹಿಸಿ ಮಹಿಳೆಯರಿಗೆ ನ್ಯಾಯ ಸಿಗುವಂತಾಗಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

ಸರಕಾರಗಳು ಮೆಣಸು ಬೆಳೆಗಾರರ ಪರಿಸ್ಥಿತಿಗೆ ಸ್ಪಂದಿಸುತ್ತಿಲ್ಲ– ಎಐಕೆಎಸ್

ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಕೇಂದ್ರ ಬಿಜೆಪಿ ನೇತೃತ್ವದ ಸರಕಾರ, ಆಂಧ್ರಪ್ರದೇಶದ ಟಿಡಿಪಿ ನೇತೃತ್ವದ ಸರಕಾರ ಮತ್ತು ತೆಲಂಗಾಣದ ಟಿಆರ್‌ಎಸ್ ನೇತೃತ್ವದ ಸರಕಾರ ಈ ಎರಡು ರಾಜ್ಯಗಳ ಮೆಣಸು ಬೆಳೆಗಾರರ ಶೋಚನೀಯ ಪರಿಸ್ತಿತಿಯನ್ನು ಉಪೇಕ್ಷಿಸಿವೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್)ಟೀಕಿಸಿದೆ.

ಆಂಧ್ರಪ್ರದೇಶದಲ್ಲಿ ರಾಜ್ಯ ಸರಕಾರದ ಸಲಹೆಯ ಮೇರೇಗೇ ರೈತರು ಹತ್ತಿಯ ಬದಲು ಮೆಣಸು ಬೆಳೆಯಲು ಮುಂದಾದದ್ದು. ಬರದ ಪರಿಸ್ತಿತಿಯಿದ್ದರೂ ರೈತರು ದೊಡ್ಡ ಪ್ರಮಾಣದಲ್ಲಿ ಹಣ ಹೂಡಿದರು. ಕೇವಲ ನೀರಿಗಾಗಿಯೇ ಎಕ್ರೆಗೆ 25,000 ರೂ. ಖರ್ಚು ಮಾಡಿದರು. ಬಂಪರ್ ಬೆಳೆ ಬಂತು.. ಉತ್ಪಾದನೆ ಆಂಧ್ರದಲ್ಲಿ ಕಳೆದ ವರ್ಷದ 80ಲಕ್ಷ ಕ್ವಿಂಟಾಲ್ ದಾಟಿ 93ಕ್ವಿಂಟಾಲ್ ಆಗಿದೆ. ತೆಲಂಗಾಣದಲ್ಲೂ 40ಲಕ್ಷ ಕ್ವಿಂಟಾಲ್ ಉತ್ಪಾದನೆಯಾಗಿದೆ.

ಆದರೆ ಇವನ್ನು ಮಾರುವಲ್ಲಿ ಕೇಂದ್ರ ಸರಕಾರ ಅಬ್ಬರದ 'ಮಾರ್ಕೆಟ್ ಇಂಟರ್‌ವೆನ್ಶನ್(ಅಂದರೆ ಮಧ್ಯಪ್ರವೇಶ) ಸ್ಕೀಮ್(ಎಂಐಎಸ್) ಪ್ರಯೋಜನಕ್ಕೆ ಬಂದಿಲ್ಲ. ಸರಾಸರಿ ಗುಣ ಮಟ್ಟ(ಎಫ್‌ಎಕ್ಯು) ಆಂದ್ರಪ್ರದೇಶದಲ್ಲಿ ಕೇವಲ 8.83 ಲಕ್ಷ ಕ್ವಿಂಟಾಲ್‌ಗೆ ಮಾತ್ರ ಹಾಗೂ ತೆಲಂಗಾಣದಲ್ಲಿ 3.37ಲಕ್ಷ ಕ್ವಿಂಟಾಲ್‌ಗೆ ಮಾತ್ರ ಅನ್ವಯವಾಗುತ್ತದೆ.

ಅಂದರೆ ಈಗ ಕೇಂದ್ರ ಸರಕಾರ ಒಟ್ಟು ಉತ್ಪನ್ನದ 10% ದಷ್ಟನ್ನು ಮಾತ್ರ, ಅದೂ ರೈತರು ಈಗಾಗಲೇ ಪಡೆಯುತ್ತಿರುವ ಬೆಲೆಗಿಂತಲೂ ಕಡಿಮೆ ಬೆಲೆಗೆ ಖರೀದಿಸುತ್ತದೆ.

ರೈತರ ಉತ್ಪಾದನಾ ಖರ್ಚೇ ಕ್ವಿಂಟಾಲಿಗೆ 7500ರೂ.ಗಿಂತ ಹೆಚ್ಚು.. ಆದರೆ ಪ್ರಕಟಿಸಿರುವ ಬೆಲೆ ಕೇವಲ 5000ರೂ. ಕ್ವಿಂಟಾಲಿಗೆ. ಆಂಧ್ರಪ್ರದೇಶ ಸರಕಾರ ಇನ್ನೂ 1500 ರೂ.ಕ್ವಿಂಟಾಲಿಗೆ ಕೊಡುವುದಾಗಿ ಹೇಳಿದೆ. ಆದರೆ ಅದೂ ಮಧ್ಯಸ್ಥಿಕೆದಾರರಿಂದಾಗಿ ರೈತರಿಗೆ ತಲುಪುವುದಿಲ್ಲ. ರೈತರು ತಾವು ಹಾಕಿದ ಹಣವನ್ನಾದರೂ ಹಿಂದಕ್ಕೆ ಪಡೆಯಲೂ ಆಗುತ್ತಿಲ್ಲ.. ಕಳೆದ ವರ್ಷ ತೇಜ ರಫ್ತು ಮಾದರಿ ಮೆಣಸಿಗೆ ಬೆಲೆ ಕ್ವಿಂಟಾಲಿಗೆ 13,000ರೂ. ದಾಟಿತ್ತು ಚಿಲ್ಲ–335 ಎಂಬ ವಿಧದ ಬೆಲೆ ಕ್ವಿಂಟಾಲಿಗೆ 1500 ರೂ.ಗೆ ಕುಸಿದಿದೆ. ಇದರ ಉತ್ಪಾದನಾ ಖರ್ಚು ಕ್ವಿಂಟಾಲಿಗೆ 10,000 ರೂ.ದಷ್ಟು. ಬರದ ವರ್ಷವಾದ್ದರಿಮದ ಎಕ್ರೆವಾರು ಇಳುವರಿಯೂ ಕಡಿಮೆಯಾಗಿದೆ. ಇದ–ರಿಂದಾಗಿ ಏಶ್ಯಾದ ಅತಿ ದೊಡ್ಡ ಗುಂಟೂರು ಮಿರ್ಚಿ ಯಾರ್ಡ್‌ನಲ್ಲಿ ಮೆಣಸಿನ ಚೀಲಗಳು ರಾಶಿ ಬಿದ್ದಿವೆ ಎಂದು ಎಐಕೆಎಸ್ ಹೇಳಿದೆ.

ಇಂತಹ ಪರಿಸ್ಥಿತಿಗಳಲ್ಲಿ 3000ರೂ. ಹೆಚ್ಚುವರಿ ಸಾಗಾಣಿಕೆ/ನಿರ್ವಹಣಾ ವೆಚ್ಚಕ್ಕೆ ಅನುಗುಣವಾಗಿ ಕ್ವಿಂಟಾಲಿಗೆ ಕನಿಷ್ಟ 10ರಿಂದ 15 ಸಾವಿರ ರೂ. ಕೊಡಬೇಕು ಎಂದು ಎಐಕೆಎಸ್ ಆಗ್ರಹಿಸಿದೆ. ರೈತರ ಎಲ್ಲ ಉತ್ಪನ್ನಗಳನ್ನು ವಿಶೇಷ ಮುತುವರ್ಜಿ ವಹಿಸಿ ಖರೀದಿಸಬೇಕು. ಎಂದೂ ಅದು ಆಗ್ರಹಿಸಿದೆ.

ಸ್ವಾಮಿನಾಥನ್ ಆಯೋಗದ ಪ್ರಕಾರ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆ ಕೊಡುವ ಚುನಾವಣಾ ಪ್ರಣಾಳಿಕೆಯ ವಚನವನ್ನು ಬಿಜೆಪಿ ಪಾಲಿಸುತ್ತಿಲ್ಲ.

ಬೆಲೆ ಸ್ಥಿರೀಕರಣ ನಿಧಿಯ ಮಾತು ಕೂಡ ಕೇವಲ ಕಾಗದದ ಮೇಲೆಯೇ ಉಳಿದಿದೆ.

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಶೋಚನೀಯವಾಗಿ ಸೋತಿದೆ, ಕೇವಲ ವಿಮಾಕಂಪನಿಗಳಿಗೆ ಅಪಾರ ಲಾಭಗಳನ್ನಷ್ಟೇ ಅದು ಕೊಟ್ಟಿದೆ. ಏಕೆಂದರೆ ಈ ಯೋಜನೆ ಬೆಳೆ ನಷ್ಟದ ಪ್ರಶ್ನೆಯಲ್ಲಿ ಇಳುವರಿ ಮತ್ತು ಆದಾಯದ ನಷ್ಟವನ್ನು ಭರ್ತಿ ಮಾಡುವ ಮತ್ತು ಬೆಲೆ ಕುಸಿತದಿಂದಾಗಿ ಆದಾಯ ಇಳಿಕೆಯನ್ನು ಭರ್ತಿ ಮಾಡುವ ಹಾಗೂ ಗೇಣಿದಾರ ರೈತರನ್ನೂ ಫಲಾನುಭವಿಯಾಗಿಸುವ ಅಂಶಗಳು ಇದರಲ್ಲಿ ಇಲ್ಲ. ಇದನ್ನು ಸೇರಿಸಬೇಕು ಎಂದು ಎಐಕೆಎಸ್ ಆಗ್ರಹಿಸುತ್ತಲೇ ಬಂದಿದೆ.

ಈಗಿರುವ ವಿಮಾಯೋಜನೆಯನ್ನು ರದ್ದು ಮಾಡಿ ರೈತ–ಪರ ಪಾಲಸಿಯೊಂದನ್ನು ವಿಕಾಸಗೊಳಿಸಬೇಕು ಎಂದು ಆಗ್ರಹಿಸಿರುವ ಎಐಕೆಎಸ್, ಈ ಎರಡು ರಾಜ್ಯಗಳ ಘಟಕಗಳು ಈ ಪ್ರಶ್ನೆಗಳ ಮೇಲೆ ವಿಶಾಲ ಐಕ್ಯತೆಯನ್ನು ಕಟ್ಟಿ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ಕರೆ ನೀಡಿದೆ.

ಭಾರತ ಉಪಖಂಡದಲ್ಲಿ ಮೂಲಭೂತವಾದಿ ಶಕ್ತಿಗಳ ವಿರುದ್ಧ ಪ್ರತಿರೋಧಗಳಿಗೆ ದೃಢ ಬೆಂಬಲ– ಎಸ್‌ಎಫ್‌ಐ

ಭಾರತ ಉಪಖಂಡದಲ್ಲಿ ಪ್ರಬಲ ಧರ್ಮಗಳ ಧಾರ್ಮಿಕ ಮೂಲಭೂತವಾದ ಬೆಳೆಯುತ್ತಿದೆ. ಇದನ್ನು ಎದುರಿಸಲು ಇಡೀ ಉಪಖಂಡದ ಎಲ್ಲ ಪ್ರಗತಿಶೀಲ ಶಕ್ತಿಗಳಿಗೆ ಬೆಂಬಲ ಮತ್ತು ಸೌಹಾರ್ದ ನೀಡುವುದಾಗಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ಕೇಂದ್ರ ಕಾರ್ಯದರ್ಶಿ ಮಂಡಳಿ ಹೇಳಿದೆ.

ಬಾಂಗ್ಲಾದೇಶ್‌ನಲ್ಲಿ ಜಾತ್ಯತೀತ ಮತ್ತು ವಿಚಾರವಾದಿ ಬ್ಲಾಗರ್‌ಗಳನ್ನು ಬಡಿದು ಸಾಯಿಸುವ ಘಟನೆಗಳು ನಡೆದಿವೆ. ಪ್ರತಿಗಾಮಿ ಶಕ್ತಿಗಳ ವಿರುದ್ಧದ ಶಹಬಾಗ್ ಆಂದೋಲನ್ ಪ್ರಮುಖರೊಂದಿಗೂ ಎಲ್ಲಡೆ ಪ್ರತಿಗಾಮಿ ಶಕ್ತಿಗಳು ಇದೇ ರೀತಿಯಲ್ಲಿ ವರ್ತಿಸಿವೆ.

ಪಾಕಿಸ್ತಾನದಲ್ಲಿ ಧರ್ಮದ್ರೋಹ ಬಗೆದನೆಂದು ಅಬ್ದುಲ್ ವಾಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಮಶಾಲ್ ಖಾನ್ ಹತ್ಯೆ, ಸೂಫಿ ಸಂಗೀತಗಾರರಾದ ಸಬ್ರಿ ಸೋದರರ ಕೊಲೆ ಮತ್ತು ಇತ್ತೀಚೆಗೆ ಅಲ್ಲಿನ ಕಾರ್ಮಿಕ ವರ್ಗದ ಹೋರಾಟಗಳ ಪ್ರಮುಖ ವ್ಯಕ್ತಿ ಫೈಝುರ್ ರಹಮಾನ್ ಮೇಲೆ ಬೆದರಿಕೆಗಳು ಬರುತ್ತಿವೆ.

ಭಾರತದಲ್ಲಿ ನಾವು ಪ್ರಭುತ್ವವೇ ಪ್ರಾಯೋಜಿಸುತ್ತಿರುವ ಅಸಹಿಷ್ಣುತೆಯನ್ನು ಕಾಣುತ್ತಿದ್ದೇವೆ. ಗೋರಕ್ಷಣೆಯ ಹೆಸರಲ್ಲಿ ಅಲ್ಪಸಂಖ್ಯಾತರ ಬೇಟೆ ನಡೆಸಲಾಗುತ್ತಿದೆ. ಮೊನ್ನೆ ಅಖ್ಲಾಖ್, ನಿನ್ನೆ ಪೆಹ್ಲೂ ಖಾನ್ ಹತ್ಯೆ ಹೀಗೆಯೇ ಸಾಗಿದೆ.

ಈ ಎಲ್ಲ ಭೀಕರ ಹತ್ಯೆಗಳು, ಮಾತ್ರವಲ್ಲ ಈ ಬಗ್ಗೆ ಸರಕಾರಗಳ ಮತ್ತು ಆಳುವ ಪಕ್ಷಗಳ ಉಪೇಕ್ಷೆ ಪರಿಸ್ಥಿತಿಯನ್ನು ಮತ್ತಷ್ಟು ಆತಂಕಕಾರಿಯಾಗಿಸಿದೆ ಎಂದಿರುವ ಎಸ್‌ಎಫ್‌ಐ ನಮ್ಮ ಉಪಖಂಡದ ಪ್ರಗತಿಪರ ಶಕ್ತಿಗಳೆಲ್ಲ ಒಂದಾಗಿ ಒಂದು ಧೀರ ಹೋರಾಟ ನಡೆಸಬೇಕಾಗಿದೆ ಎಂದಿದೆ.

ದಕ್ಷಿಣ ಏಶ್ಯಾದಾದ್ಯಂತ ವಿದ್ಯಾರ್ಥಿಗಳು ನವ–ಉದಾರವಾದಿ ಆಳ್ವಿಕೆಗಳ ಅಡಿಯಲ್ಲಿ ನಲುಗಿ ಹೋಗಿದ್ದಾರೆ. ಕಾರ್ಪೊರೇಟ್ ಬೆಂಬಲಿತ ರಾಷ್ಟ್ರೀಯ ಸರಕಾರಗಳು ಗುಣಮಟ್ಟದ ಶಿಕ್ಷಣ ಒದಗಿಸುವ ಬದಲು ದ್ವೇಷ ಮತ್ತು ವಿಭಜನೆಯ ರಾಜಕೀಯಕ್ಕೆ ಪ್ರೋತ್ಸಾಹ ನೀಡುತ್ತಿವೆ, ಆಮೂಲಕ ಯುವಜನರ ದಾರಿ ತಪ್ಪಿಸಿ ತಮ್ಮ ವಿಫಲತೆಗಳನ್ನು ಮುಚ್ಚಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ.

ಆದರೆ ವಿದ್ಯಾರ್ಥಿಗಳು ಮತ್ತೆ–ಮತ್ತೆ ಇದ–ಕ್ಕೆ ಪ್ರತಿರೋಧ ತೋರಿಸಿದ್ದಾರೆ, ಜನಸಾಮಾನ್ಯರ ಪ್ರತಿರೋಧಗಳು ಕೂಡ ಬಲಗೊಳ್ಳುತ್ತಿವೆ ಎಂದಿರುವ ಎಸ್‌ಎಫ್‌ಐ ಪಾಕಿಸ್ತಾನ ಮತ್ತು ಬಾಂಗ್ಲದೇಶದ ಎಲ್ಲ ವಿದ್ಯಾರ್ಥಿಗಳಿಗೆ ಮೂಲಭೂತವಾದಿ, ಪ್ರತಿಗಾಮಿ ಶಕ್ತಿಗಳ ವಿರುದ್ಧ ಅವರ ಪ್ರತಿರೋಧಗಳಲ್ಲಿ ಎಸ್‌ಎಫ್‌ಐ ದೃಢಬೆಂಬಲಕ್ಕೆ ನಿಲ್ಲುತ್ತದೆ ಎಂದು ಅತ್ಯಂತ ಸ್ಪಷ್ಟವಾಗಿ ಸಾರುವುದಾಗಿ ಹೇಳಿದೆ.

ಮಾತೆಂದರೆ ಇದು



"ಮನುಷ್ಯನ ಯೋಚನೆಯನ್ನು ಬದಲಾವಣೆ ಮಾಡುವುದರಿಂದ ಏನನ್ನೂ ಸಾಧಿಸಿದಂತಾಗುವುದಿಲ್ಲ; ನಿಜವಾಗಿ ಬದಲಾವಣೆ ಮಾಡಬೇಕಾಗಿರುವುದು ಮನುಷ್ಯನ ಬದುಕಿನ ಪರಿಸ್ಥಿತಿಯನ್ನು".

– ಕಾರ್ಲ್ ಮಾರ್ಕ್ಸ್

ಸಹರಾಣಪುರದಲ್ಲಿ ದಲಿತರ ಮನೆಗಳು ಭಸ್ಮ: ತ್ವರಿತ ತನಿಖೆ ಮತ್ತು 20 ಲಕ್ಷ ರೂ. ಪರಿಹಾರಕ್ಕೆ ಡಿಎಸ್‌ಎಂಎಂ ಆಗ್ರಹ

ಉತ್ತರಪ್ರದೇಶದ ಸಹರಾಣಪುರದ ಶಬ್ಬಿರ್‌ಪುರ್ ಗ್ರಾಮದಲ್ಲಿ ಮೇ 5ರಂದು ಒಬ್ಬನ ಸಾವು ಹಾಗೂ 60ಕ್ಕೂ ಹೆಚ್ಚು ದಲಿತರ ಮನೆಗಳ ಭಸ್ಮದ ಘಟನೆಯ ನಂತರ ಈ ಗ್ರಾಮದ ದಲಿತರ ಕೇರಿಗಳು ಸ್ಮಶಾನ ದಂತಾಗಿವೆ. ಬಹಳಷ್ಟು ಕುಟುಂಬಗಳು ಭಯದಿಂದ ಊರು ಬಿಟ್ಟು ಹೋಗಿವೆ. ದಲಿತರಿಗೆ ಒಂದೆಡೆ ಮೇಲ್ಜಾತಿ ಥಾಕುರ್‌ಗಳ ಭಯವಾದರೆ, ಇನ್ನೊಂದೆಡೆಯಲ್ಲಿ ಪೋಲೀಸರು ತಮ್ಮನ್ನು ವಿವಿಧ ಕೇಸುಗಳಲ್ಲಿ ಸಿಗಿಸಿ ಹಾಕಬಹುದು ಎಂಬ ಭಯ.

ವಾಸ್ತವವಾಗಿ ಮೇ 5 ರ ಘಟನೆ ನಡೆದದ್ದು ದಲಿತರು ಥಾಕುರ್‌ಗಳ ಮೆರವಣಿಗೆಯ ಮೇಲೆ ಹಲ್ಲೆ ಮಾಡಿದರೆಂಬ ಸುಳ್ಳು ಸುದ್ದಿಯನ್ನು ಹರಡಿಸಿದ್ದರಿಂದಾಗಿ ಹಾಗೂ ಈ ಗಲಭೆಯಲ್ಲಿ ಸತ್ತ ಥಾಕುರ್ ಹುಡುಗ ದಲಿತರ ಹಲ್ಲೆಯಿಂದಾಗಿ ಸತ್ತದ್ದು ಅಲ್ಲ ಎಂದು ವೈದ್ಯಕೀಯ ತಪಾಸಣೆಯಿಂದ ತಿಳಿದು ಬಂದರೂ ಪೋಲೀಸರು ಗ್ರಾಮದ ದಲಿತರ ಮೇಲೆ ಕೊಲೆಯ ಕೇಸ್ ಹಾಕಿದ್ದಾರೆ, ಆದರೆ 60 ಕ್ಕೂ ಹೆಚ್ಚು ಮನೆಗಳನ್ನು ಸುಟ್ಟ ಥಾಕುರ್‌ಗಳ ಮೇಲೆ ಒಂದೂ ಕೇಸ್ ಹಾಕಿಲ್ಲ. ದಲಿತರು ಒಂದು ಎಫ್‌ಐಆರ್ ಹಾಕಿದ್ದರೆ, ಥಾಕುರ್‌ಗಳು ನಾಲ್ಕು ಎಫ್‌ಐಆರ್ ಹಾಕಿದ್ದಾರೆ ಎಂದು ತಿಳಿದು ಬಂದಿದೆ.

ಸರಕಾರ ಮತ್ತು ಪೋಲೀಸರು ಯಾವುದೇ ಹೊರಗಿನ ಸಂಘಟನೆಗಳ ಪ್ರತಿನಿಧಿಗಳು ಈ ಗ್ರಾಮಕ್ಕೆ ಭೇಟಿ ನೀಡಿ ಪೂರ್ಣ ಮಾಹಿತಿಗಳನ್ನು ಪಡೆಯಲು ಬಿಡುತ್ತಿಲ್ಲ. ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ)ನ ಒಂದು ನಿಯೋಗ ಈ ಘಟನೆಯಲ್ಲಿ ನೊಂದ ದಲಿತರನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದೆ. ಈ ನಿಯೋಗ ಸಂಗ್ರಹಿಸಿದ ಮಾಹಿತಿಗಳ ಪ್ರಕಾರ ಹಲವಾರು ದಲಿತರ ಮನೆಗಳು ಸುಟ್ಟು ಭಸ್ಮವಾಗಿದ್ದು, ಪೋಲೀಸರು ಈ ಗಲಭೆಗಳನ್ನು ತಡೆಯಲು ಸಾಧ್ಯವಿತ್ತು, ಈಗ ಬಿಜೆಪಿ ಸರಕಾರ ಬಂದ ಮೇಲೆ ಪಾಳೆಯಗಾರಿ ಶಕ್ತಿಗಳ ಪರವಾಗಿ ಕಾವಿ ಪಡೆಗಳ ಭರಾಟೆ ಹೆಚ್ಚಿರುವುದು ಕೂಡ ಈ ಘಟನೆಗೆ ಒತ್ತಾಸೆ ನೀಡಿದೆ.

ಡಿಎಸ್‌ಎಂಎಂ ಕೆಲವು ಪರಿಹಾರ ಸಾಮಗ್ರಿಗಳನ್ನು ಮತ್ತು ಸಣ್ಣ ಮೊತ್ತವನ್ನು ನೊಂದ ಕುಟುಂಬಗಳಿಗೆ ನೀಡಿದೆ. ಸರಕಾರ ಈ ಘಟನೆಯಿಂದ ಸಂತ್ರಸ್ತಗೊಂಡಿರುವ ಪ್ರತಿಯೊಂದು ಕುಟುಂಬಕ್ಕೆ 20 ಲಕ್ಷ ರೂ. ಪರಿಹಾರ ಕೊಡಬೇಕು ಮತ್ತು ತ್ವರಿತವಾಗಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದೆ.



ಬಗರ್‌ಹುಕುಂ ಸಕ್ರಮಕ್ಕಿರುವ ಅಡೆತಡೆ ನಿವಾರಿಸಿ

ಸಂಪಾದಕೀಯ

ಸರಕಾರಿ ಜಮೀನಿನಲ್ಲಿ ಸಾಗುವಳಿ ನಿರತ ಬಡವರ ಸಾಗುವಳಿಯನ್ನು ಸಕ್ರಮಗೊಳಿಸಿ ಅವರಿಗೆ ಹಕ್ಕುಪತ್ರ ನೀಡಬೇಕೆಂಬುದು ಬಡರೈತರ ದಶಕಗಳ ಒತ್ತಾಯ. ಅದನ್ನು ಹೆಚ್ಚು ಕಡಿಮೆ ನೀತಿಶಃ ಒಪ್ಪಿರುವ ಸರ್ಕಾರ ಅದರ ಜಾರಿಗೆ ಮಾತ್ರ ಮೀನ ಮೇಷ ಎಣಿಸುತ್ತಿದೆ. ಈಗಾಗಲೇ ಹಲವು ಕಾನೂನು ತೊಡಕುಗಳು ಇದ್ದವು. ಅದನ್ನು ರೈತಸಂಘಟನೆಗಳ ಚಳುವಳಿ ಒತ್ತಾಯಗಳಿಂದ ಒಂದೊಂದಾಗಿ ನಿವಾರಿಸಲಾಗುತ್ತಿದೆ. ಈಗಲೂ ಕೆಲವು ಇವೆ. ಆದರೆ ಕಾನೂನು ತೊಡಕಲ್ಲದೆ, ಆಡಳಿತಕ್ಕೆ ಸಂಬಂಧಿಸಿದ ಮತ್ತು ಅಕ್ರಮ-ಸಕ್ರಮ ಸಮಿತಿಗಳ ನಡಾವಳಿಕೆಗಳಿಂದಾಗಿಯೂ ಇದರ ಜಾರಿ ಮಂದಗತಿಯಲ್ಲಿ ಸಾಗಿದೆ.

ವಿವಿಧ ರೈತ, ದಲಿತ ಮತ್ತಿತರೇ ಪ್ರಜಾಸತ್ತಾತ್ಮಕ ಸಂಘಟನೆಗಳು ಮತ್ತು ಸ್ವತ: ರೈತರು, ಕೂಲಿಕಾರರು ಈ ಕುರಿತು ನಡೆಸುತ್ತಿರುವ ನಿರಂತರ ಹೋರಾಟದ ಪರಿಣಾಮವಾಗಿ, ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ದಶಸಾವಿರಗಟ್ಟಲೇ ಅರ್ಜಿಗಳನ್ನು ಕಳುಹಿಸಿ, ಸರಕಾರಿ ಭೂಮಿಯಲ್ಲಿ ಸಾಗುವಳಿನಿರತ ಬಡವರನ್ನು ಭೂಕಬಳಿಕೆ ನಿಷೇಧ ಕಾಯ್ದೆಯನ್ವಯ ಒಕ್ಕಲೆಬ್ಬಿಸದಂತೆ ತಡೆಯಲು ಮನವಿ ಮಾಡಿದ ಹಿನ್ನೆಲೆಯಲ್ಲಿ, ಬಡ ಸಾಗುವಳಿದಾರರೂ ಈಗಲೂ ಉಳಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಆದರೂ, ದಶಲಕ್ಷಾಂತರ ಬಡಕುಟುಂಬಗಳು ಸಾಗುವಳಿ ನಿರತ ಜಮೀನುಗಳಿಗೆ ಹಕ್ಕುಪತ್ರ ಪಡೆಯುವಂತಾಗಲೂ, ಹಲವು ಅಡೆತಡೆಗಳು ಇನ್ನೂ ಉಳಿದಿವೆ. 2009 ರವರೆಗೆ ರಾಜ್ಯಾದ್ಯಂತ ಫಾರಂ-50 ಮತ್ತು 53ರ ಮೂಲಕ ಸಲ್ಲಿಸಲಾದ ಒಟ್ಟು 21.84 ಲಕ್ಷ ಅರ್ಜಿಗಳಲ್ಲಿ ಅಕ್ರಮ-ಸಕ್ರಮ ಸಮಿತಿಗಳ ಭ್ರಷ್ಟಾಚಾರ, ಸಾಗುವಳಿ ನಿರತರ ಜಮೀನುಗಳನ್ನು ಗಣತಿ ಮಾಡಿ ಸಾಗುವಳಿ ಕಲಂಗಳಲ್ಲಿ ಸೇರ್ಪಡೆ ಮಾಡದಿರುವುದು, ಗೋಮಾಳ ಮತ್ತಿತರೇ ಜಮೀನುಗಳಿಗೆ ಹಕ್ಕುಪತ್ರ ನೀಡಲಿರುವ ಆತಂಕಗಳ ನಿವಾರಣೆಗೆ ಅಗತ್ಯ ಕ್ರಮವಹಿಸದೇ ಹೋದುದರಿಂದ, ಸುಮಾರು 32ಲಕ್ಷ ಎಕರೆ ಪ್ರದೇಶದ 13ಲಕ್ಷ ಕುಟುಂಬಗಳ ಅರ್ಜಿಗಳು ತಿರಸ್ಕರಿಸಲ್ಪಟ್ಟಿವೆ. ಹಲವೆಡೆ ಹಳ್ಳಕೆರೆ, ನದಿಬಯಲು, ಕುದುರೆಕಾವಲು, ಅಮೃತ ಮಹಲು, ಈಚಲು ವನ, ಕುಮ್ಕಿ, ಪೈಸಾರಿ, ಗುಂಡು ತೋಪು, ನಗರವ್ಯಾಪ್ತಿಯೊಳಗೆ ಬರುವ ಜಮೀನು, ಮುಂತಾದ ಹೆಸರಿನವುಗಳು ಸಾರ್ವಜನಿಕ ಸೇವಾ ವಲಯದವುಗಳೆಂದು ತಿರಸ್ಕರಿಸಲ್ಪಟ್ಟಿವೆ. ಇಂತಹ ಜಮೀನುಗಳನ್ನು ಕೈಗಾರಿಕೆ ಉದ್ದೇಶಗಳಿಗೆ ನೀಡುವಾಗ, ಅಡ್ಡಿಯಾಗದೆ, ಬಡಸಾಗುವಳಿದಾರರಿಗೆ ಹಕ್ಕುಪತ್ರ ನೀಡುವಾಗ ಮಾತ್ರವೇ, ಸಾರ್ವಜನಿಕ ಸೇವೆ ಎಂಬುದನ್ನು ಅಡ್ಡಿಯಾಗಿ ತೋರಿಸುತ್ತಿದ್ದಾರೆ. ಇವುಗಳ ಜೊತೆ ಇನ್ನೂ ಲಕ್ಷಾಂತರ ಸಾಗುವಳಿದಾರರು, ಅರ್ಜಿಗಳನ್ನೇ ವಿವಿಧ ಕಾರಣಗಳಿಗಾಗಿ ಸಲ್ಲಿಸಲು ಸಾಧ್ಯವಾಗಿಲ್ಲ.

ಈ ಹಿಂದೆ ಕಂದಾಯ ಇಲಾಖೆಯಿಂದ, ಅರಣ್ಯ ಇಲಾಖೆಗೆ ವರ್ಗಾಯಿಸಲಾದ ಜಮೀನುಗಳ ಸಾಗುವಳಿಯಲ್ಲಿ ತೊಡಗಿದ್ದ ಮತ್ತು ಈ ಇಲಾಖೆಗಳಿಂದ ಬಲವಂತವಾಗಿ ಒಕ್ಕಲೆಬ್ಬಿಸಲ್ಪಟ್ಟ ಸಾವಿರಾರು ಕುಟುಂಬಗಳಿಗೆ, ಆ ಜಮೀನುಗಳನ್ನು ಅವರಿಗೆ ವಾಪಾಸು ನೀಡುವ ಕ್ರಮವನ್ನೂ ಸೂಚಿಸಲಾಗಿಲ್ಲ.

ಒಟ್ಟಾರೆ, ಈ ಎಲ್ಲಾ ಕುಟುಂಬಗಳ ಆತಂಕ ನಿವಾರಣೆಗೆ ಮತ್ತು ಹಕ್ಕುಪತ್ರ ದೊರೆಯುವಂತೆ ಭೂಕಂದಾಯ ಕಾನೂನಿಗೆ ಅಗತ್ಯ ತಿದ್ದುಪಡಿ ಮಾಡಿ ಹೊಸದಾಗಿ ಅರ್ಜಿ ಹಾಕಲು ಅಗತ್ಯ ಕ್ರಮವಹಿಸಬೇಕು.

ಅಲ್ಲದೆ, ಈಚೆಗೆ ಗೋಮಾಳ ಜಮೀನಿಗೆ ಹಕ್ಕುಪತ್ರ ನೀಡಲಾಗುವುದೆಂಬ ತಿದ್ದುಪಡಿಯನ್ನು ಪ್ರಶ್ನಿಸಿ, ಕೆಲವರು ಉಚ್ಚನ್ಯಾಯಾಲದ ಮೊರೆ ಹೋಗಿ, ತಡೆಯಾಜ್ಞೆ ತಂದಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ರಾಜ್ಯಸರಕಾರ ಅಂಗೀಕರಿಸಿದ ಭೂಕಬಳಿಕೆ ನಿಷೇಧ ಕಾಯ್ದೆಯು ಕೂಡಾ ಈ ಎಲ್ಲಾ ಬಡಸಾಗುವಳಿದಾರರಿಗೆ ದೊಡ್ಡ ಆತಂಕವಾಗಿಯೇ ಉಳಿದಿದೆ. ಈ ಕಾಯ್ದೆಯು ಕಾನೂನುಬದ್ಧವಾಗಿ ಪರವಾನಿಗೆ ಪಡೆಯದ ಎಲ್ಲಾ ರೀತಿಯ ಒತ್ತುವರಿದಾರರನ್ನು ಭೂಕಬಳಿಕೆದಾರರೆಂದು ಕರೆದು, ಲೂಟಿಕೋರ ಭೂಮಾಫಿಯಾಗಳನ್ನು ಮತ್ತು ಈ ಅನ್ನದಾತರನ್ನು ಒಂದೇ ತಕ್ಕಡಿಯಲ್ಲಿ ತೂಗಿದೆ. ಈ ಕಾಯ್ದೆಗೆ ಅಗತ್ಯ ತಿದ್ದುಪಡಿ ಮಾಡಬೇಕಾಗಿದೆ.

ಅರಣ್ಯಹಕ್ಕು ಮಾನ್ಯತಾ ಕಾಯ್ದೆ-2006ರಂತೆ, ಅರಣ್ಯಭೂಮಿ ಹಕ್ಕಿಗಾಗಿ ಅರ್ಜಿಸಲ್ಲಿಸಲ್ಪಟ್ಟ ಲಕ್ಷಾಂತರ ಕುಟುಂಬಗಳಲ್ಲಿನ ಇತರೇ ಅರಣ್ಯವಾಸಿಗಳು, 75 ವರ್ಷಗಳ ಅನುಭವದ ಆಧಾರವನ್ನು ಒದಗಿಸಬೇಕೆಂಬ ಷರತ್ತಿನಿಂದಾಗಿ, ಭೂಮಿಯ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಕೇಂದ್ರ ಸರಕಾರ ಅರಣ್ಯಹಕ್ಕು ಮಾನ್ಯತಾ ಕಾಯ್ದೆ- 2006ರ ಈ ಅಂಶಕ್ಕೆ ತಿದ್ದುಪಡಿಯನ್ನು ಮಾಡಬೇಕಾಗಿದೆ. ಈ ಕಾಯ್ದೆ ಬರುವ ಪೂರ್ವದಲ್ಲಿ ಅವರು ಅರಣ್ಯವಾಸಿಗಳಾಗಿದ್ದಲ್ಲಿ ಅಂತಹವರಿಗೆ ಹಕ್ಕುಪತ್ರ ನೀಡುವಂತೆ ಅಗತ್ಯ ತಿದ್ದುಪಡಿಗೆ ಕ್ರಮವಹಿಸಬೇಕಾಗಿದೆ.

ರಾಜ್ಯದಲ್ಲಿ ಲಕ್ಷಾಂತರ ಎಕರೆ ಜಮೀನನ್ನು ರೈತರಿಂದ ಬಲವಂತವಾಗಿ ಮತ್ತು ಅತ್ಯಂತ ಕಡಿಮೆ ಬೆಲೆಗೆ ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಭೂಸ್ವಾಧೀನಗೊಂಡು 08-10ವರ್ಷಗಳಾಗುತ್ತಿದ್ದರೂ, ಕೈಗಾರಿಕೆಗಳು ನಿರ್ಮಾಣವಾಗದೇ, ಉದ್ಯೋಗವೂ ಇಲ್ಲದೇ ಈ ಸಾವಿರಾರು ಕುಟುಂಬಗಳು ತೊಂದರೆಯನ್ನನುಭವಿಸುತ್ತಿವೆ. ಈ ರೀತಿ ಸ್ವಾಧೀನ ಪಡಿಸಿಕೊಳ್ಳಲಾದ ಜಮೀನುಗಳಲ್ಲಿ ದಶಸಾವಿರಗಳಷ್ಟು ಎಕರೆ ಪ್ರದೇಶ ಬಡರೈತರು ಸಾಗುವಳಿಯಲ್ಲಿ ತೊಡಗಿದ್ದ ಸರಕಾರಿ ಜಮೀನಾಗಿದ್ದು ಬಹುತೇಕ ಕಡೆ ಈ ಬಡ ಕುಟುಂಬಗಳಿಗೆ ಒಂದೇ ಒಂದು ನಯಾಪೈಸೆ ಪರಿಹಾರವನ್ನು ಮತ್ತು ಉದ್ಯೋಗವನ್ನು ನೀಡಿಲ್ಲ. ಈ ಕುಟುಂಬಗಳ ರಕ್ಷಣೆಗೆ ರಾಜ್ಯ ಸರಕಾರ ಮುಂದಾಗುತ್ತಿಲ್ಲ.

2020ರೊಳಗೆ ಕರ್ನಾಟಕ ಸರಕಾರದ ದೂರದೃಷ್ಠಿ ಯೋಜನೆಯಂತೆ, ಶೇ 30ಕ್ಕಿಂತಲೂ ಹೆಚ್ಚಿನ ಜನರನ್ನು ಕೃಷಿ ಹಾಗೂ ಗ್ರಾಮೀಣ ಪ್ರದೇಶದಿಂದ ಹೊರ ಹಾಕುವ ಯೋಜನೆಗಳು ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಂಪೆನಿ ಕೃಷಿ, ಗುತ್ತಿಗೆ ಕೃಷಿಗಳ ಕುರಿತು ಕ್ರಮವಹಿಸುತ್ತಿರುವಾಗ, ಈ ಎಲ್ಲ ಆತಂಕಕಾರಿ ಬೆಳವಣಿಗೆಗಳನ್ನು ಈ ಎಲ್ಲದರ ಹಿನ್ನೆಲೆಯಲ್ಲಿಯೇ, ನೋಡಬೇಕಾಗುತ್ತದೆ.

ಒಟ್ಟಾಗಿ ನೋಡುವಾಗ, ಬಗರ್ ಹುಕುಂ ಸಕ್ರಮದ ಬಗ್ಗೆ ಸರಕಾರದ ಕಾನೂನು/ಆಡಳಿತಾತ್ಮಕ ಅಡೆತಡೆಗಳನ್ನು ನಿವಾರಿಸುವಲ್ಲಿ ಅಸಡ್ಡೆ, ವಿಳಂಬ, ಹೊಸ ಅಡೆತಡೆಗಳನ್ನು ಹುಟ್ಟು ಹಾಕುವುದು ಇತ್ಯಾದಿ ಆಕಸ್ಮಿಕ ಅಲ್ಲ. ಆಳುವ ವರ್ಗಗಳ ಉದ್ದೇಶಪೂರ್ವಕ ಮತ್ತು ವ್ಯವಸ್ಥಿತ ಯೋಜನೆಯ ಭಾಗವಾಗಿರುವಂತಿದೆ. ಈ ಯೋಜನೆಯನ್ನು ಬಯಲುಗೊಳಿಸಿ ಸೋಲಿಸಲು ರೈತರು ಮತ್ತು ಎಲ್ಲಾ ಪ್ರಜಾಸತ್ತಾತ್ಮಕ ಸಂಘಟನೆಗಳು ಅಗತ್ಯ ಕ್ರಮವಹಿಸಬೇಕು. ತಕ್ಷಣಕ್ಕೆ ಸರಕಾರಿ ಜಮೀನು ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ಲೂಟಿಕೋರ ಭೂಮಾಫಿಯಾ ಶಕ್ತಿಗಳ ಕೈಗೆ ಪರಭಾರೆಯಾಗದಂತೆ ತಡೆಯಲು ಐಕ್ಯ ಚಳುವಳಿಯನ್ನು ಬಲಗೊಳಿಸಬೇಕು.

ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ಪ್ರತಿರೋಧಕ್ಕೆ ಸಿಪಿಐ(ಎಂ) ಕರೆ

ಪ್ರಚಾರಾಂದೋಲನ ವಾರ, ಮೇ 25 ರಂದು ಪ್ರತಿಭಟನೆ

"ಆಹಾರ ಭದ್ರತೆಯನ್ನು ಬಲಪಡಿಸಿ" **"ಉದ್ಯೋಗ ಖಾತ್ರಿ ಯೋಜನೆಯನ್ನು ವ್ಯಾಪಕಗೊಳಿಸಿ"**

"ಸಾರ್ವಜನಿಕ ರಂಗದ ಖಾಸಗೀಕರಣ ನಿಲ್ಲಿಸಿ" **"ಬಾಧಿತ ರೈತ-ಕೂಲಿಕಾರರ ಸಾಲ ಮನ್ನಾ ಮಾಡಿ"**

"ಕೃಷಿ ಉತ್ಪಾದನಾ ವೆಚ್ಚಕ್ಕೆ ಶೇ 50 ಲಾಭಾಂಶ ಸೇರಿದ ಕನಿಷ್ಠ ಬೆಂಬಲ ಬೆಲೆ ಖಾತರಿಪಡಿಸಿ"

ಈ ಮೇಲಿನ 5 ಪ್ರಮುಖ ಹಕ್ಕೊತ್ತಾಯಗಳೊಂದಿಗೆ ರಾಜ್ಯಾದ್ಯಂತ ಮೇ 25ರಂದು ಪ್ರತಿಭಟನೆ ಮತ್ತು ಅದಕ್ಕೆ ಪೂರ್ವಭಾವಿಯಾಗಿ ವ್ಯಾಪಕ ಪ್ರಚಾರಾಂದೋಲನ ವಾರ ನಡೆಸಲು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

ಎಲ್ಲರಿಗೂ ಒಳ್ಳೆಯ ದಿನಗಳನ್ನು ತರುವುದಾಗಿ ಹೇಳಿ, ಅಧಿಕಾರವನ್ನು ಪಡೆದ ಬಿಜೆಪಿ ಕೇಂದ್ರದಲ್ಲಿ ಸರಕಾರ ರಚಿಸಿ 1000 ದಿನಗಳನ್ನು ಪೂರೈಸಿದೆ. ಆದರೆ ದುಡಿಯುವ ಜನತೆಗೆ ಮಾತ್ರ ಒಳ್ಳೆಯ ದಿನಗಳು ಬರಲಿಲ್ಲ. ಅದು ಚುನಾವಣೆಯಲ್ಲಿ ದೇಶದ ಜನತೆಗೆ ನೀಡಿದ ಭರವಸೆಗಳು ಹುಸಿಯಾಗಿವೆ.. 100 ದಿನದೊಳಗೆ ವಿದೇಶದಲ್ಲಿರುವ ಕಪ್ಪು ಹಣವನ್ನು ಹೊರಗೆಳೆದು ಎಲ್ಲರ ಬ್ಯಾಂಕ್ ಖಾತೆ-ಗೆ ತಲಾ 15 ಲಕ್ಷ ಹಾಕಲಾಗುವುದೆಂಬ ಮಾತು ಮಾತಾಗಿಯೇ ಉಳಿದಿದೆ. ಕನಿಷ್ಠ ಆ ಕಡೆ ಹೊರಳಿ ಕೂಡಾ ನೋಡುತ್ತಿಲ್ಲ. ದೇಶದಲ್ಲಿನ ಕಪ್ಪು ಹಣ ಹೊರತೆಗೆಯುವುದಾಗಿ ಹೇಳಿ ಸಾಮಾನ್ಯ ಜನತೆಯ ಮೇಲೆ ದಾಳಿ ಮಾಡಿದೆ.

ಪ್ರತಿವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡಲಿಲ್ಲ. ಬದಲಿಗೆ ಇರುವ ಉದ್ಯೋಗಗಳನ್ನು ಕಿತ್ತುಕೊಳ್ಳಲಾಗುತ್ತಿದೆ. ಉತ್ತರ ಪ್ರದೇಶದ ಬಿಜೆಪಿ ಸರಕಾರ ಕಾನೂನುಬಾಹಿರ ಕಸಾಯಿ ಖಾನೆಗಳನ್ನು ಮುಚ್ಚುವ ಹೆಸರಿನಲ್ಲಿ ನಡೆಸಿದ ಮಾಂಸದ ವ್ಯಾಪಾರದ ಮೇಲಿನ ದಾಳಿಗಳು ಸುಮಾರು 25 ಲಕ್ಷ ಉದ್ಯೋಗಗಳನ್ನು ಕಿತ್ತುಕೊಂಡಿದೆ. ಸಾರ್ವಜನಿಕ ರಂಗದ ಕೈಗಾರಿಕೆಗಳನ್ನು ಖಾಸಗೀಕರಿಸುವ ಮೂಲಕ ಹಾಗೂ ವಿದೇಶಿ ಸರಕುಗಳ ಆಮದು ಮೂಲಕ ಕೋಟ್ಯಾಂತರ ಉದ್ಯೋಗಗಳನ್ನು ನಾಶಮಾಡಿದೆ.

ಸಾರ್ವಜನಿಕರಂಗವನ್ನುದುರ್ಬಲಗೊಳಿಸುವುದು ಮತ್ತು ಖಾಸಗೀಕರಿಸುವುದನ್ನು ವ್ಯಾಪಕ ಗೊಳಿಸು ವುದರಿಂದ ದಲಿತರು, ಹಿಂದುಳಿದವರು, ವಿಕಲಾಂಗರು ಮುಂತಾದವರಿಗೆ ಮೀಸಲಾತಿಯ ಮೂಲಕ ದೊ-ರೆಯುತ್ತಿದ್ದ ಉದ್ಯೋಗ ಗಳು ಇಲ್ಲವಾಗುತ್ತವೆ. ಪ್ರತಿವರ್ಷ 1.50 ಕೋಟಿಗೂ ಅಧಿಕ ವಿದ್ಯಾವಂತ ಯುವ ಉದ್ಯೋಗಾ ಕಾಂಕ್ಷಿಗಳು ಶೈಕ್ಷಣಿಕ ಸಂಸ್ಥೆಗಳಿಂದ ಹೊರ ಬರುತ್ತಿರುವಾಗ ಕೇಂದ್ರ ಸರಕಾರದ ಉದ್ಯೋಗ ಸೃಷ್ಠಿ ಮಾತ್ರ ಪ್ರತಿವರ್ಷ ಕೇವಲ 1.30ಲಕ್ಷ ಮಾತ್ರವೇ ಆಗಿದೆ.

ಕೃಷಿಯೊಳಗಿನ ಯಾಂತ್ರೀಕರಣ ಮತ್ತು ಆಧುನೀಕರಣ ಹಾಗೂ ಆಮದು ನೀತಿಯಿಂದಾಗಿ ಕೃಷಿರಂಗದಲ್ಲಿ ಉದ್ಯೋಗಾವಕಾಶಗಳು ವ್ಯಾಪಕವಾಗಿ ಕಡಿತಗೊಳ್ಳುತ್ತಿರುವಾಗ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಬಲಪಡಿಸುವ ಬದಲು ದುರ್ಬಲಗೊಳಿಸಲಾಗುತ್ತಿದೆ. ನಗರಗಳಿಗೂ ಮತ್ತು ಎಲ್ಲೆಡೆ 200 ದಿನಗಳ ಉದ್ಯೋಗಕ್ಕಾಗಿ ಉದ್ಯೋಗ ಖಾತ್ರಿ ಬೇಡಿಕೆ ಬರುತ್ತಿರುವಾಗ ಅದನ್ನು ಪರಿಗಣಿಸುತ್ತಿಲ್ಲ. ಎಲ್ಲಾ ರಾಜ್ಯಗಳು ಒಟ್ಟಾರೆ 60,000 ಕೋಟಿ ಬೇಡಿ-ಕೆ ಇಟ್ಟಿರುವಾಗ ಶೇ. 50 ರಷ್ಟು ಮಾತ್ರವೇ ಬಜೆಟ್‌ನಲ್ಲಿ ನಿಗದಿಸುತ್ತದೆ. ರಾಜ್ಯ ಸರಕಾರಗಳಿಗೆ ಕನಿಷ್ಠ 100 ದಿನಗಳ ಮೊತ್ತವನ್ನು ಬಿಡುಗಡೆ ಮಾಡುತ್ತಿಲ್ಲ.

ಬರಗಾಲ/ಪ್ರವಾಹಗಳ ವಿಚಾರದಲ್ಲಿ ಜನತೆ ಮತ್ತು ರೈತರು, ಕೂಲಿಕಾರರನ್ನು ಸಂರಕ್ಷಿಸುವ ವಿಚಾರವೇ ಇಲ್ಲ. ಆತ್ಮಹತ್ಯೆಗಳನ್ನು ತಡೆಯಲು ಬಾಧಿತ ರೈತರು, ಕೂಲಿಕಾರರ ಸಾಲಮನ್ನಾ ಮಾಡಿದರೆ ಬ್ಯಾಂಕುಗಳು ದಿವಾಳಿಯಾಗುತ್ತವೆಯನ್ನುವ ಸುಳ್ಳನ್ನು ಹರಡಲಾಗುತ್ತಿದೆ. ದೊಡ್ಡ ಬಂಡವಾಳದಾರರ ಸಾಲಮನ್ನಾ ಮಾಡಲಾಗುತ್ತದೆ. ಕೃಷಿ ಬಿಕ್ಕಟ್ಟಿನಿಂದ ರೈತರು, ಕೂಲಿಕಾರರನ್ನು ಸಂರಕ್ಷಿಸಲು ಬಾಧಿತರ ಸಾಲಮನ್ನಾ ತಾತ್ಕಾಲಿಕ ಪರಿಹಾರವಾಗಿದೆ. ಶಾಶ್ವತ ಪರಿಹಾರವೆಂದರೆ ರೈತರ ಬೆಳೆಗೆ ಲಾಭದಾಯಕ ಬೆಲೆ ಖಾತರಿಪಡಿಸುವುದಾಗಿದೆ.

ಆದರೆ, ರೈತರ ಆತ್ಮಹತ್ಯೆಗಳನ್ನು ತಡೆಯುವ ಮತ್ತು ಕೃಷಿ ಉತ್ಪಾದನಾ ವೆಚ್ಚಕ್ಕೆ ಶೇ 50ರಷ್ಟು ಲಾಭಾಂಶ ಸೇರಿಸಿ ಬೆಂಬಲ ಬೆಲೆ ನಿಗದಿಸಿ ರೈತರನ್ನು ನಷ್ಟದಿಂದ ತಪ್ಪಿಸುವ ಬಿಜೆಪಿಯ ಚುನಾವಣಾ ಭರವಸೆ ಭರವಸೆಯಾಗಿಯೆ ಉಳಿದಿದೆ. ಮೋದಿಯವರು ಅಧಿಕಾರ ಪಡೆದ ನಂತರ ದೇಶದಲ್ಲಿ ರೈತರ ಆತ್ಮಹತ್ಯೆಗಳ ಸಂಖ್ಯೆ ಶೇ. 30 ರಷ್ಟು ಬೆಳೆದಿದೆ. ಪ್ರತಿದಿನ 26 ನಿಮಿಷಕ್ಕೊಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುವುದು ನಡೆದಿದೆ. ಕೃಷಿ ಉತ್ಪಾದನಾ ವೆಚ್ಚಕ್ಕೆ ಶೇ. 50 ಲಾಭಾಂಶ ನೀಡುವ ಅಂಶ ಸಾಧ್ಯವಿಲ್ಲವೆಂದು ಸುಪ್ರಿಂ ಕೋರ್ಟಿಗೆ ಸಲ್ಲಿಸಲಾದ ಪ್ರಮಾಣ ಪತ್ರದಲ್ಲಿ ಸ್ಪಷ್ಟಪಡಿಸಿ ರೈತರನ್ನು ವಂಚಿಸಲಾಗಿದೆ.

ಇಂತಹ ಎಲ್ಲಾ ತನ್ನ

ಪುಟ 4 ಕ್ಕೆ



ಕೃಪೆ: ಪಿ.ಮಹಮ್ಮದ್, ವಿ.ಕ.

ಕೊರಗರ ಮೇಲಿನ ಹಲ್ಲೆ ಖಂಡಿಸಿ ಠಾಣೆ ಎದುರು ಪ್ರತಿಭಟನೆ

ದನದ ಮಾಂಸ ಮಾಡಿ ಸೇವನೆ ಮಾಡಿದ ಆರೋಪ ಹೊರಿಸಿ ಕುಂದಾಪುರ ತಾಲೂಕಿನ ಗಂಗೊಳ್ಳಿ ಸಮೀಪದ ಮೋವಾಡಿ ಗಾಣದಮಕ್ಕಿ ಕೊರಗ ಸಮುದಾಯದ ಮೇಲೆ ಸಂಘ ಪರಿವಾರದ ಕಾರ್ಯಕರ್ತರು ನಡೆಸಿದ ಧಾಳಿಯನ್ನು ಖಂಡಿಸಿ ಸಿಪಿಐ(ಎಂ) ಬೈಂದೂರು ವಲಯ ಸಮಿತಿಯ ವತಿಯಿಂದ ಮೇ 4ರಂದು ಗಂಗೊಳ್ಳಿ ಪೊಲೀಸದ್ ಠಾಣೆ ಎದುರು ಪ್ರತಿಭಟನೆ ನಡೆಸಲಾಯಿತು.

ಹಲ್ಲೆಗೆ ಒಳಗಾದ ಕೊರಗ ಕುಟುಂಬದ ಮನೆಯಿಂದ ಸಂತ್ರಸ್ತರೊಂದಿಗೆ ಪಾದಯಾತ್ರೆ ನಡೆಸಿದ ಸಿಪಿಐ(ಎಂ) ಕಾರ್ಯಕರ್ತರು ಠಾಣೆ–ಯ ಎದುರು ಮಕ್ಕಳು, ಮಹಿಳೆಯರ ಮೇಲೆ ನಡೆಸಿದ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿದರು. ದೌರ್ಜನ್ಯಕ್ಕೊಳಗಾದ ಕೊರಗ ಯುವಕರ ಮೇಲೆ ಹಾಕಲಾಗಿರುವ ಮೊಕದ್ದಮೆಗಳನ್ನು ಕೂಡಲೇ ಹಿಂಪಡೆಯಬೇಕು; ಆರೋಪಿಗಳ ಮೇಲೆ ದಲಿತ ದೌರ್ಜನ್ಯ ಪ್ರಕರಣ ದಾಖಲಿಸಬೇಕು; ಸಂತ್ರಸ್ತರಿಗೆ ಪರಿಹಾರ ಒದಗಿಸಬೇಕು; ಗ್ರಾಮ ಪಂಚಾಯತ್ ಸದಸ್ಯೆಯಾಗಿರುವ ಸಂತ್ರಸ್ತ ಕುಟುಂಬದ ಶಕುಂತಳಾರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅವಮಾನ ಮಾಡಿದವರನ್ನು ತನಿಖೆ ಮಾಡಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಧರಣಿ ನಿರತರು ಆಗ್ರಹಿಸಿದರು.

ಬಳಿಕ ಈ ಕುರಿತು ಮನವಿಯನ್ನು ಬೈಂದೂರು ವೃತ್ತ ನಿರೀಕ್ಷರ ಮೂಲಕ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಸಲ್ಲಿಸಲಾಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಪಕ್ಷದ ಮುಖಂಡರಾದ ಕೆ. ಶಂಕರ್, ಎಚ್. ನರಸಿಂಹ, ವೆಂಕಟೇಶ್ ಕೋಣಿ, ಸಿಪಿಐ(ಎಂ) ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವರದಿ: **ವಾ. ಉ**

ಎಂಆರ್‌ಪಿಎಲ್ ವಿರುದ್ಧ ಪ್ರತಿಭಟನೆ

ಡಿವೈಎಫ್ಐ ಸಹಭಾಗಿತ್ವದಲ್ಲಿ ಜೋಕಟ್ಟೆ ನಾಗರಿಕ ಸಮಿತಿ ಜಿಲ್ಲಾಡಳಿತದೊಂದಿಗೆ ಮಾಡಿಕೊಂಡ ಒಪ್ಪಂದದಂತೆ, ಎಂಆರ್‌ಪಿಎಲ್ ತ್ಯಾಜ್ಯ ಹಾಗೂ ಮಾಲಿನ್ಯ ನಿವಾರಣೆ ಸಂಬಂಧ ಗ್ರೀನ್ ಬೆಲ್ಟ್ ನಿರ್ಮಾಣ, ಹೊಸ ಇಟಿಪಿ ಪ್ಲ್ಯಾಂಟ್ ರಚನೆ, ಕೋಕ್ ಡಂಪಿಂಗ್ ಯಾರ್ಡ್ ಸ್ಥಳಾಂತರ ಸೇರಿದಂತೆ ಹಲವಾರು ಕ್ರಮಗಳನ್ನು ಕಾಲಮಿತಿಯೊಳಗೆ ಮಾಡಬೇಕಾಗಿತ್ತು. ರಾಜ್ಯ ಸರಕಾರ ಆದೇಶ ನೀಡಿ ಒಂದು ವರ್ಷ ಕಳೆದರೂ ಎಂಆರ್‌ಪಿಎಲ್ ಈ ಆದೇಶವನ್ನು ಪಾಲಿಸದೆ ಇರುವುದನ್ನು ಖಂಡಿಸಿ ಜೋಕಟ್ಟೆ ನಾಗರಿಕರು ಮೇ 3ರಂದು ಎಂಆರ್‌ಪಿಎಲ್ ಮುಖ್ಯ ಪ್ರವೇಶ ದ್ವಾರದ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ನೂರಾರು ಜನರು ಪ್ರತಿಭಟನೆಯಲ್ಲಿ ಭಾಗವಹಿಸಿ ಎಂಆರ್‌ಪಿಎಲ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ಎತ್ತಂಗಡಿ ವಿರುದ್ಧ ಬೀದಿಬದಿ ವ್ಯಾಪಾರಸ್ಥರ ಧರಣಿ:



ಮಂಗಳೂರು ನಗರದ ಬೀದಿಬದಿ ವ್ಯಾಪಾರಸ್ಥರು ತಮ್ಮನ್ನು ಮಂಗಳೂರು ನಗರ ಪಾಲಿಕೆ ಅಧಿಕಾರಿಗಳು ಎತ್ತಂಗಡಿಗೊಳಿಸುತ್ತಿರುವುದರ ವಿರುದ್ಧ ಮೇ 9ರಂದು ಪಾಲಿಕೆ ಕಛೇರಿಯೆದುರು ಧರಣಿ ಸತ್ಯಾಗ್ರಹ ನಡೆಸಿದರು. ತಮಗೆ ಪರ್ಯಾಯ ವ್ಯವಸ್ಥೆಯನ್ನು ಕಲಿಪಸಬೇಕೆಂದು ಅವರು ಆಗ್ರಹಿಸಿದರು.

ಬೀದಿಬದಿ ವ್ಯಾಪಾ ಸಂಬಂಧಿಸಿದ ಕಾಯ್ದೆ ಜಾರಿಗಾಗಿ ಮಂಗಳೂರು ನಗರ ಪಾಲಿಕೆ ಕೆಲವು ಸೌಲಭ್ಯಗಳನ್ನು ಬೀದಿ ವ್ಯಾಪಾರಿಗಳಿಗೆ ಕಲ್ಪಿಸಬೇಕಾಗಿದೆ. ಕೇವಲ 200 ಮಂದಿಗಳಿಗೆ ಮಾತ್ರ ನೀಡಿರುವ ಬೀದಿ ವ್ಯಾಪಾರದ ಪರವಾನಿಗೆಯನ್ನು ಪಾಲಿಕೆ ನವೀಕರಿಸಿ ನೀಡಿರುವುದಿಲ್ಲ. ವ್ಯಾಪಾರೀ ವಲಯವನ್ನು ಸರ್ವಿಸ್ ಬಸ್ ಸ್ಟ್ಯಾಂಡ್ ಬಳಿ ಕಲ್ಪಿಸಿ ಕೊಟ್ಟಿದ್ದರೂ, ಎಲ್ಲಾ ಪರವಾನಿಗೆದಾರರಿಗೆ ಬೇಕಾದ ಸ್ಥಳಾವಕಾಶವನ್ನಾಗಲೀ, ಅಗತ್ಯ ಇತರ ಸೌಲಭ್ಯಗಳನ್ನಾಗಲೀ ಕಲ್ಪಿಸಿಲ್ಲ. ಬೀದಿಬದಿ ವ್ಯಾಪಾರಸ್ಥರಿಂದ ಕಾರು ಪಾರ್ಕಿಂಗ್‌ಗೆ ಅಡ್ಡಿ ಎನ್ನುತ್ತಾರೆ ಪಾಲಿಕೆ ಅಧಿಕಾರಿಗಳು; ಆದರೆ ಬಹು ಮಹಡಿ ಕಟ್ಟಡಗಳಲ್ಲಿ ಕೆಳ ಅಂತಸ್ತಿನಲ್ಲಿ ಪಾರ್ಕಿಂಗ್‌ಗೆ ಜಾಗ ಕಾದಿರಿಸಿರುವುದನ್ನು ಪಾಲಿಕೆ ಖಾತ್ರಿಪಡಿಸದೆ ಆ ಕೆಳ ಅಂತಸ್ತಿನಲ್ಲೂ ಅಂಗಡಿ ಮುಗ್ಗಟ್ಟು ರಚನೆಗೆ ಅವಕಾಶ ನೀಡಿ ಕಾರು ಪಾರ್ಕಿಂಗ್ ರಸ್ತೆಯಲ್ಲಿ ಮಾಡಲು ಅವಕಾಶ ಕೊಟ್ಟುದೇ ಸಂಚಾರ ತಡೆಗೆ ಕಾರಣವಾಗಿದೆ. ಸಂಚಾರ ತಡೆಗೆ ಕಾರಣವಾಗಿರುವ ಕಾರು ಪಾರ್ಕಿಂಗ್‌ಗಾಗಿ ಕಟ್ಟಡ ಮಾಲಕರ ಮೇಲೆ ಕ್ರಮ ಕೈಗೊಳ್ಳುವ ಬದಲು ಬಡ ಬೀದಿ ವ್ಯಾಪಾರಿಗಳ ಮೇಲೆ ಪಾಲಿಕೆ ಅಧಿಕಾರಿಗಳು ಹರಿಹಾಯುತ್ತಿದ್ದಾರೆ ಎಂಬುದಾಗಿ ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ಮುಖಂಡರು ಆರೋಪಿಸಿದರು.

ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷ ವಸಂತ ಆಚಾರಿ, ದ.ಕ ಜಿಲ್ಲಾ ಸಮಿತಿ ಅಧ್ಯಕ್ಷ ಜೆ. ಬಾಲಕೃಷ್ಣ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಹಾಗೂ ದ.ಕ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘದ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು. ಸಂಘದ ಮುಖಂಡರಾದ ಮುಸ್ತಾಫ, ಸಂತೋಷ್ ಆರ್. ಎಸ್. ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಕೇಂದ್ರ ಸರಕಾರದ ಜನವಿರೋಧಿ ನೀತಿಗಳ........ ಪುಟ 3 ರಿಂದ

ಜನವಿರೋಧಿ ಮತ್ತು ದೊಡ್ಡ ಬಂಡವಾಳದಾರರ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ನೀತಿಗಳನ್ನು ಮರೆಮಾಚಿ ಜಾರಿಗೆ ತರಲು ಅದು ಜನತೆಯನ್ನು ಒಡೆದಾಳಲು ಮುಂದಾಗುತ್ತಿದೆ. ಜಾತಿವಾದಕ್ಕೆ, ಕೋಮುವಾದಕ್ಕೆ ದೇಶವನ್ನು ತಳ್ಳುತ್ತಿದೆ. ಜಾತಿವಾದಿ, ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತಿದೆ. ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿ ಮಾಡುತ್ತಿದೆ.

ಆದ್ದರಿಂದ ರಾಜ್ಯದ ಜನತೆ ಕೇಂದ್ರ ಸರಕಾರದ ಈ ಜನದ್ರೋಹವನ್ನು ಅರಿತು ಕೋಮುಸೌಹಾರ್ದತೆ ಮೆರೆಯಲು ಮತ್ತು ಜನವಿರೋಧಿ ನೀತಿಗಳನ್ನು ಪ್ರತಿರೋಧಿಸಲು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡುತ್ತದೆ. ಕೆಳ ಕಂಡ ತಕ್ಷಣದ ಈ ಹಕ್ಕೊತ್ತಾಯಗಳಿಗಾಗಿ ಮೇ 25 ರಂದು ರಾಜ್ಯದಾದ್ಯಂತ ನಡೆಯುವ ಪ್ರತಿಭಟನೆಯಲ್ಲಿ ಹಾಗೂ ಅದರ ಪೂರ್ವಭಾವಿ ಪ್ರಚಾರಾಂದೋಲನದಲ್ಲಿ ಪಾಲ್ಗೊಳ್ಳಲು ವಿನಂತಿಸುತ್ತದೆ.

ಹಕ್ಕೊತ್ತಾಯಗಳು :

1. ಆಹಾರ ಭದ್ರತಾ ಕಾಯ್ದೆಗೆ ವ್ಯತಿರಿಕ್ತವಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಪೂರೈಕೆಯಲ್ಲಿ ತೀವ್ರಕಡಿತ ಮಾಡಿರುವುದನ್ನು ವಾಪಾಸು ಪಡೆಯಬೇಕು. ಸಕ್ಕರೆ ಹಾಗೂ ಸೀಮೆಎಣ್ಣೆ ವಿತರಣೆಯನ್ನು ಮುಂದುವರೆಸಬೇಕು. ನಗದು ವರ್ಗಾವಣೆಯ ನೀತಿಯನ್ನು ಕೈಬಿಡಬೇಕು. ಎಲ್ಲಾ ಅಗತ್ಯ ವಸ್ತುಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಸಹಾಯಧನದ ಆಧಾರದಲ್ಲಿ ದೊರೆಯುವಂತೆ ಮಾಡಬೇಕು.
2. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ದುರ್ಬಲಗೊಳಿಸುವ ಕ್ರಮಗಳನ್ನು ಕೈಬಿಡಬೇಕು. ಕೇಂದ್ರ ಸರಕಾರ ಪೂರ್ಣ 100 ದಿನಗಳ ಉದ್ಯೋಗ ಒದಗಿಸಲು ಬೇಕಾಗುವಷ್ಟು ಹಣವನ್ನು ರಾಜ್ಯ ಸರಕಾರಗಳಿಗೆ ಒದಗಿಸಬೇಕು. ಉದ್ಯೋಗ ಖಾತ್ರಿ ಕೆಲಸವನ್ನು 200 ದಿನಗಳಿಗೆ ವಿಸ್ತರಿಸಲು ಮತ್ತು ಕೂಲಿಯನ್ನು ಕನಿಷ್ಠ ರೂ. 350ಕ್ಕೆ ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.
3. ಸಾರ್ವಜನಿಕ ರಂಗದ ಕೈಗಾರಿಕೆಗಳು ಮತ್ತು ಉದ್ದಿಮೆಗಳ ಖಾಸಗೀಕರಣವನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಸಾರ್ವಜನಿಕ ರಂಗವನ್ನು ಬಲಪಡಿಸಲು ಅಗತ್ಯ ಕ್ರಮವಹಿಸಬೇಕು. ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡಬೇಕು. ಖಾಸಗೀರಂಗದ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಿಗಾಗಿ ಮೀಸಲಾತಿಯನ್ನು ಒದಗಿಸಲು ಅಗತ್ಯ ಕ್ರಮಗಳನ್ನು ವಹಿಸಬೇಕು. ಬಡ್ತಿಯಲ್ಲಿ ಮೀಸಲಾತಿ ಮುಂದುವರೆಯಬೇಕು.
4. ರೈತರು ಬೆಳೆದ ಬೆಳೆಗೆ ಅದರ ಉತ್ಪಾದನಾ ವೆಚ್ಚಕ್ಕೆ ಶೇ 50 ರಷ್ಟು ಲಾಭಾಂಶ ಸಿಗುವಂತೆ ಖಾತರಿ ಪಡಿಸಲು ಕ್ರಮವಹಿಸಬೇಕು. ಬರಗಾಲ/ಅತೀವೃಷ್ಟಿ ಹಿನ್ನೆಲೆಯಲ್ಲಿ ಹೆಚ್ಚುತ್ತಿರುವ ಆತ್ಮಹತ್ಯೆಗಳನ್ನು ತಡೆಯಲು ಬಾದಿತ ರೈತರ ಸಾಲಮನ್ನಾ ಮಾಡಬೇಕು.
5. ಮಹಿಳೆಯರು, ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಲು ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕು.
6. ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಬರ ನಿರ್ವಹಣಾ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಬೇಕು. ರೈತರ ಸಾಲಮನ್ನಾ ಮಾಡಬೇಕು. ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಬೇಕು. ಎಲ್ಲಾ ಸ್ಕೀಮ್ ನೌಕರರನ್ನು ಕನಿಷ್ಠ ವೇತನ ಕಾಯ್ದೆ ವ್ಯಾಪ್ತಿಯೊಳಗೆ ತರಬೇಕು.

ಈ ವಾರ ಚರಿತ್ರೆಯಲ್ಲಿ

19 ಮೇ 1890

ಹೊ ಚಿ ಮಿನ್ ಜನ್ಮದಿನ



ಹೊ ಚಿ ಮಿನ್ ವಿಶ್ವದ ಕಮ್ಯುನಿಸ್ಟ್ ನಾಯಕರಲ್ಲೇ ಲೆನಿನ್, ಮಾವ್ರೋರ ನಂತರ ಎತ್ತರದ ನಾಯಕ. ಮೂರು ಸಾಮ್ರಾಜ್ಯಶಾಹಿ (ಫ್ರೆಂಚ್, ಜಪಾನಿ, ಅಮೆರಿಕನ್) ಶಕ್ತಿಗಳ ವಿರುದ್ಧ ಸುಮಾರು ಮೂರು ದಶಕಗಳ ವಿಯೆಟ್ನಾಮಿ ವಿಮೋಚನಾ ಹೋರಾಟದ ಧೀಮಂತ ನಾಯಕತ್ವ ವಹಿಸಿ ಗೆಲುವಿನತ್ತ ಒಯ್ದ ಮಹಾ ನಾಯಕ. ಅವರು ವಿಯೆಟ್ನಾಮ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ನಾಯಕರೂ ಪ್ರಧಾನ ಕಾರ್ಯದರ್ಶಿಗಳೂ ಆಗಿದ್ದರು. ಅವರು ಅಮೆರಿಕದ ಮಿಲಿಟರಿ ಸೋಲು ಕಾಣಲು ಜೀವಂತ ಇಲ್ಲದಿದ್ದರೂ ಜಗತ್ತಿನ ನಂಬರ್ 1 ಮಿಲಿಟರಿ ಸೂಪರ್ ಪವರ್ ನ್ನು ಗೆರಿಲ್ಲಾ ಯುದ್ಧ ತಂತ್ರ, ಕಮ್ಯುನಿಸ್ಟ್ ಪಕ್ಷದ ನಾಯಕತ್ವ ಮತ್ತು ಇಡೀ ಜನತೆಯ ದೃಢ ಬೆಂಬಲದಿಂದ ಸೋಲಿಸಿದ ವ್ಯೂಹ ರೂಪಿಸಿದಾತ. ವಿಯೆಟ್ನಾಮಿನಲ್ಲಿ ಹುಟ್ಟಿ, 1911ರಲ್ಲಿ ಶಿಕ್ಷಣಕ್ಕೆ ಫ್ರಾನ್ಸ್ ಗೆ ತೆರಳಿದ ಹೊ ಮುಂದಿನ 3 ದಶಕಗಳ ಕಾಲ ಫ್ರಾನ್ಸ್, ಅಮೆರಿಕ, ರಶ್ಯಾ. ಚೀನಾಗಳಲ್ಲಿ ವಾಸಿಸಿದರು. ಫ್ರಾನ್ಸ್ ನಲ್ಲಿ ರಾಜಕೀಯ, ಸೋಶಲಿಸ್ಟ್ ಪಕ್ಷ, ಮಾರ್ಕ್ಸ್‌ವಾದದತ್ತ ಆಕರ್ಷಿತರಾದ ಹೊ 1941ರಲ್ಲಿ ವಿಯೆಟ್ನಾಮಿಗೆ ಹಿಂತಿರುಗಿ ವಿಯೆಟ್ನಾಮಿ ಸ್ವಾತಂತ್ರ್ಯ ಹೋರಾಟದ ನಾಯಕತ್ವ ವಹಿಸಿಕೊಂಡರು. ಫ್ರೆಂಚರಿಂದ ವಿಯೆಟ್ನಾಮ್ ಸ್ವಾತಂತ್ರ್ಯ ಪಡೆದ ಮೇಲೆ ಉತ್ತರ ವಿಯೆಟ್ನಾಮಿನ ಪ್ರಧಾನಿ (1945–55) ಮತ್ತು ಅಧ್ಯಕ್ಷ (1955–69) ಆಗಿದ್ದರು. ದಕ್ಷಿಣ ವಿಯೆಟ್ನಾಮಿನ ವಿಮೋಚನಾ ಹೋರಾಟದ ನಾಯಕರೂ ಆಗಿದ್ದರು. ಅವರು 1969 ಸೆಪ್ಟೆಂಬರ್ 2ರಂದು ನಿಧನ ಹೊಂದಿದರು.

ನಾಳಿನ ಕಾರ್ಯಕ್ರಮಗಳು

- **ಮುಸ್ಲಿಂ ಯುವ ಸಮಾವೇಶ**
  ಮೇ 14–15, ಡಿ.ವೈ.ಎಫ್.ಐ. ಮಂಗಳೂರು
- **ತೀಸ್ತಾ ಸೆಟಲ್ ವಾಡ್ ಪುಸ್ತಕದ ಬಗ್ಗೆ ಸಂವಾದ,**
  ಮೇ 15, ದೇಶಾಭಿಮಾನಿ ಬಳಗ, ಬೆಂಗಳೂರು
- **ಬರಗಾಲವನ್ನು ವಿರೋಧಿಸಿ ಮತ್ತು ಭೂಮಿ ಮತ್ತಿತರೇ ಪ್ರಶ್ನೆಗಳಿಗಾಗಿ 48 ತಾಸುಗಳ ರಾಜ್ಯಾದ್ಯಂತ ಪ್ರತಿಭಟನೆ**
  ಮೇ 17–18, ಕರ್ನಾಟಕ ಪ್ರಾಂತ ರೈತ ಸಂಘ
- **ಕೇಂದ್ರದ ಜನ–ವಿರೋಧಿ ನೀತಿಗಳ ವಿರುದ್ಧ ರಾಜ್ಯ ವ್ಯಾಪಿ ಪ್ರಚಾರಾಂದೋಲನ ವಾರ ಮೇ 17–24, ಮೇ 25 ಪ್ರತಿಭಟನೆ,** ಸಿಪಿಐ(ಎಂ)
- **“ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ” ಕಾರ್ಯಾಗಾರ,**
  ಜೂನ್ 3–4, ಸಿ.ಐ.ಟಿ.ಯು. ಬೆಂಗಳೂರು
- **ರಾಜ್ಯ ಮಟ್ಟದ “ಸಂವಿಧಾನ ಉಳಿಸಿ ದೇಶಪ್ರೇಮಿ” ಸಮಾವೇಶ** ಜೂನ್ 4 ಮೈಸೂರು
- **ಬಗರ್ ಹುಕುಂ ಸಕ್ರಮಕ್ಕೆ ಪ್ರಚಾರಾಂದೋಲನ,**
  ಕರ್ನಾಟಕ ಪ್ರಾಂತ ರೈತಸಂಘ, ಜೂನ್ 1–2ನೇ ವಾರ
- **ಕಟ್ಟಡ ಕಾರ್ಮಿಕರ ರಾಜ್ಯ ಸಮ್ಮೇಳನ** ಜುಲೈ 1–2, ಕುಂದಾಪುರ

ಬಗರ್‌ಹುಕುಂ ಸಕ್ರಮ – ದುಂಡು ಮೇಜಿನ ಸಭೆ : ನಿರ್ಣಯಗಳು



ಕರ್ನಾಟಕ ಪ್ರಾಂತ ರೈತಸಂಘ ಇತರ ಹಲವು ರೈತ, ಕೃಷಿಕೂಲಿ, ದಲಿತ ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳ ಜತೆ ಮೇ 12ರಂದು ಬಗರ್‌ಹುಕುಂ ಸಾಗುವಳಿ ಭೂಮಿಯ ಸಕ್ರಮಕ್ಕಾಗಿ ಮತ್ತು ಹಕ್ಕಿಗಾಗಿ, ಬೆಂಗಳೂರಿನ ಶಾಸಕರ ಭವನದಲ್ಲಿ ದುಂಡು ಮೇಜಿನ ಸಭೆ ಏರ್ಪಡಿಸಿತ್ತು. ಪ್ರಾಂತ ರೈತಸಂಘದ ಅಧ್ಯಕ್ಷ ಜಿ.ಸಿ.ಬಯ್ಯಾರೆಡ್ಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಯು. ಬಸವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಯಲ್ಲಿ ಪ್ರಾಂತ ರೈತಸಂಘದ ಉಪಾಧ್ಯಕ್ಷ ಮಾರುತಿ ಮಾನ್ಪಡೆ, ವೆಂಕಟಾಚಲಯ್ಯ, ರಾಜ್ಯ ರೈತ ಸಂಘದ ಗೋಪಾಲ್, ಕೃಷಿ ಕೂಲಿಕಾರ ಸಂಘದ ಚಂದ್ರಪ್ಪ ಹೊಸ್ಕೇರ ಮತ್ತಿತರರು ಭಾಗವಹಿಸಿದ್ದರು. ಸಭೆಯಲ್ಲಿ ಚರ್ಚೆಯ ನಂತರ ಈ ಕೆಳಗಿನ ಹಕ್ಕೊತ್ತಾಯಗಳು ಮತ್ತು ಕಾರ್ಯಭಾರಗಳನ್ನು ಅಂಗೀಕರಿಸಲಾಯಿತು:

1. ಕರ್ನಾಟಕ ಪ್ರಾಂತ ರೈತ ಸಂಘ ಜೂನ್ ಮೊದಲ ಪಾಕ್ಷಿಕದಲ್ಲಿ ಈ ಪ್ರಶ್ನೆಗಳ ಕುರಿತು ಜನತೆಯ ನಡುವೆ ವ್ಯಾಪಕ ಪ್ರಚಾರ ನಡೆಸಲು ಮತ್ತು ಮನವಿ ಸಲ್ಲಿಸಿ ರಾಜ್ಯ ಸರಕಾರವನ್ನು ಒತ್ತಾಯಿಸಲು ನಿರ್ಧರಿಸಿದೆ.
2. ಗೋಮಾಳ ಜಮೀನಿಗೆ ಹಕ್ಕುಪತ್ರ ನೀಡಲಿರುವ ಕರ್ನಾಟಕ ಭೂಕಂದಾಯ (ಮೂರನೇ ತಿದ್ದುಪಡಿ) ನಿಯಮಾವಳಿಗೆ, ಉಚ್ಚ ನ್ಯಾಯಾಲಯ ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಮತ್ತು ಅದು ಗೋಮಾಳ ಜಮೀನೆಂಬ ಕಾರಣ–ಕ್ಕೆ ಈಗಾಗಲೇ ತಿರಸ್ಕರಿಸಲ್ಪಟ್ಟ ಅರ್ಜಿದಾರರಿಗೂ ಅನ್ವಯವಾಗುವಂತೆ ಸೂಕ್ತ ತಿದ್ದುಪಡಿಗೆ ರಾಜ್ಯಸರಕಾರ ಅಗತ್ಯ ಕ್ರಮವಹಿಸಬೇಕು ಮತ್ತು ಈ ಕುರಿತು ಗೋಮಾಳ ಜಮೀನಿನ ಹಕ್ಕುಪತ್ರಕ್ಕೆ ಕಾದಿರುವ ಬಡರೈತರಿಂದ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಸಾವಿರಾರು ಮನವಿಗಳನ್ನು ಕಳುಹಿಸುವುದು ಅಲ್ಲದೇ ಸದರಿ ಕೇಸಿನ ವಿಚಾರಣೆಯಲ್ಲಿ ಭಾಗಿಯಾಗಲು ರೈತಸಂಘ ಉಚ್ಚನ್ಯಾಲಯಕ್ಕೆ ಅರ್ಜಿ ಸಲ್ಲಿಸುವುದು.
3. ಭೂಕಬಳಿಕೆ ನಿಷೇಧ ಕಾಯ್ದೆಯಂತೆ ರಚಿಸಲಾದ ವಿಶೇಷ ನ್ಯಾಯಾಲಯದ ಸೂಚನೆಯಂತೆ ಈ ಬಡಸಾಗುವಳಿದಾರರ ಮೇಲೆ ಮೊಕದ್ದಮೆಗಳನ್ನು ದಾಖಲಿಸದಂತೆ ರಾಜ್ಯಸರಕಾರ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಬೇಕು ಮತ್ತು ತಕ್ಷಣ ಭೂಕಬಳಿಕೆ ನಿಷೇಧ ಕಾಯ್ದೆಗೆ, “ಈ ಬಗರ್‌ಹುಕುಂ ಸಾಗುವಳಿಯ ಅನ್ನದಾತರು ಭೂಕಬಳಿಕೆದಾರರಲ್ಲಾ” ಎಂಬ ತಿದ್ದುಪಡಿಗೆ ಕ್ರಮವಹಿಸಬೇಕು.
4. ನಗರ ವ್ಯಾಪ್ತಿಯ ಬಡಸಾಗುವಳಿದಾರರು ಸೇರಿದಂತೆ ಎಲ್ಲಾ ರೀತಿಯ ಸರಕಾರಿ ಜಮೀನಿನಲ್ಲಿ ಸಾಗುನಿರತ ಬಡವರಿಗೆ ಹಕ್ಕುಪತ್ರ ದೊರೆಯುವಂತೆ ಭೂಕಂದಾಯ ಕಾಯ್ದೆಗೆ ಅಗತ್ಯ ತಿದ್ದುಪಡಿಗಳನ್ನು ಮಾಡಬೇಕು. ಮತ್ತೊಮ್ಮೆ ಅಕ್ರಮ–ಸಕ್ರಮ ಸಮಿತಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಬೇಕು.
5. ಈ ಎಲ್ಲಾ ಅರ್ಜಿದಾರರ ಜಮೀನುಗಳನ್ನು ವಾಸ್ತವಿಕತೆಯ ಆಧಾರದಲ್ಲಿ ಸರ್ವೇ ಇಲಾಖೆಯ ಮೂಲಕ ಸರ್ವೇ (ಗಣತಿ) ನಡೆಸಿ ವಾಸ್ತವಾಂಶವನ್ನು ಸಾಗುವಳಿ ಕಾಲಂನಲ್ಲಿ ಸೇರಿಸುವಂತೆ ಕ್ರಮವಹಿಸಬೇಕು.
6. ಈಗಾಗಲೇ ರಾಜ್ಯದಾದ್ಯಂತ ಭೂಸಾಗುವಳಿಯಲ್ಲಿರುವ ನಗರವ್ಯಾಪ್ತಿಯ ಜಮೀನುಗಳು ಒಳಗೊಂಡಂತೆ ಈ ಸಾಗುವಳಿದಾರರ ಜಮೀನುಗಳನ್ನು ಬೇರೆ ಯಾವುದೇ ಇಲಾಖೆಯ ಅಭಿವೃದ್ಧಿ ಕೆಲಸಕ್ಕೆ ನೀಡುವುದನ್ನು ಮತ್ತು ಬಲವಂತವಾಗಿ ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು. ಈ ಕುರಿತು ರೈತರು ಮತ್ತು ರೈತ ಮುಖಂಡರ ಮೇಲೆ ಹಾಕಲಾಗಿರುವ ಕೇಸುಗಳನ್ನು ವಾಪಾಸು ಪಡೆಯಬೇಕು. ಬಲವಂತದ ಕಾರ್ಯಾಚರಣೆಯಲ್ಲಿ ಹಾನಿಗೊಳಗಾದ ರೈತ ಕುಟುಂಬಗಳಿಗೆ ಅಗತ್ಯ ನಷ್ಟಪರಿಹಾರವನ್ನು ನೀಡಬೇಕು.
7. ಅದಾಗಲೇ ಅರಣ್ಯ ಇಲಾಕೆಯಿಂದ ಕಂದಾಯ ಇಲಾಕೆಗೆ ವಾಪಾಸು ಪಡೆಯಲಾಗುವ ಜಮೀನುಗಳನ್ನು, ಅದಾಗಲೇ ಅರಣ್ಯಇಲಾಕೆ ಬಲವಂತವಾಗಿ ಒಕ್ಕಲೆಬ್ಬಿಸಲ್ಪಟ್ಟ ಮೂಲ ಸಾಗುವಳಿದಾರರಿಗೆ ವಿತರಿಸಲು ಕ್ರಮವಹಿಸಬೇಕು. ಅವರುಗಳ ಮೇಲಿನ ಮೊಕದ್ದಮೆಗಳನ್ನು ವಾಪಾಸು ಪಡೆಯಬೇಕು ಮತ್ತು ಅವರಿಗಾದ ನಷ್ಠ ಪರಿಹಾರವನ್ನು ನೀಡಬೇಕು. ಆದಾಗಲೂ ಉಳಿದ ಭೂಮಿಯನ್ನು ದಲಿತರು ಸೇರಿದಂತೆ ವ್ಯವಸಾಯದಲ್ಲಿ ಆಸಕ್ತಿಯಿರುವ ಎಲ್ಲಾ ಬಡವರಿಗೆ ಹಂಚಬೇಕು.
8. ಇತರೇ ಅರಣ್ಯವಾಸಿಗಳಿಗೆ ಅರಣ್ಯಭೂಮಿ ಹಕ್ಕು ಖಾತರಿ ಪಡಿಸಲು ಕ್ರಮವಹಿಸಬೇಕು, ಕೇಂದ್ರಸರಕಾರ ಅರಣ್ಯ ಹಕ್ಕು ಮಾನ್ಯತಾ ಕಾಯ್ದೆಯಂತೆ ಇವರು 75ವರ್ಷಗಳ ಅನುಭವದ ದಾಖಲಾತಿ ಒದಗಿಸಬೇಕೆಂಬ ಅಂಶಕ್ಕೆ ತಿದ್ದುಪಡಿ ಮಾಡುವಂತೆ ರಾಜ್ಯ ಸರಕಾರ ಒತ್ತಾಯಿಸಬೇಕು ಮತ್ತು ಇವರು ಒಕ್ಕಲೆಬ್ಬಿಸಲ್ಪಡದಂತೆ ಅಗತ್ಯ ಕ್ರಮಗಳನ್ನು ವಹಿಸಬೇಕು.
9. ಪರಿಶಿಷ್ಠ ಜಾತಿ/ಪಂಗಡಗಳ ವಿಶೇಷ ಘಟಕಗಳ ನಿಧಿಯಲ್ಲಿ ಪ್ರತಿವರ್ಷ ಕನಿಷ್ಠ 10ಸಾವಿರ ಎಕ–ರೆ ಜಮೀನನ್ನು ಖರೀಧಿಸಿ ಭೂಹೀನ ಈ ಕುಟುಂಬಗಳಿಗೆ ನೀಡಬೇಕು.
10. ಬಲವಂತದ ಭೂಸ್ವಾಧೀನದಿಂದಾಗಿ ಭೂಬೆಲೆಯಲ್ಲಿ ನಷ್ಟ ಹೊಂದಿದ ರೈತರಿಗೆ ಭೂಸ್ವಾಧೀನ ಕಾಯ್ದೆ 2013ರಂತೆ ಪರಿಹಾರವನ್ನು ಒದಗಿಸಬೇಕು. ಸದರಿ ಬೆಲೆಯನ್ನು ಸರಕಾರಿಭೂಮಿಯಲ್ಲಿ ಸಾಗುವಳಿನಿರತ ಬಡವರಿಗೂ ನೀಡಬೇಕು. 08–10ವರ್ಷವಾದರೂ ಕೈಗಾರಿಕೆ ನಿರ್ಮಿಸಿದ ಜಮೀನುಗಳನ್ನು ಮೂಲ ರೈತರಿಗೆ ಒದಗಿಸಬೇಕು. ಅಲ್ಲಿಂದ ಇಲ್ಲಿಯವರೆಗಿನ ಉದ್ಯೋಗ ನಷ್ಠ ಪರಿಹಾರವನ್ನು ರಾಜ್ಯಸರಕಾರ ಮತ್ತು ಕೆಐಎಡಿಬಿ ಸಂಸ್ಥೆಗಳು ನೀಡಬೇಕು.
11. ಅಕ್ರಮ – ಸಕ್ರಮ ಸಮಿತಿಯ ಭ್ರಷ್ಟಾಚಾರ ಮತ್ತು ರಾಜಕೀಯದಿಂದಾಗಿ ನೊಂದು ಆತ್ಮಹತ್ಯೆಗೆ ಯತ್ನಿಸಿದ ಶ್ರೀರಾಮಪ್ಪನಿಗೆ 10 ಲಕ್ಷ ರೂಪಾಯಿ ಪರಿಹಾರ ನೀಡಬೇಕು. ಆತನ ಆತ್ಮಹತ್ಯೆಗೆ ಕಾರಣ–ರಾದ ಎಲ್ಲರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಅವರ ಸಂಬಳ ಮತ್ತು ಆ ಧಾಯ, ಆಸ್ತಿಗಳಿಂದ ಪರಿಹಾರದ ಮೊತ್ತವನ್ನು ಸಂಗ್ರಹಿಸಬೇಕು.

ಡೊನೇಷನ್ ಹಾವಳಿ ಖಂಡಿಸಿ. ಶಾಲೆಗಳ ವಿರುದ್ದ ಕ್ರಮ ಕೈಗೊಳ್ಳಲು ಪ್ರತಿಭಟನೆ



ಗಂಗಾವತಿ ತಾಲೂಕಿನಲ್ಲಿರುವ ಸುಮಾರು ಶಾಲೆಗಳು ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯನ್ನ ಜಾರಿ ಮಾಡದೇ ಅನೇಕ ಶಾಲೆಗಳು ಪಾಲಕರಿಗೆ ಮೋಸ ಮಾಡತ್ತಿವೆ.ಹಲವಾರು ಶಾಲೆಗಳು ಪ್ರವೇಶಾತಿ ಹೆಸರಿನಲ್ಲಿ ಬಿಳಿ ಚೀಟಿ ವ್ಯವಹಾರ ಮಾಡಲಾಗುತ್ತದೆ. ಇಂತಹ ಶಾಲೆಗಳ ವಿರುದ್ಧ ಚಕಾರ ಎತ್ತದೆ ಸುಮ್ಮನೆ ಕುಳಿತಿರುವ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಣ್ಣು ಮುಚ್ಚಿ ಕುಳಿತ್ತಿದ್ದು ನೋಡಿದರೇ ಖಾಸಗಿ ಶಾಲೆಗಳ ಜೊತೆ ಶ್ಯಾಮಿಲು ಆಗಿದ್ದಾರೆ ಎಂಬ ಅನುಮಾನ ಬರುತ್ತಿದೆ. ಹಾಗೂ ಆರ್.ಟಿ.ಇ.ಮಕ್ಕಳಿಗೆ ಉಚಿತ ಶಿಕ್ಷಣ ಕೊಡಬೇಕೆಂದು ನಿಯಮವಿದ್ದರುಬ ಕೆಲ ಶಾಲೆಗಳು ಆರ್.ಟಿ.ಇ.ಅಡಿಯಲ್ಲಿ ಆಯ್ಕೆಯಾದ ಮಕ್ಕಳಿಗೆ 3 ಸಾವಿರ ದಿಂದ 5 ಸಾವಿರ ವಸೂಲಿ ಮಾಡುತ್ತಿದ್ದಾರೆ ಹಾಗಾಗಿ ಕೂಡಲೇ ಡಿ.ಡಿ.ಪಿ.ಐ ಮತ್ತು ಜಿಲ್ಲಾಧಿಕಾರಿಗಳು ಕಾನೂನು ಉಲ್ಲಂಘನೆ ಮಾಡಿದ ಶಾಲೆಗಳ ವಿರುದ್ಧ ಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ಎಸ್.ಎಫ್.ಐ ಸಂಘಟನೆ ಬಿ.ಇ.ಓ ಇಲಾಖೆ ಮುಂದೆ ಹಗಲು ರಾತ್ರಿ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದ್ದಾರೆ.ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಅಮರೇಶ ಕಡಗದ ತಾಲೂಕಾಧ್ಯಕ್ಷ ಗ್ಯಾನೇಶ ಕಡಗದ ಮಂಜುನಾಥ ಡಗ್ಗಿ ಮರಿನಾಗ ಶಿವುಕುಮಾರ ಹನುಮಂತ ಇತರರಿದ್ದರು.

ನೀಲೂರ, ಕನಕಪುರಗಳಲ್ಲಿ ಕೆರೆ ಹೂಳೆತ್ತುವ ಕೆಲಸ ಆರಂಭ



ಮೇ 10 ರಂದು ಅಫ್ಜಲಪುರ ತಾಲ್ಲೂಕಿನ ನೀಲೂರ ಗ್ರಾಮದಲ್ಲಿ ಕೆರೆ ಹೂಳೆತ್ತುವ ಕಾಮಗಾರಿಯನ್ನು ಆರಂಭಿಸಲಾಯಿತು. ಹಿಂದಿನ ದಿನ ನೀಲೂರು ಮತ್ತು ನೀಲೂರು ತಾಂಡಾದಲ್ಲಿ ಮನರೇಗಾ ಅಭಿಯಾನ ನಡೆಸಿ 133 ಕೆಲಸಗಾರರ ಫಾರಂ 6ನ್ನು ಕೆಲಸ ಕೇಳಿ ಅರ್ಜಿ ಸಲ್ಲಿಸಲಾಗಿತ್ತು. ಗುಡೂರ ಗ್ರಾಮ ಪಂಚಾಯತ್‌ನಿಂದ ತ್ವರಿತವಾಗಿ ಎನ್.ಎಂ.ಆರ್. ಸೃಜಿಸಿ ಇಂದು ಬೆಳಿಗ್ಗೆ ಕೆಲಸಗಾರರಿಗೆ ಕೆರೆ ಹೂಳೆತ್ತುವ ಕೆಲಸವನ್ನು ಒದಗಿಸಲಾಯಿತು. ಕಾಮಗಾರಿಯನ್ನು ಆರಂಭಿಸಿ ಅಶ್ವಿನಿ ಮದನಕರ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ನೀಲಾ ಕೆ ಮಾತನಾಡಿದರು. ಜನವಾದಿ ಮಹಿಳಾ ಸಂಘಟನೆಯ ನಂದಾದೇವಿ ಮಂಗೊಂಡಿ, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ, ಡಿಇಓ ಸಂಗಮೇಶ್, ಬಿಲ್ ಕಲೆಕ್ಟರ್ ಶಿವಲಿಂಗಪ್ಪ ಮತ್ತು ಕರೀಂ, ಶಿಕ್ಷಕ ದತ್ತಾತ್ರೇಯ ಮುಂತಾದವರು ಹಾಜರಿದ್ದರು.

ಮೇ 5ರಂದು ಚಿಂಚೋಳಿ ತಾಲ್ಲೂಕಿನ ಕನಕಪುರ ಗ್ರಾಮದಲ್ಲಿ ಮನರೇಗಾದಡಿ ಕ್ಷೇತ್ರಬದು ಕಾಮಗಾರಿಯನ್ನು ಆರಂಭಿಸಲಾಯಿತು. ಸಂಘಟನೆಗಳು ಈ ಗ್ರಾಮದ ಎಲ್ಲ ಗ್ರಾಮಗಳಲ್ಲಿ ಮನರೇಗಾ ಅಭಿಯಾನ ನಡೆಸಿ 612 ಜನರು ಕೆಲಸಕ್ಕಾಗಿನ ಅರ್ಜಿ ನಮೂನೆ 6 ನ್ನು ಸಲ್ಲಿಸಲಾಗಿತ್ತು. ಕಾಮಗಾರಿಯ ಉದ್ಘಾಟನೆಯನ್ನು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಾದ ಅನಿಲ ರಾಠೋಡ ಇವರು ನೆರವೇರಿಸಿದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ನೀಲಾ, ಜಿಲ್ಲಾ ಕಾರ್ಯದರ್ಶಿ ನಂದಾದೇವಿ ಮಂಗೊಂಡಿ, ತಾಜಸುಲ್ತಾನಪುರ ಘಟಕದ ಜೆ.ಎಂ.ಎಸ್. ಮುಖಂಡರಾದ ಅಶ್ವಿನಿ ಮದನಕರ್ ಇವರುಗಳು ಮಾತನಾಡಿದರು. ಬೆವರಹನಿ ಬಳಗದ ನಿಂಗಪ್ಪ ಮಂಗೊಂಡಿ, ಸೌಭಾಗ್ಯಮ್ಮ ಮತ್ತಿತರರು ಹಾಜರಿದ್ದರು. ಗ್ರಾಮ ಪಂಚಾಯತನ ಅಭಿವೃದ್ಧಿ ಅಧಿಕಾರಿಗಳಾದ ಸುರೇಶ ಚಿಕ್ಕರೆಡ್ಡಿ ಇವರು ಹಾಜರಿದ್ದರು. ಹಾಗೆಯೇ ಕ್ಷೇತ್ರ ಸಹಾಯಕರಾದ ಶ್ರೀಧರ, ಗ್ರಾಮ ಪಂಚಾಯತನ ಉಪಾಧ್ಯಕ್ಷೆ ಮತ್ತಿತರರು ಹಾಜರಿದ್ದರು.

#BBMP_ಪೌರಕಾರ್ಮಿಕರ ಪಟ್ಟಿಯನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದರಷ್ಟೇ ಸಾಲದು. ಪೌರ ಕಾರ್ಮಿಕ ಕೆಲಸಕ್ಕೂ ಸೇರದೆ, ಒಮ್ಮೆಯೂ ಆ ಕೆಲಸ ಮಾಡದೆ, ತಮ್ಮ ಖಾತೆಗೆ ಬರುವ ವೇತನವನ್ನೂ ಪಡೆಯಲಾಗದೆ, ಯಾರದೋ ರಾಜಕಾರಣಿಗಳ ಮತ್ತು ಗುತ್ತಿಗೆದಾರರ ವಂಚನೆಯ ಮಾತುಗಳಿಗೋ, ಅವರ ಮೇಲಿರುವ ಭಯಕ್ಕೋ, ಪಿಎಫ್ ಮತ್ತು ಇ.ಎಸ್.ಐ. ಸೌಲಭ್ಯ ಸಿಗುತ್ತದೆಂಬ ಭರವಸೆಯ ಮಾತುಗಳಿಗೆ ಮರುಳಾಗಿಯೋ, ತಮ್ಮ ಪೋಟೋ ಮತ್ತು ಆಧಾರ್ ಸಂಖ್ಯೆ ನೀಡಿ, ಬ್ಯಾಂಕ್ ಖಾತೆ ಮಾಡಿಸಿ, ಬ್ಯಾಂಕಿನ ಪಾಸ್ ಬುಕ್ ಮತ್ತು ಎಟಿಎಂ ಕಾರ್ಡ್ ಅನ್ನು ಗುತ್ತಿಗೆದಾರರ ಬಳಿಯೇ ಬಿಟ್ಟು ಮೋಸಹೋಗಿರುವ ನಕಲಿ ಪೌರಕಾರ್ಮಿಕರೂ ಬಹಳಷ್ಟು ಮಂದಿ ಇದ್ದಾರೆ. ಅಂತವರು ಬೇರೆ ಬೇರೆ ಉದ್ಯೋಗ ಮಾಡುತ್ತಿದ್ದಾರೆ. ಎಂದೂ ಯಾವುದೇ ಕೆಲಸಕ್ಕೆ ಸೇರದ ಗೃಹಿಣಿಯರೂ ಇದ್ದಾರೆ. ಅವರನ್ನೆಲ್ಲಾ ಪತ್ತೆ ಹಚ್ಚಬೇಕಾದರೆ ಉನ್ನತ ಮಟ್ಟದ ತನಿಖೆ ಅಗತ್ಯ. ನಗರದ ಸ್ವಚ್ಚತೆಗೆ ವೆಚ್ಚಮಾಡುವ ಅರ್ಧದಷ್ಟು ಹಣ ಇಂತಹ ವಂಚಕ ರಾಜಕಾರಣಿಗಳು/ಗುತ್ತಿಗೆದಾರರ ಪಾಲಾಗುತ್ತಿದೆ. ಇದು ಪಕ್ಷಾತೀತವಾಗಿ ನಡೆಯುತ್ತಿದೆ. ನಗರ ಪಾಲಿಕೆಯ ಅಧಿಕಾರಿಗಳೂ ಇದರಲ್ಲಿ ಷಾಮೀಲಾಗಿದ್ದಾರೆ. ಈ ಕಳ್ಳ ವ್ಯವಹಾರ ಪ್ರತಿಯೊಬ್ಬ ಕಾರ್ಪೊರೇಟರ್ ಗೂ ತಿಳಿದೇ ಇದೆ. ಉನ್ನತ ಮಟ್ಟದ ತನಿಖೆ ಮಾಡಿ ಇಂತಹ ವಂಚಕರಿಗೆ ಶಿಕ್ಷೆ ವಿಧಿಸುವಂತಾಬೇಕು. ಆಗ ಮಾತ್ರ ಸ್ವಚ್ಚ ನಗರಗಳ ಪಟ್ಟಿಯಲ್ಲಿ ಮೇಲಿನ ಸ್ಥಾನ ಪಡೆಯಲು ಸಾಧ್ಯ.

ಸಿ ಸಿದ್ದಯ್ಯ

ಮರಳು ಮಾಫಿಯಾ ವಿರುದ್ಧ 15 ದಿನಗಳ ಉಪವಾಸ ಸತ್ಯಾಗ್ರಹ



ಗದಗ ಜಿಲ್ಲೆಯ ಮರಳು ಮಾಫಿಯಾ ವಿರುದ್ದ ಕಟ್ಟಡ ಕಾರ್ಮಿಕರು ಮತ್ತು ಕಂಟ್ರಾಕ್ಟರುಗಳು 15 ದಿನಗಳ ಉಪವಾಸ ಸತ್ಯಾಗ್ರಹ ಹೂಡಿದ್ದರು. ಸಿಐಟಿಯು ಸಂಘಟಿಸಿದ ಹೋರಾಟದ ನಾಯಕತ್ವವನ್ನು ಸಿಪಿಐ(ಎಂ) ಗಜೇಂದ್ರಗಡದ ವಾರ್ಡ್ ಕೌನ್ಸಿಲರ್ ಮಲ್ಲಿಕಾರ್ಜುನ ಹಡಪದ, ಶಿವಾಜಿ ಪೆಟ್ಟ ಅವರು ವಹಿಸಿದ್ದರು. ಮರಳು ಮಾಫಿಯಾ ನಿಗ್ರಹಿಸಬೇಲು ಮತ್ತು ಮರಳು ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಅವರು ಒತ್ತಾಯಿಸುತ್ತಿದ್ದರು.

ಕೇಳಿಸಿದ್ದು

ಭಾರತದ ನಿವೃತ್ತ ನೌಕಾ ಅಧಿಕಾರಿ ಕುಲಭೂಷಣ್ ಜಾಧವ್ ಅವರಿಗೆ ಗೂಢಚರ್ಯೆ ಆರೋಪದಲ್ಲಿ ಪಾಕಿಸ್ತಾನದ ಸೇನಾ ನ್ಯಾಯಾಲಯ ವಿಧಿಸಿರುವ ಮರಣ ದಂಡನೆಗೆ ಹೇಗ್‌ನಲ್ಲಿರುವ ಅಂತರರಾಷ್ಟ್ರೀಯ ನ್ಯಾಯಾಲಯ (ಐಸಿಜೆ) ತಡೆ ನೀಡಿದೆ. .. ..ಪಾಕಿಸ್ತಾನದ ಜೊತೆಗಿನ ಈ ವಿವಾದ ಪರಿಹಾರಕ್ಕಾಗಿ ಮೂರನೆಯವರನ್ನು ಭಾರತ ತೊಡಗಿಸಿಕೊಂಡಿದ್ದೇ ಇಲ್ಲಿ ಅಚ್ಚರಿಯ ಸಂಗತಿ. ಇದು ಈವರೆಗೆ ಕಟ್ಟಿಕೊಂಡು ಬಂದಿರುವ ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳಿಗೆ ತದ್ವಿರುದ್ಧವಾದದ್ದು. ಹೀಗಾಗಿ ಇದು ಕೆಲವು ವಲಯಗಳಲ್ಲಿ ಟೀಕೆಗಳಿಗೆ ಕಾರಣವಾಗಬಹುದು... ವಿವಾದ ಪರಿಹಾರದಲ್ಲಿ ಮೂರನೆಯ ಪಕ್ಷ ಅಥವಾ ಬಹುಪಕ್ಷೀಯ ಒಳಗೊಳ್ಳುವಿಕೆ ನಿರಾಕರಣೆ ಮೂಲಕ ರಾಷ್ಟ್ರದ ಸಾರ್ವಭೌಮತ್ವ ಪ್ರತಿಪಾದಿಸುವಂತಹದ್ದು ನೆಹರೂ ಅವರ ಪರಿಕಲ್ಪನೆ. ತನ್ನ ವ್ಯವಹಾರಗಳನ್ನು ನಿರ್ವಹಿಸಿಕೊಳ್ಳಲು ಭಾರತಕ್ಕೆ ಯಾವುದೇ ಹೊರಗಿನ ಅಧಿಕಾರ ಶಕ್ತಿಯ ನೆರವಿನ ಅಗತ್ಯವಿಲ್ಲ ಎಂಬುದು ಇದರ ಹಿಂದಿರುವ ಸಿದ್ಧಾಂತ ಎಂಬುದನ್ನು ನೆನಪಿಸಿಕೊಳ್ಳಬಹುದು.

– ಪ್ರಜಾವಾಣಿ ಸಂಪಾದಕೀಯ

ದಂತಗಳಿಲ್ಲದ ಆನೆ ಮತ್ತು ಫ್ಯಾಸೀವಾದ



ಅತಿಥಿ ಅಂಕಣ



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಮೋದಿ ನೇತೃತ್ವದ ಭಾಜಪ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಭಾರತದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳಲ್ಲಿ ಮಹತ್ತರವಾದ ಬದಲಾವಣೆಗಳು ಆಗುತ್ತಿವೆ. ದಿನಬೆಳಗಾದರೆ ಒಂದಲ್ಲ ಒಂದು ಹೊಸ ನೀತಿ ಅಥವಾ ಹೊಸ ಹೆಸರಿನ ಹಳೆಯ ನೀತಿಯ ಘೋಷಣೆಗಳು ಆಗುತ್ತಿವೆ. ಅಮಾಯಕರ ಮೇಲೆ ಗೋರಕ್ಷಕರ ದೌರ್ಜನ್ಯ, ಮರ್ಯಾದಾ ಹತ್ಯೆಗಳು, ಲೈಂಗಿಕ ಅಪರಾಧಗಳು, ಮಿಲಿಟರಿ ಆಕ್ರಮಣ–ಸೈನಿಕರ ಸಾವು–ನೋವಿನ ವೈಭವೀಕರಣ, ನಾಗರಿಕ ಜೀವನದಲ್ಲಿ ಹಿಂಸೆ ಮತ್ತು ಭಯೋತ್ಪಾದನೆ ಸಮಸ್ಯೆಗಳ ನಿರಂತರ ಉಲ್ಬಣ, ಅಲ್ಪಸಂಖ್ಯಾತರ ಕೌಟುಂಬಿಕ ನ್ಯಾಯವಿತರಣೆಯ ಪಲ್ಲಟಗಳು, ಸಮೂಹ ಮಾಧ್ಯಮಗಳ ಪರೋಕ್ಷ ನಿಯಂತ್ರಣ, ಸೆನ್ಸಾರ್ ನಿಯಮಗಳ ಅನೈತಿಕಾತ್ಮಕ ಬಳಕೆ, ರಾಜಕೀಯ ಅಧಿಕಾರಕ್ಕೆ ಧಾರ್ಮಿಕ ನಾಯಕರ ಪ್ರವೇಶ, ನೋಟುಗಳ ಅಮಾನ್ಯೀಕರಣ, ಚುನಾವಣೆಗಳಲ್ಲಿ ಕಪ್ಪುಹಣ–ವಂಚನೆಗಳ ಪಾತ್ರ, ಹವಾಮಾನ ವೈಪರೀತ್ಯಗಳು ಇವೇ ಮುಂತಾದವು ಈಚಿನ ದಿನಗಳ ಖಾಸಗಿ ಮತ್ತು ಸಾರ್ವಜನಿಕ ಚರ್ಚೆಗಳಲ್ಲಿ, ಸಮೂಹ ಮಾಧ್ಯಮಗಳಲ್ಲಿ ಮತ್ತೆ ಮತ್ತೆ ಕೇಳಿಬರುವ ಸಂಗತಿಗಳು.

ಮತ್ತೊಂದು ಕಡೆ, ಹೆಚ್ಚುತ್ತಿರುವ ನಿರುದ್ಯೋಗ, ಬೆಲೆಯೇರಿಕೆ, ಮಿಲಿಟರಿ ವೆಚ್ಚ, ಬೆಳೆ ವೈಫಲ್ಯಗಳು, ವಿದೇಶೀ ಸಾಲಗಳು, ರೈತರ ಆತ್ಮಹತ್ಯೆ, ಮತ್ತು ಕಾರ್ಮಿಕ ಕಾಯಿದೆಗಳ ತಿದ್ದುಪಡಿ, ಬಡ್ಡಿದರಗಳ ಇಳಿಕೆ, ತೆರಿಗೆ ಕಾಯಿದೆಗೆ ತಿದ್ದುಪಡಿ, ನ್ಯಾಯ ವಿತರಣೆ ಮತ್ತು ಆಸ್ತಿಹಕ್ಕಿಗೆ ಸಂಬಂಧಿಸಿದಂತೆ ಶ್ರೀಮಂತರ ಪರವಾಗಿ ಉದಾರಗೊಳ್ಳುತ್ತಿರುವ ಪ್ರಭುತ್ವದ ಆಡಳಿತಾತ್ಮಕ ನೀತಿಗಳು ಜನಸಾಮಾನ್ಯರ ಜೀವನವನ್ನು ಗಾಢವಾಗಿ ತಟ್ಟುತ್ತಿದ್ದರೂ ಸಾರ್ವಜನಿಕವಾಗಿ ಚರ್ಚೆಗೆ ಬರದೆ, ಸಮಾಜ ಸುಧಾರಕರು, ಎಡಪಂಥೀಯ ಚಿಂತಕರು, ರಾಜಕೀಯ ಕಾರ್ಯಕರ್ತರು ಮತ್ತು ಪ್ರಗತಿಪರರ ಬೌದ್ಧಿಕ ವಲಯಗಳಲ್ಲಿ ಮಾತ್ರ ಮುಖ್ಯವೆಂದು ಪರಿಗಣಿತವಾಗುತ್ತಿವೆ.

ಪ್ರಜಾತಂತ್ರದ ಮುಸುಕಿನಲ್ಲಿ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಕೇಂದ್ರೀಕೃತಗೊಳ್ಳುತ್ತಾ ಏಕಪಕ್ಷೀಯವಾಗಿ ಬಲಗೊಳ್ಳುತ್ತಿರುವ ಭಾರತದ ಪ್ರಭುತ್ವದಲ್ಲಿ ಫ್ಯಾಸೀವಾದ ದಿನೇ ದಿನೇ ಬಲಗೊಳ್ಳುತ್ತಿರುವ ಈ ದಿನಗಳಲ್ಲಿ ಫ್ಯಾಸಿಸಂ ಕುರಿತು ಆತಂಕ ತುಂಬಿದ ಚರ್ಚೆ–ವಾಗ್ವಾದಗಳೂ ಎಡ–ಬಲಗಳ ದಂಡೆಗಳನ್ನು ಕಟ್ಟಿಕೊಂಡು ಹರಿಯತೊಡಗಿವೆ.

ಸಾವರ್‌ಕರ್, ಗೋಲ್ವಾಲ್‌ಕರ್ ಪ್ರಣೀತ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ನಿಂತ ಆರೆಸ್ಸೆಸ್ ಅನ್ನು ಮಾತೃಸಂಸ್ಥೆಯಾಗಿ ಉಳ್ಳ ಸಂಘಪರಿವಾರ, ಅದರ ರಾಜಕೀಯ ಮುಖವಾದ ಜನಸಂಘ, ಮತ್ತು ಈಗಿನ ಭಾಜಪದ ರಾಜಕೀಯ ಏಣಿಯನ್ನು ಬಳಸಿ ಕಾರ್ಪೊರೇಟ್ ಉದ್ಯಮಿ–ವ್ಯಾಪಾರಿಗಳ ಬಲದಿಂದ ಮೇಲೆ ಬಂದ ನರೇಂದ್ರ ಮೋದಿ ಭಾರತದ ಪ್ರಧಾನಿಯಾದ ಮೇಲೆ ಫ್ಯಾಸಿಸಂನ ಉಗಮ, ಚಾರಿತ್ರಿಕ ಹಿನ್ನೆಲೆ, ಭಾರತದ ರಾಜಕೀಯದಲ್ಲಿ ನಿರ್ದಿಷ್ಟವಾಗಿ ಅದರ ಪ್ರವೇಶ ಇವೆಲ್ಲದರ ಬಗ್ಗೆ ಮತ್ತೊಮ್ಮೆ ಪ್ರಗತಿಶೀಲರು, ಸೆಕ್ಯುಲರ್‌ವಾದಿಗಳು, ಮತ್ತು ಸಮಾಜವಾದಿಗಳ ಗಮನ ಹರಿದಿದೆ. ಇಂದಿನ ಭಾರತದ ರಾಜಕಾರಣದಲ್ಲಿ ಬಲಗೊಳ್ಳುತ್ತಿರುವ ಫ್ಯಾಸೀವಾದದ ಸ್ವರೂಪ ಎಂಥದು? ಇಟಲಿಯ ಮುಸೋಲಿನಿ ಮತ್ತು ಜರ್ಮನಿಯ ಹಿಟ್ಲರ್ ಅನುಸರಿಸಿದ ಫ್ಯಾಸಿಸಂ–ನಾಝೀ ಸರ್ವಾಧಿಕಾರ ಮತ್ತು ನರೇಂದ್ರ ಮೋದಿ ನೇತೃತ್ವದಲ್ಲಿ ಭಾಜಪ ಸರ್ವಾಧಿಕಾರವಾಗಿ ಬಲಗೊಳ್ಳುತ್ತಿರುವ ಫ್ಯಾಸೀವಾದದ ನಡುವಿನ ಸಾಮ್ಯತೆ–ವೈದೃಶ್ಯಗಳು ಯಾವುವು? ಜಾಗತಿಕವಾದ ಬಂಡವಾಳವಾದವನ್ನು ಅದರ ಎಲ್ಲ ರೂಪಗಳಲ್ಲಿ ಗುರುತಿಸಿ ಸೆಣಸಬಲ್ಲ ಏಕೈಕ ಪರ್ಯಾಯ ಸಮಾಜವಾದವನ್ನು ಈ ನೆಲಕ್ಕೆ ಪರಕೀಯವಾದ, ಪಾಶ್ಚಾತ್ಯ ಸಿದ್ಧಾಂತ ಎಂದು ಜರೆಯುವ ಸಂಘಪರಿವಾರ ತನ್ನ ಪರಿಕಲ್ಪನೆಯ ಅಖಂಡಬಾರತ ಮತ್ತು ಹಿಂದುತ್ವದ ಭಾರತೀಯತೆಯನ್ನು ಸಾಕಾರಗೊಳಿಸಲು ಇಟಲಿ–ಜರ್ಮನಿ ಮೂಲದ, ಐರೋಪ್ಯ–ಪಾಶ್ಚಾತ್ಯ ಫ್ಯಾಸೀವಾದ–ನಾಜೀವಾದಗಳನ್ನು ಏಕೆ ಮುನ್ನೊತ್ತುತ್ತದೆ? ಇವೇ ಮುಂತಾದ ಪ್ರಶ್ನೆಗಳು ಪ್ರಗತಿಶೀಲ ಬೌದ್ಧಿಕರಲ್ಲಿ ಸ್ವಲ್ಪ ಮಟ್ಟಿನ ಗೊಂದಲವನ್ನೂ ಉಂಟುಮಾಡುತ್ತಿವೆ.

ಡಾ.ಲಾರೆನ್ಸ್ ಬ್ರಿಟ್ಸ್ ಎಂಬುವರು ಇಟಲಿಯ ಮುಸೋಲಿನಿ, ಜರ್ಮನಿಯ ಹಿಟ್ಲರ್, ಸ್ಪೇನ್ ದೇಶದ ಫ್ರಾಂಕೊ, ಇಂಡೋನೇಶ್ಯಾದ ಸುಹಾರ್ತೊ ಮತ್ತು ಲ್ಯಾಟಿನ್ ಅಮೆರಿಕಾ ದೇಶಗಳ ಪ್ರಭುತ್ವಗಳನ್ನು ಅಭ್ಯಸಿಸಿ ಫ್ಯಾಸಿಸಂ ನ 14 ಪ್ರಮುಖ ಗುಣಲಕ್ಷಣಗಳನ್ನು ಪಟ್ಟಿಮಾಡಿದ್ದಾರೆ. ಅವು ಹೀಗಿವೆ:

1. **ಅಡೆತಡೆಯಿಲ್ಲದೆ ಬಲಾಢ್ಯವಾಗಿ ಬೆಳೆಯುವ ರಾಷ್ಟ್ರೀಯವಾದ.** ಫ್ಯಾಸಿಸ್ಟ್ ಸರ್ಕಾರಗಳು ರಾಷ್ಟ್ರೀಯವಾದ ಧ್ಯೇಯ, ಘೋಷವಾಕ್ಯ, ಸಂಕೇತ, ರಾಷ್ಟ್ರಭಕ್ತಿಗೀತೆ ಇತ್ಯಾದಿಗಳನ್ನು ಬಳಸಿಕೊಳ್ಳುತ್ತವೆ. ಎಲ್ಲಿ ನೋಡಿದರೂ ಪಕ್ಷಧ್ವಜ–ರಾಷ್ಟ್ರಧ್ವಜಗಳೇ ರಾರಾಜಿಸುತ್ತವೆ.
2. **ಮಾನವ ಹಕ್ಕುಗಳ ಬಗ್ಗೆ ತಿರಸ್ಕಾರ.** ಎಲ್ಲ ಫ್ಯಾಸಿಸ್ಟ್ ದೇಶಗಳಲ್ಲೂ ಶತ್ರುವಿನ ಭಯ ಮತ್ತು ಅಭದ್ರತೆಯ ಆತಂಕಗಳ ನೆಪವೊಡ್ಡಿ ಅಗತ್ಯ ಬಿದ್ದಾಗ ಕ್ರೌರ್ಯ, ಚಿತ್ರಹಿಂಸೆ, ಬಂಧನ, ಕೊಲೆ, ದೌರ್ಜನ್ಯಗಳು ತಪ್ಪಲ್ಲವೆಂದು, ಕೆಲವರ ಮಟ್ಟಿಗಂತೂ ಅನಿವಾರ್ಯವೆಂಬ ಭಾವನೆ ಜನಸಾಮಾನ್ಯರಲ್ಲಿ ಬರುವಂತೆ ಮಾಡುತ್ತಾರೆ.
3. **ಶತ್ರು ಅಥವಾ ಬಲಿಪಶುಗಳನ್ನು ತೋರಿಸಿ ಜನರನ್ನು ಒಗ್ಗೂಡಿಸುವುದು.** 'ದೇಶೀಯ ಜನರ ಶತ್ರು' ಜಾತಿ, ವರ್ಣ ಮತ್ತು ಧರ್ಮ ಮೂಲದ ಅಲ್ಪಸಂಖ್ಯಾತರು, ಪ್ರಗತಿಪರರು, ಸಮಾಜವಾದಿಗಳು ಕಮ್ಯುನಿಸ್ಟರು ಮತ್ತು 'ಭಯೋತ್ಪಾದಕರು' ದೇಶೀಯ ಜನರ ಶತ್ರುಗಳೆಂದು ಬಿಂಬಿಸಿ ರಾಷ್ಟ್ರಭಕ್ತಿಯ ಉನ್ಮಾದದಲ್ಲಿ ಜನರು ತಮ್ಮನ್ನು ಬೆಂಬಲಿಸುವಂತೆ ಮಾಡುವುದು.
4. **ಸರ್ವೋನ್ನತ ಶಕ್ತಿಯಾಗಿ ಮಿಲಿಟರಿ.** ದೇಶದಲ್ಲಿನ ಜನರಿಗೆ ವ್ಯಾಪಕವಾದ ಸಮಸ್ಯೆಗಳಿದ್ದರೂ ಅವಕ್ಕಾಗಿ ಹಣವನ್ನು ವಿನಿಯೋಗಿಸದೆ ಮಿಲಿಟರಿಗಾಗಿ ಅಗಾಧ ಹಣವನ್ನು ಖರ್ಚು ಮಾಡುವುದು. ಸೈನಿಕರು ಮತ್ತು ಮಿಲಿಟರಿ ಸೇವೆಯನ್ನು ವೈಭವೀಕರಿಸುವುದು.
5. **ಪುರುಷ ಪರವಾದ ಲಿಂಗಭೇದ ನೀತಿ.** ಫ್ಯಾಸಿಸ್ಟ್ ದೇಶಗಳಲ್ಲಿನ ಸರ್ಕಾರಗಳಲ್ಲಿ ಗಂಡಿಗೆ ಅತಿ ಹೆಚ್ಚಿನ ಪ್ರಾಧಾನ್ಯತೆ ಇರುತ್ತದೆ. ಗಂಡು–ಹೆಣ್ಣಿನ ನಡುವೆ ಸಾಂಪ್ರದಾಯಿಕ ಅಂತರವನ್ನು ಕಟ್ಟುನಿಟ್ಟಾಗಿ ಕಾಯ್ದುಕೊಂಡು ಬರಲಾಗುತ್ತದೆ. ವಿಚ್ಛೇದನ, ಗರ್ಭಪಾತ ಮತ್ತು ಸಲಿಂಗಕಾಮದ ಬಗ್ಗೆ ದಮನಕಾರಿ ನೀತಿ ಇರುತ್ತದೆ. ಪ್ರಭುತ್ವವು ಕೌಟುಂಬಿಕ ಸಂಬಂಧಗಳ ಸರ್ವೋಚ್ಚ ಪೋಷಕನಂತೆ ವರ್ತಿಸುತ್ತದೆ.
6. **ಪ್ರಭುತ್ವ ನಿಯಂತ್ರಿತ ಸಮೂಹ ಮಾಧ್ಯಮ.** ಸರ್ಕಾರವೇ ನೇರವಾಗಿ ಇಲ್ಲವೆ ನಿಯಮಾಧಾರಿತವಾಗಿ, ಅಥವಾ ಸರ್ಕಾರದ ಪರವಾಗಿರುವಂಥ ಅಧಿಕಾರಿಗಳು, ಅಧಿಕೃತ ವಕ್ತಾರರ ಮೂಲಕ ಮಾಧ್ಯಮಗಳನ್ನು ನಿಯಂತ್ರಿಸುತ್ತದೆ. ಸೆನ್ಸಾರ್‌ಷಿಪ್, ಅದೂ ಯುದ್ಧ ನಡೆಯುವಾಗ ಸರ್ವೇಸಾಮಾನ್ಯ.
7. **ರಾಷ್ಟ್ರೀಯ ಭದ್ರತೆಯ ಗೀಳು.** ಜನಸಮುದಾಯವನ್ನು ಉತ್ತೇಜಿಸುವ ಸಾಧನವನ್ನಾಗಿ ಸರ್ಕಾರ ಅಭದ್ರತೆಯ ಭಯವನ್ನು ಬಳಸಿಕೊಳ್ಳುತ್ತದೆ.
8. **ಒಂದಕ್ಕೊಂದು ಬೆಸೆದುಕೊಂಡ ಸರ್ಕಾರ ಮತ್ತು ಧರ್ಮ.** ಫ್ಯಾಸಿಸ್ಟ್ ದೇಶಗಳಲ್ಲಿನ ಸರ್ಕಾರಗಳು ಬಹುಸಂಖ್ಯಾತರ ಧರ್ಮವನ್ನು ಜನಾಭಿಪ್ರಾಯವು ತಮ್ಮ ಪರವಾಗಿರುವಂತೆ ತಿರುಚುವ ಸಾಧನವನ್ನಾಗಿ ಬಳಸುತ್ತವೆ. ಆ ಧರ್ಮದ ಮೂಲ ಆಶಯಗಳು ಸರ್ಕಾರದ ನೀತಿ–ಅನುಷ್ಠಾನಗಳಿಗೆ ತದ್ವಿರುದ್ಧವಾಗಿದ್ದರೂ ಸಹ ಸರ್ಕಾರದ ಧುರೀಣರು ಸರ್ಕಾರ–ಧರ್ಮಗಳಲ್ಲಿ ಬಳಸುವ ಅದೇ ನುಡಿಗಳನ್ನು, ಆಲಂಕಾರಿಕ ಪದಗಳನ್ನು ಬಳಸುತ್ತಾರೆ.
9. **ಕಾರ್ಪೋರೇಟ್ ಶಕ್ತಿಗಳ ರಕ್ಷಣೆ.** ಫ್ಯಾಸಿಸ್ಟ್ ದೇಶಗಳ ಔದ್ಯಮಿಕ ಮತ್ತು ವ್ಯಾಪಾರೀ ಶ್ರೀಮಂತವರ್ಗವೇ ಬಹಳಷ್ಟು ಸಲ ತಮ್ಮ ಕೈಗೊಂಬೆಗಳೇ ಸರ್ಕಾರಗಳ ಮುಖಂಡರಾಗಿ ಅಧಿಕಾರದಲ್ಲಿರುವಂತೆ ನೋಡಿಕೊಳ್ಳುವ ಮೂಲಕ ಉಭಯತ್ರರಿಗೂ ಲಾಭದಾಯಕವಾದ ವ್ಯಾಪಾರ–ಅಧಿಕಾರ–ಶ್ರೀಮಂತಿಕೆಗಳ ಸಂಬಂಧದ ಮೇಲೆ ತಮ್ಮ ನಿಯಂತ್ರಣ ಸಾಧಿಸುತ್ತಾರೆ.
10. **ಶ್ರಮಿಕರ ಶಕ್ತಿಯ ದಮನ.** ಶ್ರಮಿಕರ ಸಂಘಟನಾ ಶಕ್ತಿ ಮಾತ್ರ ಫ್ಯಾಸಿಸ್ಟ್ ಸರ್ಕಾರವನ್ನು ವಿರೋಧಿಸುವ ನಿಜವಾದ ಸಾಮರ್ಥ್ಯವನ್ನು ಹೊಂದಿದೆಯಾದ್ದರಿಂದ ಶ್ರಮಿಕರ ಸಂಘಟನೆಗಳನ್ನು ಪೂರ್ತಿಯಾಗಿ ನಿರ್ನಾಮ ಮಾಡಲಾಗುತ್ತದೆ ಇಲ್ಲವೆ ಅಮಾನುಷವಾಗಿ ದಮನ ಮಾಡಲಾಗುತ್ತದೆ.
11. **ಕಲೆ ಮತ್ತು ಬುದ್ಧಿಜೀವಿಗಳ ಬಗೆಗೆ ತಿರಸ್ಕಾರ.** ಫ್ಯಾಸಿಸ್ಟ್ ದೇಶಗಳು ಉನ್ನತ ಶಿಕ್ಷಣ ಮತ್ತು ಅಕೆಡೆಮಿಕ್ ವಲಯದ ಜನರ ಬಗ್ಗೆ ಬಹಿರಂಗವಾಗೇ ದ್ವೇಷ–ತಿರಸ್ಕಾರಗಳನ್ನು ತೋರಿಸುತ್ತಾರೆ. ಇತರರಲ್ಲಿ ಅಂಥ ಧೋರಣೆ ಇದ್ದರೆ ಬೇಡವೆನ್ನುವುದಿಲ್ಲ. ಪ್ರಾಧ್ಯಾಪಕರು ಮತ್ತು ಇತರ ಅಕೆಡೆಮಿಕ್ ಜನರ ಮೇಲೆ ನಿರ್ಬಂಧ ಹೇರುವುದು ಇಲ್ಲವೆ ಅವರನ್ನು ಬಂಧಿಸುವುದು ಅಪರೂಪವೇನಲ್ಲ. ಕಲೆ ಮತ್ತು ಸಾಹಿತ್ಯದಲ್ಲಿನ ಮುಕ್ತ ಅಭಿವ್ಯಕ್ತಿಯ ಮೇಲೆ ಬಹಿರಂಗವಾಗೇ ಆಕ್ರಮಣ ಮಾಡುತ್ತಾರೆ.
12. **ಅಪರಾಧ ಮತ್ತು ಶಿಕ್ಷೆಯ ಗೀಳು.** ಫ್ಯಾಸಿಸ್ಟ್ ಸರ್ಕಾರಗಳ ಆಳ್ವಿಕೆಯಲ್ಲಿ ಪೋಲೀಸರಿಗೆ ಕಾನೂನು ಪಾಲನೆಗಾಗಿ ಇತಿಮಿತಿಯಿಲ್ಲದ ಅಧಿಕಾರ ದೊರೆಯುತ್ತದೆ. ರಾಷ್ಟ್ರಪ್ರೇಮದ ಹೆಸರಿನಲ್ಲಿ ಜನರು ಎಷ್ಟೋ ಸಲ ಪೋಲೀಸರ ಅಧಿಕಾರ ದುರುಪಯೋಗವನ್ನು, ಅವರ ನಾಗರಿಕ ಹಕ್ಕುಗಳ ಉಲ್ಲಂಘನೆಯನ್ನೂ ಸಹ ಸಹಿಸಿಕೊಳ್ಳಲು ಸಿದ್ಧರಿರುತ್ತಾರೆ. ಫ್ಯಾಸಿಸ್ಟ್ ದೇಶಗಳಲ್ಲಿ ಕೆಲವು ಸಲ, ಅನಿರ್ಬಂಧಿತ ಅಧಿಕಾರವನ್ನು ಪಡೆದ 'ರಾಷ್ಟ್ರೀಯ ಪೋಲೀಸ್ ದಳ'ವೂ ಇರುತ್ತದೆ.
13. **ವ್ಯಾಪಕವಾದ ಬಾಲಬಡುಕತನ (ಕ್ರೋನಿಯಿಸಂ) ಮತ್ತು ಭ್ರಷ್ಟಾಚಾರ.** ಬಹಳಷ್ಟು ಸಲ, ಫ್ಯಾಸಿಸ್ಟ್ ದೇಶಗಳನ್ನು ಪರಸ್ಪರವಾಗಿ ಸರ್ಕಾರದ ವಿವಿಧ ಅಧಿಕಾರ ಸ್ಥಾನಗಳಿಗೆ ನೇಮಿಸಿಕೊಂಡ ಬಂಧು–ಮಿತ್ರರು–ಬಾಲಬಡುಕರೇ ಆಳುತ್ತಾರೆ. ಅವರ ಬಂಧು–ಮಿತ್ರರನ್ನು ಉತ್ತರದಾಯಿತ್ವದ ಹೊಣೆಯಿಂದ ಪಾರುಮಾಡಲು ಸರ್ಕಾರದ ಸ್ಥಾನ–ಅಧಿಕಾರಗಳನ್ನು ಬಳಸುತ್ತಾರೆ. ಸರ್ಕಾರದ ಧುರೀಣರು ದೇಶದ ಸಂಪನ್ಮೂಲಗಳನ್ನು, ಬೊಕ್ಕಸವನ್ನು ತಮಗಾಗಿ ಬಳಸಿಕೊಳ್ಳುವುದು, ಅಷ್ಟೇ ಏಕೆ, ನೇರವಾಗಿ ಕದಿಯುವುದು ಸಹ ಫ್ಯಾಸಿಸ್ಟ್ ದೇಶಗಳಲ್ಲಿ ಅಪರೂಪವೇನಲ್ಲ.
14. **ಮೋಸಗಾರಿಕೆಯ ಮತದಾನ.** ಫ್ಯಾಸಿಸ್ಟ್ ದೇಶಗಳಲ್ಲಿ ಎಷ್ಟೋಸಲ ಮತದಾನವೆನ್ನುವುದು ಬರಿ ಬೂಟಾಟಿಕೆ. ಇನ್ನು ಕೆಲವು ಸಲ ಎದುರಾಳಿಗಳ ಮುಖಕ್ಕೆ ಮಸಿ ಬಳಿಯುವಂಥ ಪ್ರಚಾರ, ಎದುರಾಳಿ ಅಭ್ಯರ್ಥಿಯ ಹತ್ಯೆ, ಮತಗಳ ಸಂಖ್ಯೆಯನ್ನು, ಅಥವಾ ಮತದಾನದ ರಾಜಕೀಯ ಜಿಲ್ಲೆಗಳ ಸರಹದ್ದನ್ನು ನಿಯಂತ್ರಿಸಲು ಕಾಯಿದೆಯ ಬಳಕೆ, ಮಾಧ್ಯಮದ ದುರುಪಯೋಗಗಳ ಮೂಲಕ ಮತದಾನವನ್ನು ತಿರುಚಲಾಗುತ್ತದೆ. ಫ್ಯಾಸಿಸ್ಟ್ ದೇಶಗಳು ಮತದಾನವನ್ನು ತಿರುಚಲು ಅಥವಾ ನಿಯಂತ್ರಿಸಲು ನ್ಯಾಯಾಂಗವನ್ನೂ ಬಳಸಿಕೊಳ್ಳುವುದು ಮಾಮೂಲಿಯಾಗಿದೆ.

ಭಾರತದ ಇಂದಿನ ರಾಜಕೀಯದಲ್ಲಿ ಮೇಲೆ ಕಾಣಿಸಿದ ಎಷ್ಟು ಅಂಶಗಳಿವೆ ಎಂದು ನಿರ್ಧರಿಸಲು ಸಾಧ್ಯವಾದರೆ ಅಷ್ಟರ ಮಟ್ಟಿಗೆ ಮೋದಿ ನೇತೃತ್ವದ ಭಾಜಪ ಸರ್ಕಾರದ ಫ್ಯಾಸಿಸ್ಟ್ ಸ್ವರೂಪ ಸ್ಪಷ್ಟವಾಗುತ್ತಾ ಹೋಗುತ್ತದೆ.

ಫ್ಯಾಸಿಸಂ ಅಥವಾ ಫ್ಯಾಸೀವಾದ ಇಟಲಿಯ ಮುಸೋಲಿನಿ ಮತ್ತು ಜರ್ಮನಿಯ ಹಿಟ್ಲರ್ ಕಾಲಕ್ಕೇ ಮುಗಿದು ಹೋದ ವಿದ್ಯಮಾನವಲ್ಲ ಎಂಬುದು ವಿಶ್ವದ ರಾಜಕೀಯವನ್ನು ಗಮನಿಸುವ ಯಾರಿಗಾದರೂ ತಿಳಿಯುತ್ತದೆ. ಪ್ರಜಾತಂತ್ರ ಎಂಬುದು ಬಂಡವಾಳವಾದದ ಮುಖವಾಡವಾಗಿ ಇರುವತನಕ ಫ್ಯಾಸೀವಾದದ ನಗ್ನರೂಪ ಗೋಚರಿಸುವುದಿಲ್ಲ. ಆನೆಗೆ ತೋರಿಕೆಯ ಹಲ್ಲು, (ಅಂದರೆ ದಂತ) ಮತ್ತು ಜಗಿಯುವ ಹಲ್ಲು ಬೇರೆ ಬೇರೆ ಇರುವಂತೆ ಬಂಡವಾಳವಾದಕ್ಕೆ ಪ್ರಜಾತಂತ್ರ ಎಂಬುದು ತೋರಿಕೆಯ ಹಲ್ಲು (ದಂತ) ಮಾತ್ರ. ಫ್ಯಾಸಿಸಂ ಅದರ ಜಗಿಯುವ ಹಲ್ಲು. ಗತಿತಾರ್ಕಿಕ ಭೌತವಾದದ ದೃಷ್ಟಿಕೋನವನ್ನು ಬಳಸಿ ರಾಜಕೀಯವನ್ನು ಅರ್ಥಮಾಡಿಕೊಳ್ಳುವ ಸಮಾಜವಾದಿಗಳು ದಂತದಿಂದ ಮರುಳಾಗುವುದಿಲ್ಲ. ಅವರಿಗೆ ಜಗಿಯುವ ಹಲ್ಲು ಕಾಣಿಸುತ್ತದೆ. ಅವನ್ನು ನೋಡಲಾಗದ ಇತರರು ಸಮಾಜವಾದಿಗಳ ಮಾತನ್ನು ಉಪೇಕ್ಷಿಸುತ್ತಾರೆ.

ಹಾಗಿದ್ದರೆ, ಮೋದಿ ನೇತೃತ್ವದ ಭಾಜಪ ಅಧಿಕಾರಕ್ಕೆ ಬರುವ ಮೊದಲು ಭಾರತದಲ್ಲಿ ಫ್ಯಾಸಿಸಂ ಇರಲಿಲ್ಲವೆ? ಇದ್ದರೂ ಯಾಕೆ ಕಾಣಿಸುತ್ತಿರಲಿಲ್ಲ? ಹಾಗೆ ನೋಡಿದರೆ ಪ್ರಸ್ತುತ ಅಧಿಕಾರದಲ್ಲಿರುವ ಭಾಜಪ ಸರ್ಕಾರ ಅದಕ್ಕೆ ಹಿಂದೆ ಅಧಿಕಾರದಲ್ಲಿದ್ದ

ಪುಟ 15 ಕ್ಕೆ

ಬಿಜೆಪಿ ಆಟ ತ್ರಿಪುರಾದಲ್ಲಿ ನಡೆಯದು



ಕಳೆದ ವರ್ಷ ಅಸ್ಸಾಂ ಚುನಾವಣೆಗಳಲ್ಲಿ ಬಿಜೆಪಿಯ ವಿಜಯದ ಮತ್ತು ಈಶಾನ್ಯ ಪ್ರದೇಶದ ಅರುಣಾಚಲ ಮತ್ತು ಮಣಿಪುರದಲ್ಲಿ ಬಿಜೆಪಿ ನೇತೃತ್ವದ ಸರಕಾರಗಳ ರಚನೆಯ ನಂತರ ಆರೆಸ್ಸೆಸ್-ಬಿಜೆಪಿ ಈಗ ತ್ರಿಪುರ ಮತ್ತು ಎಡರಂಗ ಸರಕಾರದ ಮೇಲೆ ಗುರಿಯಿಟ್ಟಿವೆ. ಬಿಜೆಪಿ ಮತ್ತು ಆರೆಸ್ಸೆಸ್ ಹಿಂದುತ್ವ ಅಜೆಂಡಾವನ್ನು, ಎಡರಂಗ ಸರಕರದ ವಿರುದ್ಧ ಸುಳ್ಳು ಮಾಹಿತಿಗಳನ್ನು ಹರಡಲು ಅಪಾರ ಹಣ ಚೆಲ್ಲುತ್ತಿದ್ದಾರೆ. ಆದರೆ ಎಡರಂಗ ಸರಕಾರದ ಆದರ್ಶಪ್ರಾಯ ದಾಖಲೆಯ ಹಿನ್ನೆಲೆಯಲ್ಲಿ ಇಂತಹ ಸುಳ್ಳುಗಳ, ದೂಷಣೆಗಳ ಪ್ರಚಾರ ಜನಗಳ ಮೇಲೇನೂ ಪ್ರಭಾವ ಬೀರುವುದಿಲ್ಲ.



ಪ್ರಕಾಶ ಕಾರಟ್

ಬಿಜೆಪಿ ಅಧ್ಯಕ್ಷ ಅಮಿತ್ ಷಾ ಮುಂದಿನ ವರ್ಷದ ಆರಂಭದಲ್ಲಿ ತ್ರಿಪುರಾದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಎಡರಂಗ ಸರಕಾರವನ್ನು ಹೊರದಬ್ಬುವುದಾಗಿ ಸಾರಿದ್ದಾರೆ. ಇನ್ನೂ ಮುಂದುವರಿದು, ಎಡಪಂಥೀಯರನ್ನು ರಾಜ್ಯದಿಂದ ಉಚ್ಚಾಟಿಸಲಾಗುವುದು ಎಂದು ದಾವೆ ಹೂಡಿದ್ದಾರೆ.

ಅವರ ಆಕಾಂಕ್ಷೆಯ ಈಡೇರಿಕೆಯತ್ತ ಬಿಜೆಪಿ ಮತ್ತು ಆರೆಸ್ಸೆಸ್ ರಾಜ್ಯದಲ್ಲಿ ಹಿಂಸಾಚಾರ ಮತ್ತು ತಿಕ್ಕಾಟದ ಪರಿಸ್ಥಿತಿಗಳನ್ನು ನಿರ್ಮಿಸಲು ಹಗಲು ರಾತ್ರಿಯೆನ್ನದೆ ಹೆಣಗುತ್ತಿವೆ. ತ್ರಿಪುರಾಕ್ಕೆ ಅಮಿತ್ ಷಾ ಭೇಟಿಯ ಕೆಲವೇ ದಿನಗಳ ಮೊದಲು ಬಿಜೆಪಿ ಗೂಂಡಾಗಳು ಸಿಪಿಐ(ಎಂ) ಕಾರ್ಯಕರ್ತರ ಮೇಲೆ ದಾಳಿಗಳ ಸರಣಿಯನ್ನೇ ಹರಿಯ ಬಿಟ್ಟರು. ಪಕ್ಷದ ದುಕ್ಲಿ ಉಪವಿಭಾಗ ಸಮಿತಿಯ ಕಾರ್ಯದರ್ಶಿಯ ಮನೆಯ ಮೇಲೆ ದಾಳಿ ನಡೆಸಿದರು, ಬಾಂಬುಗಳನ್ನು ಎಸೆದರು, ಹುಡಿಗುಟ್ಟಿದರು. ಎಸ್ಎಫ್ಐ ರಾಜ್ಯ ಸಮಿತಿ ಕಾರ್ಯದರ್ಶಿಯವರನ್ನು ಗಾಯಗೊಳಿಸಿದರು. ಅದೇ ರಾತ್ರಿ ಕಮಲ್‌ಪುರ ಸಬ್ ಡಿವಿಜನ್ ಸಿಪಿಐ(ಎಂ) ಕಾರ್ಯಕರ್ತರ ಮೇಲೂ ಹಲ್ಲೆಗಳನ್ನು ನಡೆಸಿ ಹತ್ತು ಕಾರ್ಯಕರ್ತರನ್ನು ಗಾಯಗೊಳಿಸದರು. ಎರಡು ದಿನಗಳ ನಂತರ ಅದೇ ಸಬ್‌ಡಿವಿಜನ್ನಿನ ಸಲೇಮದಲ್ಲಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ದಾಳಿ ನಡೆಯಿತು. ಇಂರಹ ಹಲ್ಲೆಗಳು ಬಿಜೆಪಿ ಕಾರ್ಯಕರ್ತರಮೇಲೆ ಹಲ್ಲೆ ಮಾಡಿ ಸಿಪಿಐ(ಎಂ) ಭಯವನ್ನು ಹರಡಿಸುತ್ತಿದೆಯೆಂದು ಆಪಾದಿಸಲು ಅಮಿತ್ ಷಾ ಗೆ ಅನುಕೂಲ ಆಗುವಂತೆ ರೂಪಿಸಲಾಗಿತ್ತು.

ಕಳೆದ ರ್ಷ ಅಸ್ಸಾಂ ಚುನಾವಣೆಗಳಲ್ಲಿ ಬಿಜೆಪಿಯ ವಿಜಯದ ಮತ್ತು ಈಶಾನ್ಯ ಪ್ರದೇಶದ ಅರುಣಾಚಲ ಮತ್ತು ಮಣಿಪುರದಲ್ಲಿ ಬಿಜೆಪಿ ನೇತೃತ್ವದ ಸರಕಾರಗಳ ರಚನೆಯ ನಂತರ ಆರೆಸ್ಸೆಸ್-ಬಿಜೆಪಿ ಈಗ ತ್ರಿಪುರ ಮತ್ತು ಎಡರಂಗ ಸರಕಾರದ ಮೇಲೆ ಗುರಿಯಿಟ್ಟಿವೆ. ಕಾಂಗ್ರೆಸ್ ಮತ್ತು ಟಿಎಂಸಿ ಬಲ ಕುಂಠಿತಗೊಂಡು ಅವರ ಕಾರ್ಯಕರ್ತರು ಬಿಜೆಪಿಯತ್ತ ಹೋಗುತ್ತಿರುವುದರಿಂದ ಅವರಿಗೆ ಧೈರ್ಯ ಬಂದಿದೆ. ಆರೆಸ್ಸೆಸ್ ನೆರವಿನಿಂದ ಬಿಜೆಪಿ ತ್ರಿಪುರಾದಲ್ಲಿ ಎಲ್ಲ ಕಮ್ಯುನಿಸ್ಟ್-ವಿರೋಧಿ ಶಕ್ತಿಗಳನ್ನು ಕ್ರೋಡೀಕರಿಸುವ ನಿರೀಕ್ಷೆ ಇಟ್ಟು-ಕೊಂಡಿದೆ.

ಆದರೆ, ಇತರ ಈಶಾನ್ಯ ಭಾರತದ ರಾಜ್ಯಗಳಿಗಿಂತ ಭಿನ್ನವಾಗಿ ತ್ರಿಪುರಾದಲ್ಲಿ ಬಿಜೆಪಿ ಜನಗಳ ನಡುವೆ ಆಳವಾಗಿ ಬೇರು ಬಿಟ್ಟಿರುವ ಸಿಪಿಐ(ಎಂ)ನ್ನು ಎದುರಿಸಬೇಕಾಗಿದೆ. ಅದು ಜನತೆಗೆ ಅತ್ಯುತ್ತಮ ಸೇವೆ ಸಲ್ಲಿಸಿರುವ ಉಜ್ವಲ ದಾಖಲೆಯಿರುವ ಮತ್ತು ಬುಡಕಟ್ಟು ಹಾಗೂ ಬುಡಕಟ್ಟೇತರ ಜನಗಳ ಐಕ್ಯತೆಯನ್ನು ಪ್ರತಿನಿಧಿಸುವ ಎಡರಂಗ ಸರಕಾರವನ್ನು ಎದುರಿಸಬೇಕಾಗಿದೆ.

ಇಂತಹ ಎದೆಗುಂದಿಸುವ ಕಾರ್ಯವನ್ನು ಪೂರೈಸಲು ಆರೆಸ್ಸೆಸ್ ಮತ್ತು ಅದರ ವಿವಿಧ ಅಂಗ ಸಂಘಟನೆಗಳು ಹಿಂದುತ್ವ ಅಜೆಂಡಾವನ್ನು ಸಕ್ರಿಯವಾಗಿ ಹರಡುತ್ತಿವೆ. ಬಿಜೆಪಿ ಮತ್ತು ಆರೆಸ್ಸೆಸ್ ಕಾರ್ಯಕರ್ತರು ಎಡರಂಗ ಸರಕರದ ವಿರುದ್ಧ ಸುಳ್ಳು ಮಾಹಿತಿಗಳನ್ನು ಹರಡಲು ಅಪಾರ ಹಣ ಚೆಲ್ಲುತ್ತಿದ್ದಾರೆ.

ಬಿಜೆಪಿ ಈಗ ಈ ಹಿಂದಿನ ಕಾಂಗ್ರೆಸ್ ಪ್ರತಿಪಕ್ಷದ ಜಾಡನ್ನೇ ಅನುಸರಿಸುತ್ತಿದೆ, ಬುಡಕಟ್ಟು ಉಗ್ರಗಾಮಿ ಪಕ್ಷಗಳನ್ನು, ಐಪಿಎಫ್‌ಟಿ ಮತ್ತು ಐಎನ್‌ಪಿಟಿ ಗಳನ್ನು ಸೆಳೆಯಲು ಪ್ರಯತ್ನಿಸುತ್ತಿದೆ. ಆರೆಸ್ಸೆಸ್ ವಾರಪತ್ರಿಕೆ 'ಆರ್ಗನೈಸರ್' ಬುಡಕಟ್ಟು ಉಗ್ರಗಾಮಿ ಶಕ್ತಿಗಳನ್ನು ಅಣಿನೆರಸುವ ಈ ಹೆಜ್ಜೆಯನ್ನು ಪ್ರಶಂಸಿಸಿದೆ. ಐಪಿಎಫ್‌ಟಿ 'ಸ್ವತಂತ್ರ ತ್ರಿಪುರಾ'ದ ಕರೆ ನೀಡಿದ ಉಗ್ರಗಾಮಿ ಸಂಘಟನೆಯ ರಾಜಕೀಯ ಅಂಗ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅ ಕರೆಯನ್ನೀಗ ಅವರು ಈಗಿರುವ ಬುಡಕಟ್ಟು ಸ್ವಯಮಾಡಳಿತ ಜಿಲ್ಲಾ ಮಂಡಳಿ ಪ್ರದೇಶವನ್ನು ಒಡೆದು ಒಂದು ಪ್ರತ್ಯೇಕ ರಾಜ್ಯ ರಚಿಸಬೇಕೆಂಬ ಕರೆಯಾಗಿ ಮಾರ್ಪಡಿಸಿದ್ದಾರೆ. ಅಂದರೆ ತಮ್ಮ ಸಂಕುಚಿತ ರಾಜಕೀಯ ಅಜೆಂಡಾಕ್ಕಾಗಿ ಬುಡಕಟ್ಟು ಜನಗಳು ಮತ್ತು ಬುಡಕಟ್ಟೇತರ ಜನಗಳ ನಡುವೆ ಬೆಸೆದಿರುವ ಐಕ್ಯತೆಯನ್ನು ಮುರಿಯಲೂ ಅದು ಹೇಸುವುದಿಲ್ಲ ಎಂಬುದನ್ನು ಇದು ತೋರಿಸುತ್ತದೆ.

ಬಿಜೆಪಿ ಎತ್ತಿಕೊಂಡಿರುವ ಇನ್ನೊಂದು ಶಸ್ತ್ರವೆಂದರೆ ಎಡರಂಗ ಸರಕಾರ ಮತ್ತು ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ವಿರುದ್ಧ ಸುಳ್ಳು ದೂಷಣೆಗಳನ್ನು ಹರಿಯ ಬಿಡುವುದು.

ಕೇಂದ್ರ ಮಂತ್ರಿಗಳು ತ್ರಿಪುರಾಕ್ಕೆ ಭೇಟಿ ನೀಡುತ್ತಿದ್ದಾರೆ, ಪ್ರಾಜೆಕ್ಟ್ ಜಾರಿ ವರದಿಗಳನ್ನು, ಬಳಕೆ ವರದಿಗಳನ್ನು ಸಲ್ಲಿಸುತ್ತಿಲ್ಲ ಎಂದು ಆಪಾದಿಸುತ್ತಿದ್ದಾರೆ. ಅಮಿತ್ ಷಾರವರನ್ನು ನಂಬುವಿರಾದರೆ, ಕಳೆದ 25 ವರ್ಷಗಳಲ್ಲಿ ತ್ರಿಪುರಾದಲ್ಲಿ ಎಡರಂಗದ ಆಳ್ವಿಕೆಯ ಅಡಿಯಲ್ಲಿ ಆಗಿರುವ ಅಭಿವೃದ್ಧಿ ಸೊನ್ನೆ. ಮುಖ್ಯಮಂತ್ರಿಗಳು ಮತ್ತು ಸಿಪಿಐ(ಎಂ) ಮುಖಂಡರು ಚಿಟ್‌ಫಂಡ್ ಹಗರಣಗಳಲ್ಲಿ ಸಿಲುಕಿದ್ದಾರೆ ಎಂದು ಆಪಾದಿಸುತ್ತಿದ್ದಾರೆ. ಚಿಟ್‌ಫಂಡ್ ಕೇಸುಗಳನ್ನು ಸಿಬಿಐಗೆ ಒಪ್ಪಿಸಿ ನಿಮ್ಮ ಪ್ರಾಮಾಣಿಕತೆಯನ್ನು ಸಾಬೀತು ಪಡಿಸಿ ಎಂದು ಮುಖ್ಯಮಂತ್ರಿಗಳಿಗೆ ಸವಾಲು ಹಾಕಿದ್ದಾರೆ.

ಇಂತಹ ಸುಳ್ಳು ಪ್ರಚಾರದೊಂದಿಗೆ ಬಿಜೆಪಿ ಕೇಂದ್ರ ಸರಕಾರ ರಾಜ್ಯ ಸರಕಾರದ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡುವುದಕ್ಕೆ ಅಡ್ಡಿಗಳನ್ನೊಡ್ಡುವ ಕ್ರಮಗಳನ್ನು ಕೈಗೊಂಡಿದೆ. ತ್ರಿಪುರಾದಲ್ಲಿ ಮನರೇಗಗೆ ಕೊಡುವ ಹಣದಲ್ಲಿ 50% ದಷ್ಟು ತೀವ್ರ ಕಡಿತ ಮಾಡಿದೆ. ತ್ರಿಪುರ ಈ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ 88 ದಿನಗಳ ಕೆಲಸ ಒದಗಿಸಿ ಸತತ ನಾಲ್ಕು ವರ್ಷಗಳ ಕಾಲ ದೇಶದಲ್ಲೇ ಪ್ರಥಮ ಸ್ಥಾನವನ್ನು ಪಡೆದಿದೆ. ಈಗ ಇದನ್ನು ಕುಂಠಿತಗೊಳಿಸುವ ಹುನ್ನಾರ ನಡೆದಿದೆ.

ಬಿಜೆಪಿ ತಾನು ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರ ಹೆಸರಿಗೆ ಮಸಿ ಬಳಿಯಬಹುದು ಎಂದು ನಂಬಿದ್ದರೆ, ಅದು ಒಂದು ಹುಚ್ಚರ ಸ್ವರ್ಗದಲ್ಲಿ ವಿಹರಿಸುತ್ತಿದೆ. ಸಾರಧಾ, ರೋಸ್ ವ್ಯಾಲಿ ಮತ್ತಿತರ ಚಿಟ್‌ಫಂಡ್ ಯೋಜನೆಗಳ ಹಗರಣಗಳು ಬಯಲಾದ ಕೂಡಲೇ ಮುಖ್ಯಮಂತ್ರಿಗಳು ಕೇಂದ್ರ ಸರಕಾರಕ್ಕೆ ಚಿಟ್‌ಫಂಡ್‌ಗಳಿಗೆ ಸಂಬಂಧಿಸಿದ ಎಲ್ಲ ಪ್ರಕರಣಗಳ ಸಿಬಿಐ ತನಿಖೆ ನಡೆಸುವಂತೆ ಪತ್ರ ಬರೆದಿದ್ದರು. ಒಟ್ಟು 37 ಕೇಸುಗಳಲ್ಲಿ 5 ಕೇಸುಗಳ ತನಿಖೆಯನ್ನು ಸಿಬಿಐ ನಡೆಸುತ್ತಿದೆ. ಉಳಿದ 32 ಕೇಸುಗಳ ತನಿಖೆಯನ್ನು ತ್ರಿಪುರ ಹೈಕೋರ್ಟಿನ ಉಸ್ತುವಾರಿಯಲ್ಲಿ ಒಂದು ವಿಶೇಷ ತನಿಖಾ ಪಡೆ(ಎಸ್‌ಐಟಿ) ನಡೆಸುತ್ತಿದೆ.

ಎಡರಂಗ ಸರಕಾರದ ಆದರ್ಶಪ್ರಾಯ ದಾಖಲೆಯ ಹಿನ್ನೆಲೆಯಲ್ಲಿ ಇಂತಹ ಸುಳ್ಳುಗಳ, ದೂಷಣೆಗಳ ಪ್ರಚಾರ ಜನಗಳ ಮೇಲೇನೂ ಪ್ರಭಾವ ಬೀರುವುದಿಲ್ಲ. ತ್ರಿಪುರಾ ದೇಶದಲ್ಲೇ ಅತೀ ಹೆಚ್ಚು ಸಾಕ್ಷರತೆಯನ್ನು ಹೊಂದಿದೆ; ಈಶಾನ್ಯ ಪ್ರದೇಶದಲ್ಲಿ ಅತಿ ಹೆಚ್ಚು ತಲಾ ಆದಾಯ ಹೊಂದಿದೆ; ಅರಣ್ಯ ಹಕ್ಕುಗಳ ಕಾಯ್ದೆಯ ಜಾರಿಯಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ, 1.28 ಲಕ್ಷ ಬುಡಕಟ್ಟು ಕುಟುಂಬಗಳಿಗೆ ಜಂಟಿ ಪಟ್ಟಾ ಸಿಕ್ಕಿದೆ; ಮನರೇಗ ಜಾರಿಯಲ್ಲಿ ತ್ರಿಪುರಾದ್ದು ಅತ್ಯುತ್ತಮ ಕಾರ್ಯನಿರ್ವಹಣೆ ಎಂದು ದಾಖಲಾಗಿದೆ. ದೇಶದಲ್ಲಿ ಗ್ರಾಮೀಣ ಅಭಿವೃದ್ಧಿಯಲ್ಲಿ ತ್ರಿಪುರ ಮೊದಲ ಐದು ರಾಜ್ಯಗಳಲ್ಲಿ ಇದೆ.

ಏಳನೇ ಎಡರಂಗ ಸರಕಾರ ತನ್ನ ಅಧಿಕಾರದ ಅವಧಿಯನ್ನು ಪೂರ್ಣಗೊಳಿಸುವತ್ತ ಸಾಗಿರುವಾಗ ರಾಜ್ಯದ ಜನತೆಯಲ್ಲಿ ಉನ್ನತ ಮಟ್ಟದ ಪ್ರಜಾಪ್ರಭುತ್ವ ಪ್ರಜ್ಞೆ ಇದೆ ಮತ್ತು ವಿವಿಧ ಸಮುದಾಯಗಳಲ್ಲಿ ದಶಕಗಳ ಜಂಟಿ ಹೋರಾಟಗಳು ಮತ್ತು ಜಂಟಿ ಪ್ರಯತ್ನಗಳಲ್ಲಿ ಬೆಸೆದ ಒಂದು ಗಟ್ಟಿಯಾದ ಐಕ್ಯತೆ ಇದೆ. ಬಿಜೆಪಿ ಮತ್ತು ಆರೆಸ್ಸೆಸ್‌ನ ಕೋಮುವಾದಿ ಮತ್ತು ಪ್ರತಿಗಾಮಿ ಹುನ್ನಾರಗಳನ್ನು ತ್ರಿಪುರಾದ ಜನತೆ ದೃಢವಾಗಿ ಧಿಕ್ಕರಿಸುತ್ತಾರೆ.

"ಅನ್ಯಾಯವನ್ನು ಮುಂದುವರೆಸುವುದಿಲ್ಲ, ಅದನ್ನು ಸಹಿಸುವುದೂ ಇಲ್ಲ ಎಂದು ಪ್ರತಿಜ್ಞೆ ಮಾಡೋಣ" ಎಂದದ್ದಕ್ಕೆ ಜೈಲ್ ಸೂಪರಿಂಟೆಂಡೆಂಟ್ ಅಮಾನತು

"ನಾವೆಲ್ಲ ಆತ್ಮವಿಮರ್ಶೆ ಮಾಡಿಕೊಳ್ಳಬೇಕು, ಸತ್ಯ ಹೊರಬರುತ್ತದೆ ಎಂದು ನನ್ನ ನಂಬಿಕೆ. ಯಾವುದೇ ಘಟನೆಯಲ್ಲಿ ಎರಡೂ ಕಡೆಗಳಲ್ಲಿ ಕೊಲ್ಲಲ್ಪಡುವವರು ನಮ್ಮದೇ ಜನಗಳು ತಾನೇ? ಅವರೆಲ್ಲರೂ ಭಾರತೀಯರು. ಆದ್ದರಿಂದಲೇ ಯಾರಾನ್ನೇ ಸಾಯಿಸಿದರೂ ನಮಗೆಲ್ಲರಿಗೂ ನೋವುಂಟಾಗುತ್ತದೆ.

ಆದರೆ ಬಂಡವಾಳಶಾಹಿ ವ್ಯವಸ್ಥೆಯನ್ನು ಆದಿವಾಸಿ ಪ್ರದೇಶಗಳಲ್ಲಿ ಹೇರಲಾಗುತ್ತಿದೆ. ಬುಡಕಟ್ಟು ಜನಗಳನ್ನು ಅವರ ಭೂಮಿಯಿಂದ ಹೊರದಬ್ಬಿ ಅರಣ್ಯಗಳನ್ನು ಹತೋಟಿಗೆ ತೆಗೆದುಕೊಳ್ಳಲು ಇಡೀ-ಇಡೀ ಹಳ್ಳಿಗಳನ್ನು ಸುಡಲಾಗುತ್ತಿದೆ, ಮಹಿಳೆಯರ ಮೇಲೆ ಅತ್ಯಾಚಾರ ಮಾಡಲಾಗುತ್ತಿದೆ. ......

ನಿಜಸಂಗತಿಯೆಂದರೆ ಅರಣ್ಯಗಳು ನೈಸರ್ಗಿಕ ಖನಿಜ ಸಂಪನ್ಮೂಲಗಳಿಂದ ಸಂಪದ್ಭರಿತವಾಗಿವೆ. ಅವನ್ನು ಉದ್ಯಮಿಗಳಿಗೆ, ಬಂಡವಾಳಶಾಹಿಗಳಿಗೆ ಮಾರಲು ಅವನ್ನು ಖಾಲಿ ಮಾಡಬೇಕಾಗಿದೆ. ಆದರೆ ಬುಡಕಟ್ಟು ಜನಗಳು ಖಾಲಿ ಮಾಡುವುದಿಲ್ಲ. ಏಕೆಂದರೆ ಅದು ಅವರ ಮನೆ. ಅವರಿಗೂ ನಕ್ಸಲ್‌ವಾದ ಕೊನೆಗೊಳ್ಳಬೇಕೆಂದಿದೆ. ಆದರೆ ದೇಶದ ರಕ್ಷಕರು ಅವರ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡುತ್ತಿದ್ದರೆ, ಅವರ ಮನೆಗಳನ್ನು ಸುಡುತ್ತಿದ್ದರೆ, ಸುಳ್ಳು ಕೇಸುಗಳಲ್ಲಿ ಅವರನ್ನು ಜೈಲಿಗೆ ಕಳಿಸುತ್ತಿದ್ದರೆ, ಅವರು ನ್ಯಾಯಕ್ಕ ಯಾರತ್ತ ತಿರುಗಬೇಕು.

ಸಿಬಿಐ ಇದನ್ನು ಹೇಳುತ್ತಿದೆ, ಸುಪ್ರಿಂ ಕೋರ್ಟ್ ಇದನ್ನು ಹೇಳುತ್ತಿದೆ.......

ಎಲ್ಲವೂ ಸರಿಯಾಗಿದ್ದರೆ, ಸರಕಾರಕ್ಕೆ ಏಕೆ ಹೆದರಿಕೆ?....

ನಾನು ಪೋಲೀಸ್ ಠಾಣೆಗಳಲ್ಲಿ 14-16 ವರ್ಷದ ಬುಡಕಟ್ಟು ಹೆಣ್ಣುಮಕ್ಕಳನ್ನು ನಗ್ನಗೊಳಿಸಿ ಚಿತ್ರಹಿಂಸೆಗೆ ಗುರಿಪಡಿಸಿರುವುದನ್ನು ಕಣ್ಣಾರೆ ನೋಡಿದ್ದೇನೆ. ಅವರ ಮುಂಗೈ ಮತ್ತು ಎದೆಗಳಿಗೆ ಇಲೆಕ್ಟ್ರಿಕ್ ಶಾಕ್‌ಗಳನ್ನು ಕೊಡಲಾಗಿದೆ. ನಾನು ಅದರ ಗುರುತುಗಳನ್ನು ನೋಡಿದ್ದೇನೆ. ನನ್ನನ್ನು ಇದು ಅತ್ಯಂತ ದಿಗಿಲುಗೊಳಿಸಿದೆ. ವಯಸ್ಕರಲ್ಲದವರ ಮೇಲೆ ಇಂತಹ ಮೂರನೇ ಡಿಗ್ರಿ ಚಿತ್ರಹಿಂಸೆ ಏಕೆ ಕೊಡುತ್ತಿದ್ದಾರೆ? ಅವರ ಶುಶ್ರೂಷೆಗೆ ಮತ್ತು ಅಗತ್ಯ ಕ್ರಮಗಳಿಗೆ ನಿರ್ದೇಶನಗಳನ್ನು ಕೊಟ್ಟಿದ್ದೇನೆ...."

ಇದು ಛತ್ತೀಸ್‌ಗಡದ ರಾಜಧಾನಿ ರಾಯಪುರದ ಸೆಂಟ್ರಲ್ ಜೈಲಿನಲ್ಲಿ ಡೆಪ್ಯುಟಿ ಸೂಪರಿಟೆಂಡೆಂಟ್ ಆಗಿರುವ ವರ್ಷಾ ಡೋಂಗ್ರೆ ತನ್ನ ಫೇಸ್‌ಬುಕ್‌ನಲ್ಲಿ ಹಾಕಿರುವ ಪೋಸ್ಟ್‌ನ ಕೆಲವು ಅಂಶಗಳು.

"ನಮಗೆ ಈಗಲೂ ಸಮಯವಿದೆ. ಆದರೆ ನಾವು ಸತ್ಯದ ಪರವಾಗಿ ನಿಲ್ಲುವಲ್ಲಿ ವಿಫಲವಾದರೆ ಬಂಡವಾಳಶಾಹಿಗಳು ನಮ್ಮನ್ನು ದಾಳಗಳಾಗಿ ಬಳಸುತ್ತಾರೆ ಮತ್ತು ಈ ದೇಶದಿಂದ ಎಲ್ಲ ಮಾನವತೆಯನ್ನೂ ಅಳಿಸಿ ಹಾಕುತ್ತಾರೆ. ಅನ್ಯಾಯವನ್ನು ಮುಂದುವರೆಸುವುದಿಲ್ಲ, ಅದನ್ನು ಸಹಿಸುವುದೂ ಇಲ್ಲ ಎಂದು ಪ್ರತಿಜ್ಞೆ ಮಾಡೋಣ. ಸಂವಿಧಾನ ಚಿರಾಯುವಾಗಲಿ. ಭಾರತ ಚಿರಾಯುವಾಗಲಿ" ಎಂದು ಈ ಸಾಕಷ್ಟು ದೀರ್ಘವಾದ ಅವರ ಫೇಸ್‌ಬುಕ್ ಪೋಸ್ಟ್ ಕೊನೆಗೊಳ್ಳುತ್ತದೆ.

ಈಗ ಈಕೆಯನ್ನು ಸಸ್ಪೆಂಡ್ ಮಾಡಲಾಗಿದೆ. ಇದು ಅನಿರೀಕ್ಷಿತವೇನಲ್ಲ. ಏಕೆಂದರೆ ಸರಕಾರೀ ಅಧಿಕಾರಿ. ಹೀಗೆಲ್ಲ ಸಾರ್ವಜನಿಕವಾಗಿ ಹೇಳುವಂತಿಲ್ಲ. ನಿಜ. ಇದು ಅಶಿಸ್ತು. ಆದರೆ ಇದೇ ಬಿಜೆಪಿ ರಾಜ್ಯ ಸರಕಾರ ಇಂತಹುದೇ ಸರ್ವಿಸ್ ರೂಲ್‌ಗಳನ್ನು ಉಲ್ಲಂಘಿಸುವ ಅಶಿಸ್ತು ತೋರಿಸಿರುವ ಹಿರಿಯ ಪೋಲೀಸ್ ಅಧಿಕಾರಿ ಎಸ್‌ಆರ್‌ಪಿ ಕಲ್ಲೂರಿ ಎಂಬಾತನನ್ನು ಸ್ಸಪೆಂಡ್ ಮಾಡಲಿಲ್ಲ, ಚಾರ್ಜ್‌ಶೀಟ್ ಕೂಡ ಹಾಕಲಿಲ್ಲ, ಮೆಡಿಕಲ್ ರಜಾದ ಮೇಲೆ ಕಳಿಸಲಾಗಿದೆಯಷ್ಟೇ, ಅದೂ ಆತನ ಫೇಸ್‌ಬುಕ್ ಪೋಸ್ಟ್ ಬಗ್ಗೆ ಬಹಳಷ್ಟು ಆಕ್ರೋಶ ವ್ಯಕ್ತವಾದ ಮೇಲೆ. ಈ ಅಧಿಕಾರಿ ಒಂದು ಖಾಸಗಿ ಕಂಪನಿಯ ಸಮಾರಂಭದಲ್ಲಿ ಪಾಲುಗೊಂಡಿದ್ದರು, ಮತ್ತು ಅದನ್ನು ನಂತರ ಸಾಮಾಜಿಕ ಮಾಧ್ಯಮದಲ್ಲಿಯೂ ಬರೆದಿದ್ದರು. ಅದೇ ಸಮಾರಂಭದಲ್ಲಿ ಕಳೆದ ವಾರ 25 ಭದ್ರತಾ ಸಿಬ್ಬಂದಿಯ ಬಲಿಯಾದ ಸುಕ್ಮಾದ ಪೋಲಿಸ್ ಸೂಪರಿಂಟೆಂಡೆಂಟ್ ಇಂದಿರಾ ಕಲ್ಯಾಣ ಎಲ್ಲೆಸ ಮಾನವ ಹಕ್ಕು ಕಾರ್ಯಕರ್ತರನ್ನು ಅತ್ಯಾಧುನಿಕ ವಾಹನಗಳನ್ನು ಬಳಸಿ ಹೆದ್ದಾರಿಗಳಲ್ಲಿ ಚಚ್ಚಿ ಹಾಕಬೇಕು ಎಂದು ಈ ಖಾಸಗಿ ಉದ್ಯಮಿಯ ಸಮಾರಂಭದಲ್ಲಿ ಹೇಳಿದ್ದು ಪತ್ರಿಕೆಗಳಲ್ಲೆಲ್ಲ ವರದಿಯಾಗಿತ್ತು. ಅವರನ್ನೂ ಸಸ್ಪೆಂಡ್ ಮಾಡಲಿಲ್ಲ.

ಅನ್ಯಾಯವನ್ನು ಮುಂದುವರೆಸುವುದಿಲ್ಲ, ಅದನ್ನು ಸಹಿಸುವುದೂ ಇಲ್ಲ ಎಂದು ಪ್ರತಿಜ್ಞೆ ಮಾಡೋಣ, ಸಂವಿಧಾನ ಚಿರಾಯುವಾಗಲಿ ಎಂದು ತನ್ನ ಫೇಸ್‌ಬುಕ್‌ನಲ್ಲಿ ಹೇಳಿದ್ದ ವರ್ಷಾ ಡೋಂಗ್ರೆ ತನ್ನ ಅಮಾನತಿನ ವಿರುದ್ಧ 'ಸಂವಿಧಾನಿಕವಾಗಿ' ಹೋರಾಡುತ್ತೇನ ಎಂದಿದ್ದಾರೆ. ಈ ಪ್ರಕರಣದ ಪ್ರಾಥಮಿಕ ತನಿಖೆಗೆ ಏಳು ದಿನಗಳ ಸಮಯಾವಕಾಶ ಪಡೆದಿದ್ದವರು ತಾನು ಕೊಟ್ಟ ನೋಟೀಸಿಗೆ ಎರಡೇ ದಿನಗಳಲ್ಲಿ ಉತ್ತರ ಕೊಡಬೇಕು ಎಂದು ವಿಧಿಸಿದ್ದರು. ಆ ಕಾಲಾವಧಿಯೊಳಗೇ 376 ಪುಟಗಳ ಉತ್ತರ ಕೊಟ್ಟಿದ್ದೇನೆ, ನಾನು ಫೇಸ್‌ಬುಕ್ ಟಿಪ್ಪಣಿಯಲ್ಲಿ ಹೇಳಿದ ಯಾವುದೂ ಗುಪ್ತಮಾಹಿತಿಯಲ್ಲ, ಸರಕಾರದ ವರದಿಗಳಲ್ಲಿ, ನ್ಯಾಯಾಂಗದ ನಿರ್ಣಯಗಳಲ್ಲಿ ಎಲ್ಲರಿಗೂ ತಿಳಿದಿರುವಂತದ್ದೇ ಎಂದು ದಸ್ತಾವೇಜುಗಳನ್ನೂ ಸಲ್ಲಿಸಿರುವುದಾಗಿ ಹೇಳಿದ್ದಾರೆ.

೦



ಮೇ ೧೪-೧೫ ರಂದು ಮಂಗಳೂರಿನಲ್ಲಿ ಡಿ.ವೈ.ಎಫ್.ಐ. ಸಂಘಟಿಸುತ್ತಿರುವ "ಮುಸ್ಲಿಂ ಯುವ ಸಮಾವೇಶ" ಕರಾವಳಿ ಪ್ರದೇಶದಲ್ಲಿ ಮಾತ್ರವಲ್ಲ ಇಡೀ ಕರ್ನಾಟಕದಲ್ಲೇ ಅತ್ಯಂತ ಗಮನಾರ್ಹ ಮತ್ತು ಸಕಾರಾತ್ಮಕ ಬೆಳವಣಿಗೆ. ಈ "ಅನುಮಾನಿತ ಅವಮಾನಿತ ಸಮುದಾಯದ ನೋವು ನಲಿವುಗಳ ಕುರಿತು ಚರ್ಚೆ ಸಂವಾದ" ಮತ್ತು "ಜಾತ್ಯತೀತತೆ, ಸಬಲೀಕರಣ, ಮುನ್ನಡೆ"ಗಾಗಿ ಹಮ್ಮಿಕೊಂಡಿರುವ ಈ ಸಮಾವೇಶಕ್ಕೆ ಪೂರ್ವಭಾವಿಯಾಗಿ ಮತ್ತು ಪೂರಕವಾಗಿ ಒಂದು ವಿಶೇಷ ಫೀಚರ್ ನೀಡುತ್ತಿದ್ದೇವೆ.

ಇದರಲ್ಲಿ ಅಲ್ಪಸಂಖ್ಯಾತ ಸಮುದಾಯದ ಮತ್ತು ಬಹುಸಂಖ್ಯಾತ ಸಮುದಾಯದ ಜಾಗೃತ ವಿಭಾಗಗಳ ನೋವುಗಳನ್ನು, ಆಶಯಗಳನ್ನು ಬಿಂಬಿಸುವ ಇಬ್ಬರು ಯುವ ಪತ್ರಕರ್ತೆಯರ ಇತ್ತೀಚಿನ ಎರಡು ಲೇಖನಗಳ ಭಾಗಗಳು ಇವೆ. ದಿಲ್ಲಿಯಲ್ಲಿ ಟೆಲಿವಿಷನ್ ರಂಗದಲ್ಲಿ ದುಡಿಯುತ್ತಿರುವ ಲೇಖಕಿ ಸಬೀಹಾ ಫರ್ಹಾತ್ 'ನಮ್ಮೊಂದಿಗಿದ್ದೂ ನಮ್ಮವರಾಗಲು' ಅವಕಾಶ ನೀಡದ ನೋವಿನೊಂದಿಗೆ, ಇದರ ಹಿಂದಿರುವ ಗೋಸುಂಬೆತನಗಳ ಬಗ್ಗೆ ಹೇಳುತ್ತಾರೆ. ಟೆಲಿವಿಷನ್ ಕ್ಷೇತ್ರದಲ್ಲಿ ತಜ್ಞ ಆಂಕರ್ ಆಗಿಯೂ ಪತ್ರಕರ್ತೆಯಾಗಿಯೂ ದುಡಿಯುತ್ತಿರುವ ಸಾಗರಿಕಾ ಘೋಷ್ ಕಳೆದೆರಡು ದಶಕಗಳಿಂದ 'ಗರ್ವ್ ಸೆ ಕಹೋ ಹಮ್ ಹಿಂದೂ ಹೈಂ' ಎನ್ನುತ್ತ ಹಿಂದೂಧರ್ಮವನ್ನೂ, ದೇಶವನ್ನೂ ನಾಶ ಮಾಡಹೊರಟಿರುವಾಗ ಉದಾತ್ತ ಹಿಂದೂಗಳು ಸುಮ್ಮನಿರಲು ಸಾಧ್ಯವಿಲ್ಲ, ತಮ್ಮ ಧರ್ಮವನ್ನು ಮರಳಿ ಪಡೆಯಬೇಕಾದ ಸಮಯವೀಗ ಬಂದಿದೆ ಎನ್ನುತ್ತಾರೆ.

ಜತೆಗೆ ಈ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ "ಇಂಡಿಯನ್ ಮುಸ್ಲಿಂ ಸಾಧಕರ ಹಾದಿಯಲ್ಲಿ" ಎಂಬ ಪುಸ್ತಕದ ಕಿರುಪರಿಚಯವೂ, ಪುಸ್ತಕದಲ್ಲಿರುವ ಆಯ್ದ ೫ ಪೋಸ್ಟರ್‌ಗಳು, ಸಮಾವೇಶದ ಆಶಯಗಳನ್ನು ಮೆಚ್ಚಿ ಅದರ ಹಲವು ಆಯಾಮಗಳನ್ನು ಅರ್ಥೈಸಿರುವ ಹಲವು ಪ್ರಗತಿಪರರ ಅನಿಸಿಕೆಗಳೂ ಇವೆ.

ನಾನೊಬ್ಬಳು ಭಾರತೀಯ ಮುಸ್ಲಿಮ್, ತಪ್ಪೇನಿದೆ?

– ಸಬೀಹಾ ಫರ್ಹಾತ್

ಇವೀಗ ಭಾರತದಲ್ಲಿ ಮುಸ್ಲಿಮರಿಗೆ ಕಠಿಣ ದಿನಗಳು. ಆದರೆ ನಾನೀಗ ನನ್ನ 'ಲಿಬರಲ್' ಪೂರ್ವಾಗ್ರಹಗಳನ್ನು ಬದಿಗಿಟ್ಟು ನೋಡಿದಾಗ, ಮುಸ್ಲಿಮರು ಭಾರತೀಯ ಸಮಾಜದಲ್ಲಿ 'ಅವರಿದ್ದಂತೆ' ಎಂದೂ ಸ್ವೀಕಾರಾಹವಾಗಿರಲಿಲ್ಲ ಎಂದನಿಸುತ್ತದೆ. ನನಗೆ ಶಾಲೆಗೆ ಹೋಗುವಾಗ ಅಮ್ಮ ಸರಿಯಾದ ಲಂಚ್ ಬಾಕ್ಸ್ ಕೊಡುತ್ತಿರಲಿಲ್ಲ ಎಂದು ಅವಳನ್ನು ದೂಷಿಸುತ್ತಿದ್ದೆ. ಆದರೆ ಸತ್ಯವೆಂದರೆ ನಾನು ಐದನೇ ತರಗತಿಯಲ್ಲಿರುವಾಗಲೂ ನನ್ನ ಟಿಫನ್ ಬಾಕ್ಸ್‌ನಿಂದ ಯಾವ ವಿದ್ಯಾರ್ಥಿನಿಯೂ ತಿನ್ನುತ್ತಿರಲಿಲ್ಲ. ಕ್ರಮೇಣ ನಾನು ಊಟದ ವಿರಾಮದಲ್ಲಿ ಆಲದ ಮರದ ಕೆಳಗೆ ಕುಳಿತು ತಿಂಡಿ ಸವಿಯುವ ಬದಲು ಆಟದ ಮೈದಾನಕ್ಕೆ ಹೋಗಿ ಬಿಡುತ್ತಿದ್ದೆ. 11 ಮತ್ತು 12ನೇ ತರಗತಿಗೆ ಹೋದಾಗ ನಾನೇ ತಿಂಡಿ ತಯಾರಿಸಿ ಒಯ್ಯುತ್ತಿದ್ದೆ. ಆದರೆ ಆಗಲೂ ಸಹಪಾಠಿಗಳು ನನ್ನ ಬಳಿ ಕೂತಿರುತ್ತಿದ್ದರೂ, ನನ್ನ ಟಿಫನ್ ಬಾಕ್ಸ್‌ನಿಂದ ಏನನ್ನೂ ಮುಟ್ಟುತ್ತಿರಲಿಲ್ಲ...

..... ಇನ್ನೂ ಆಳಕ್ಕೆ ಹೋಗಿ ನೋಡಿದಾಗ ನಮ್ಮ ನೆರೆಕರೆಯವರು 'ಮುಸ್ಲಿಮರಾದರೂ ಮನೆಯನ್ನು ಸ್ವಚ್ಛವಾಗಿಟ್ಟಿದ್ದಾರೆ' ಎಂದು ನನ್ನ ಅಮ್ಮನನ್ನು ಹೊಗಳುತ್ತಿದ್ದದ್ದು ನೆನಪಾಗುತ್ತದೆ. ಆದರೆ ಅದಕ್ಕೆ ಪಡುತ್ತಿದ್ದ ಶ್ರಮ ಎಷ್ಟೋ... ಈಗ ನನಗೆ ಗೊತ್ತಾಗುತ್ತಿದೆ, ನಾವು ನಮ್ಮ ಹಿಂದೂ ನೆರೆಕರೆಯವರನ್ನು ಸಂತುಷ್ಟಗೊಳಿಸಲು ಸದಾ ಶ್ರಮಿಸುತ್ತಿದ್ದೆವು. ಆದರೆ ಅವರು ನಮ್ಮಿಂದ ಇನ್ನಷ್ಟು ಮತ್ತಷ್ಟು ನಿರೀಕ್ಷಿಸುತ್ತಿದ್ದರು. ಅವರು ಬಂದು 'ನಿಮ್ಮ ಮನೆ ಮುಸ್ಲಿಮರ ಮನೆಯಂತಿಲ್ಲ' ಎಂದಾಗ ನಮ್ಮ ಪ್ರಯತ್ನವೆಲ್ಲ ವ್ಯರ್ಥ ಎನಿಸಿ ಬಿಡುತ್ತಿತ್ತು. 'ಕೊಳಕು ಮುಸ್ಲಿಂ ಕುಟುಂಬ' ಎಂಬ ಸ್ಟೀರಿಯೊಟೈಪನ್ನೇ ಅವರು ನಂಬಿದಂತಿತ್ತು, ಏಕೆ? ಕಾರಣ ತಮ್ಮ 'ಶ್ರೇಷ್ಠತೆ'ಯ ಕಥನದಲ್ಲೇ ಅವರಿಗೆ ನಂಬಿಕೆ.....

ಇವೆಲ್ಲ ಬಂದದ್ದು ಎಲ್ಲಿಂದ? ನನ್ನ ವಯಸ್ಸಿನ, ಅಂದರೆ 12–13 ವರ್ಷದ ಸಹಪಾಠಿಗಳಿಂದ, ಅವರೆಲ್ಲ ನನ್ನಂತೆಯೇ ಮಧ್ಯಮ ವರ್ಗದ ಹಿನ್ನೆಲೆಯವರೇ. ಅವರು ತಮ್ಮ ತಂದೆ–ತಾಯಂದಿರ ಕಲ್ಪನೆಗಳನ್ನು ಬಿಂಬಿಸುತ್ತಿದ್ದರೇ? ನಾನು ಅವನ್ನೆಲ್ಲ ಮರೆತು ಮುಂದೆ ಬಂದು ಬಿಟ್ಟಿದ್ದೆ. ಆದರೆ ಈಗ ಆಕ್ರಮಣಕಾರಿ ಹಿಂದೂ ನನ್ನನ್ನು ಹಿಂದಿರುಗಿ ನೋಡುವಂತೆ ಮಾಡುತ್ತಿದ್ದಾನೆ. ನನ್ನ ಗೆಳತಿಯರಿಗೆ 'ಸೇರಿದವಳು' ಎಂದೆನಿಸಲು ಎಷ್ಟೊಂದು ಹೆಣಗುತ್ತಿದ್ದೆ, ಆದರೆ ನನಗಿಂತ ಹೆಚ್ಚು ಭಾರತೀಯತೆ ಇರುವವರು, ಹೆಚ್ಚಾಗಿ ಭಾರತಕ್ಕೆ ಸೇರಿದವರು ಎನಿಸಿಕೊಂಡವರ ಕ್ಲಬ್ಬಿಗೆ ನನಗೆ ಪ್ರವೇಶವಿರಲಿಲ್ಲ, ಅಂದು ನಾನೊಯ್ದ ಸಂದೇಶವೆಂದರೆ, 'ನಾನು ಭಿನ್ನ, ಆದ್ದರಿಂದ ಇಲ್ಲಿಗೆ ಸೇರುವಂತಿಲ್ಲ".

ಇದೇ 'ಭಿನ್ನ'ತೆ ಒಬ್ಬ ದಲಿತ, ಪರಿಶಿಷ್ಟ ಜಾತಿಯ, ಅಥವ ಯಾವುದೇ ಅಲ್ಪಸಂಖ್ಯಾತ ವ್ಯಕ್ತಿಯ ಅನುಭವ ಕೂಡ. ಅಲ್ಪಸಂಖ್ಯಾತ ವಿಭಾಗಕ್ಕೆ ಸೇರಿದ ವ್ಯಕ್ತಿ ಭಾರತದಲ್ಲಿ 'ಸಮಾನ ನಾಗರಿಕ' ಎಂಬ ಮಾನ್ಯತೆ ಪಡೆಯಲು ಬಹಳ ಹೆಣಗಬೇಕು. ಈ ಮಾನ್ಯತೆಯನ್ನು ಭಾರತದಲ್ಲಿ ನಿರ್ದಿಷ್ಟವಾಗಿ .ಮುಸ್ಲಿಮರಿಗೆ ನಿರಾಕರಿಸಲಾಗಿದೆ. ಇಲ್ಲಿ ಕೊಡುವ ಸಂದೇಶ– ನಾವು ಇಲ್ಲಿಗೆ 'ಸೇರಿದವರಲ್ಲ' ಎಂದಷ್ಟೇ ಅಲ್ಲ, ನಾವು "ದೇಶದ್ರೋಹಿಗಳು, ಪಾಕಿಸ್ತಾನದ ಮಿತ್ರರು', ಆಮೂಲಕ ದೇಶಪ್ರೇಮವಿಲ್ಲದವರು ಎಂದೇ ಭಾವಿಸಲಾಗುತ್ತದೆ. ಮುಖ್ಯಧಾರೆಯಿಂದ ಪರಕೀಯರಾಗಿಸಲಾಗುತ್ತದೆ, 'ವ್ಯಕ್ತಿ'ಯಾಗಿ ಅವರ ಸ್ವಯಂ–ಯೋಗ್ಯತೆಯನ್ನು ನಿರಾಕರಿಸಲಾಗಿದೆ. ಇದು ಅಲ್ಪಸಂಖ್ಯಾತರಲ್ಲಿ ಎರಡನೇ ದರ್ಜೆಯ ನಾಗರಿಕರೆಂಬ ಪಂಕ್ತಿಯನ್ನು ತಲೆಯಲ್ಲಿ ತುಂಬುತ್ತದೆ.

ಇವೆಲ್ಲ, ಬಹಳ ಚಿಕ್ಕವಯಸ್ಸಿನಲ್ಲೇ, ಮನಸ್ಸಿಗೆ ನಾಟುವ ವಯಸ್ಸಿನಲ್ಲೇ ನಡೆಯುತ್ತವೆ......

ಮತ್ತಿದರಿಂದಾಗಿ ನಾನು ಇದರ ನಂತರದ ಅತ್ಯುತ್ತಮ ಕೆಲಸ ಮಾಡಿದೆ, ಬೆರೆಯಲು, ಎಲ್ಲರಂತೆ ಕಾಣಿಸಿಕೊಳ್ಳಲು, ನನ್ನ ಸ್ವಂತ ಧಾರ್ಮಿಕ ಹಿನ್ನೆಲೆಯ ವಿರುದ್ಧ ಬಂಡೇಳಲು ಅರಂಭಿಸಿದೆ. ಕುರಾನಿನ ಅನುವಾದಗಳನ್ನು ಅಧ್ಯಯನ ಮಾಡಿದೆ, ಅದರಲ್ಲಿ ಮಹಿಳೆಯರ ಸ್ಥಾನಮಾನ ಕುರಿತಂತೆ ದೋಷಗಳಿರುವುದನ್ನು ಕಂಡೆ, ನಿಧಾನವಾಗಿ ಇಸ್ಲಾಮಿನ ಒಂದು 'ರೀತಿಯ' ಸ್ತ್ರೀವಾದಿ ಕಥನವನ್ನು ಬೆಳೆಸಿಕೊಂಡೆ. ಅದರಲ್ಲಿ ಪಿತೃಪ್ರಾಧಾನ್ಯತೆ, ಸ್ತ್ರೀದ್ವೇಷ, ಲಿಂಗ ಅಸಮಾನತೆ, ಮತ್ತು ಒಂದು ಸಂಘಟಿತ ಧರ್ಮದ ಬೇರೆಲ್ಲ ದೋಷಗಳ ಅಂಶಗಳನ್ನು ಕಂಡೆ. ನಾನಿನ್ನೂ ಒಬ್ಬ ಮುಸ್ಲಿಮ್ ಕುರಿತ 'ಹಿಂದೂ' ಕಥನವನ್ನೇ ಅನುಸರಿಸುತ್ತಿದ್ದೆ ಎಂದು ನನಗೆ ಅರಿವಾಗಿರಲಿಲ್ಲ. ..

17 ವರ್ಷ ವಯಸ್ಸಿನ ವೇಳೆಗೆ, ನನ್ನ ಸುತ್ತಲಿನ ಹುಡುಗಿಯರೆಲ್ಲ ಇನ್ನೂ ಸಂತೋಷಿ ಮಾತಾ ಅಥವ ಗುರುವಾರ ಅಥವ ಶನಿದೇವ ಮತ್ತಿತರ ದೇವತೆಗಳಿಗಾಗಿ ಉಪವಾಸ ವೃತ ಮಾಡುತ್ತಿದ್ದಾಗ, ನಾನು ನನ್ನ ಧರ್ಮವನ್ನು ಬಿಟ್ಟೆ. 17ರ ವಯಸ್ಸಿಗೆ ನಿಮಗೆ 'ಲಿಬರಲ್ ಎಂದೇನು ಎಂಬ ಬಗ್ಗೆ ಮೇಲು–ಮೇಲಿನ ಅರಿವಷ್ಟೇ ಇರುತ್ತದೆ. ಆದ್ದರಿಂದ ಉಡುಗೆ–ತೊಡಿಗೆಗಳಲ್ಲಿ, ತಿನ್ನುವುದರಲ್ಲಿ ಮತ್ತು ನನ್ನ ಕಾಲೇಜು ಜೀವನ ನಡೆಸುವಲ್ಲಿ ಲಿಬರಲ್ ಆದೆ. ಮೇಲ್ಜಾತಿ ಹಿಂದೂಗಳ ಜತೆಗೆ ಸಂಪೂರ್ಣವಾಗಿ ಹೊಂದಿಕೊಳ್ಳಲಾರಂಭಿಸಿದೆ. ನನ್ನ "ಧಾರ್ಮಿಕ ಹಿಂದೂ ಗೆಳತಿಯರ"ನ್ನು ಕಂಡು ನನಗೆ ಆಘಾತವಾಗಬೇಕಿತ್ತು. ಆದರೆ ಹಾಗಾಗಲಿಲ್ಲ. ನಾನು ಹಿಂದೂ ಬ್ರಾಹ್ಮಣ ಕಥನದ ಒಂದು 'ವಿಷಯ' ಆಗಿದ್ದೆ.

ಈ ಬಹುಸಂಖ್ಯಾತವಾದಿ ಕಥನದ ಹಿಡಿತ ಎಷ್ಟು ಬಿಗಿಯಾಗಿತ್ತೆಂದರೆ, ಒಬ್ಬ ಬಂಡೆದ್ದ ಮುಸ್ಲಿಮಳಾದ ನಾನು ನನ್ನ ಗೆಳತಿಯರನ್ನು ಪ್ರಶ್ನಿಸದಾದೆ. ಆದರೆ ಒಂದು ಪ್ರಶ್ನೆ ಕೇಳುವ ಮನಸ್ಸನ್ನು ಜಡವಾಗಿಸಲು ಸಾಧ್ಯವಿಲ್ಲ. ಬೇಗನೇ ನನಗೆ ಹಿಂದೂ ಧರ್ಮದ ದೋಷಗಳೂ ಕಂಡು ಬಂದವು. ಅದೂ ಸ್ತ್ರೀದ್ವೇಷಿ, ಲಿಂಗ ಅಸಮಾನತೆ ಮತ್ತು ಪಿತೃಪ್ರಾಧಾನ್ಯತೆಯನ್ನು ಹೊಂದಿತ್ತು...........

ನನ್ನ ಕಾಲೇಜು ದಿನಗಳಲ್ಲಿ ಬೇರೆ ಯಾವುದೇ ನಗರದ ಹುಡುಗಿಯಂತೆ ನಾನು ಜಿನ್ಸ್, ಟೀಶರ್ಟ್‌ಗಳಲ್ಲಿ ಬದುಕಿದೆ. ನನನ್ನನ್ನು ಪರಿಚಯಿಸಿದಾಗಲೆಲ್ಲ, ನನ್ನ ಹೆಸರು ಹೇಳಿದಾಗಲೆಲ್ಲ "ಓ, ಆದರೆ ನೀನು ಮುಸ್ಲಿಮಳಂತೆ ಕಾಣುತ್ತಿಲ್ಲವಲ್ಲ" ಎಂಬ ಮಾತನ್ನೇ ಕೇಳಬೇಕಾಗಿತ್ತು. ಅವರು ಹಿಜಬ್ ಹೊದ್ದ ಮುಸ್ಲಿಮ್ ಮಹಿಳೆಯ ಚಿತ್ರಕ್ಕೇ ಅಂಟಿಕೊಂಡಿರಲು ಬಯಸುತ್ತಿದ್ದರು, ನಾನು ಆ ಕಥನಕ್ಕೆ ಹೊಂದುವುದಿಲ್ಲ ಎಂದನಿಸಿದಾಗ ನಾನೊಂದು ಅಪವಾದ ಎನ್ನುತ್ತಿದ್ದರು.

ಪುಟ 10 ಕ್ಕೆ

ಭಾರತದ ಸಂದರ್ಭದಲ್ಲಿ ಮುಸ್ಲಿಮರನ್ನು ಹೊಸ ರೂಪದಲ್ಲಿ ನೋಡುವ ಅನಿವಾರ್ಯತೆ ತುರ್ತಾಗಿದೆ. ಅವರನ್ನು ಬರೇ ಧಾರ್ಮಿಕ ಸಮುದಾಯದವನ್ನಾಗಿ ನೋಡಬಾರದು, ಹೊರತು ಅವರನ್ನು ಸಾಮಾಜಿಕವಾಗಿ ಜಾತಿ ಮತ್ತು ವರ್ಗಗಳ ನಡುವೆ ಹರಡಿರುವ ಸಮುದಾಯವೆಂದು ಗುರುತಿಸಬೇಕಾಗಿದೆ. ಅಲ್ಲದೇ ಅದೇ ಸಂದರ್ಭದಲ್ಲಿ ಮುಸ್ಲಿಮರು ಧಮನೀತ, ಅಂಚಿಗೆ ತಳ್ಳಲ್ಪಟ್ಟ ಹಾಗೂ ಶೋಷಣೆಗೊಳಗಾದ ಸಮುದಾಯ ಎಂದು ಕೂಡ ಗುರುತಿಸಬೇಕಾಗಿದೆ. . ಈ ಹುಡುಕಾಟದಲ್ಲಿ ಮುಸ್ಲಿಮರನ್ನು ಭಾರತೀಯರನ್ನಾಗಿ, ಅನನ್ಯ ಐಡೆಂಟಿಟಿಗಳುಳ್ಳ ಸಮುದಾಯವನ್ನಾಗಿ ನೋಡುವುದು ಕೂಡ ಅಷ್ಟೇ ಅವಶ್ಯಕ.

ಪ್ರೊ. ಮುಜಾಫ್ಫರ್ ಅಸ್ಸಾದಿ

ಅಲ್ಪ ಸಂಖ್ಯಾತರನ್ನು ಅವಮಾನಿಸಿ
ಹಿಯಾಳಿಸಿ ಅನುಮಾನಿಸಿ
ಅವರ ಹಕ್ಕುಗಳ ಕಸಿದು ಬಸಿದು
ಅವರ ಗೋರಿಯ ಮೇಲೆ ದೇಶ ಕಟ್ಟಲು ಹೊರಟರೇ ಇಲ್ಲಿ ಏನು
ನಡೆಯಬಹುದು ಎಂದು ಈ ಯುವ ಮುಸ್ಲಿಂ ಸಮಾವೇಶದಿಂದ ಅರಿವು
ಮೂಡಿಸಬೇಕಾದ ಅನಿವಾರ್ಯತೆ ನಮ್ಮ ಮೇಲೆ ಇದೆ

– ರಂಜಾನ್ ದರ್ಗಾ

ಭಾರತೀಯ ಯುವ ಮುಸ್ಲಿಮರ ಮಹಾತ್ವಾಕಾಂಕ್ಷೆ, ವೈಜ್ಞಾನಿಕ ಮನೋಧರ್ಮ, ಉದ್ಯಮಶೀಲತೆ, ಸಬಲೀಕರಣ, ಪ್ರಗತಿಪರತೆ, ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹೊಂಗನಸು ಸಾಕಾರವಾಗಲಿ.

– ಬಾನು ಮುಷ್ತಾಕ್





ಜಾತ್ಯತೀತತೆ, ಸಬಲೀಕರಣ, ಮುನ್ನಡೆ

Democratic Youth Federation of India

ಮುಸ್ಲಿಂ ಯುವ ಸಮಾವೇಶ



ಕಮ್ಯುನಿಸ್ಟ್ ನಾಯಕ ಮುಜಾಫರ್ ಅಹಮದ್

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ಸರ್ವ ಸ್ವತಂತ್ರ ಭಾರತ ನಿರ್ಮಾಣಕ್ಕೆ ಪರಿಶ್ರಮಿಸಿದವರಲ್ಲಿ ಕಮ್ಯುನಿಸ್ಟರ ಕೊಡುಗೆ ಅತ್ಯಂತ ಮಹತ್ವದ್ದು. ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರೂ ಆಗಿದ್ದ ಬಂಗಾಳ ರಾಜಾರಣಿ, ಪತ್ರಕರ್ತ, ಸ್ವಾತಂತ್ರ್ಯ ಹೋರಾಟಗಾರ ಮುಜಾಫ್ಫರ್ ಅಹ್ಮದ್ ಈ ಸಾಲಿನಲ್ಲಿ ನಿಲ್ಲುವಂಥವರು. ಕಾಕಾ ಬಾಬು ಎಂದೇ ಖ್ಯಾತರಾದ ಮುಜಾಫ್ಫರ್ ಅಹ್ಮದ್ ಜನಿಸಿದ್ದು 1889ರಲ್ಲಿ. ವಿದ್ಯಾಭ್ಯಾಸ ಮುಗಿಸಿ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಕೊಂಡ ಅಹ್ಮದ್, 1920ರಲ್ಲಿ ಮತ್ತೊಬ್ಬ ಹೋರಾಟಗಾರ ಖಾಜಿ ನಜರುಲ್ ಇಸ್ಲಾಮ್ ಜೊತೆಗೂಡಿ 'ನವಯುಗ್' ಪತ್ರಿಕೆಯನ್ನೂ 1922ರಲ್ಲಿ 'ಧೂಮಕೇತು' ಎಂಬ ಪತ್ರಿಕೆಯನ್ನೂ ಆರಂಭಿಸಿದರು. ಮುಜಾಫ್ಫರ್ ಅಹ್ಮದ್ ಭಾರತದ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲಿ ಪ್ರಮುಖರು. ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಕಮ್ಯುನಿಸ್ಟ್ ಪಕ್ಷದ ಮೇಲೆ ನಿಷೇಧ ಹೇರಿತು. ಸ್ವಾತಂತ್ರ್ಯ ಹೋರಾಟದಲ್ಲಿ ಎರಡು ಬಾರಿ ಒಟ್ಟು 8 ವರ್ಷಗಳ ಸೆರೆಮನೆ ಶಿಕ್ಷೆ ಅನುಭವಿಸಿದ್ದರು ಕಾಕಾ ಬಾಬು. ವ್ಯಂಗ್ಯ ಎಂದರೆ, ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದ ಕಮ್ಯುನಿಸ್ಟ್ ನೇತಾರ ಮುಜಾಫ್ಫರ್ ಅಹ್ಮದ್ ಅವರನ್ನು ಸ್ವತಂತ್ರ ಭಾರತದ ಸರ್ಕಾರ ಎರಡು ಮೂರು ಬಾರಿ ಬಂಧಿಸಿ ಸೆರೆಮನೆಗೆ ತಳ್ಳಿತು. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಿದ ಕಾಕಾ ಬಾಬು 1973ರಲ್ಲಿ ನಿಧನರಾದರು. ಅವರ ಸ್ಮರಣಾರ್ಥ ಪಶ್ಚಿಮ ಬಂಗಾಳದಲ್ಲಿರುವ ಸಿಪಿಐಎಮ್ ಮುಖ್ಯ ಕಛೇರಿಗೆ ಅವರ ಹೆಸರನ್ನೇ ಇಡಲಾಗಿದೆ. ಅಷ್ಟೇ ಅಲ್ಲ, ಕೋಲ್ಕೊತ್ತದ ಪ್ರಮುಖ ರಸ್ತೆಯೊಂದಕ್ಕೂ 'ಮುಜಾಫ್ಫರ್ ಅಹ್ಮದ್ ಸ್ಟ್ರೀಟ್' ಎಂದು ಹೆಸರಿಟ್ಟು ಗೌರವಿಸಲಾಗಿದೆ.

ಜಾತ್ಯತೀತತೆ, ಸಬಲೀಕರಣ, ಮುನ್ನಡೆ

Democratic Youth Federation of India

ಮುಸ್ಲಿಂ ಯುವ ಸಮಾವೇಶ



ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿ ಹುತಾತ್ಮರಾದ ರಂಜಾನ್ ಸಾಬ್


ಕನ್ನಡದ ಕಟ್ಟಾಳು, ಬಳ್ಳಾರಿಯ ಪೈಲ್ವಾನ್ ಪಿಂಜಾರ ರಂಜಾನ್ ಸಾಬ್ ಅವರ ಉಲ್ಲೇಖವಿಲ್ಲದೆ ಕರ್ನಾಟಕ ಏಕೀಕರಣ ಹೋರಾಟದ ಚರಿತ್ರೆ ಅಪೂರ್ಣವಾಗುತ್ತದೆ.
1953ರಲ್ಲಿ ಮಿಶ್ರಾ ಆಯೋಗವು ಬಳ್ಳಾರಿಯು ಮೈಸೂರು ರಾಜ್ಯಕ್ಕೆ ಸೇರಬೇಕೆಂದು ತೀರ್ಪು ನೀಡಿತ್ತು. ಬಳ್ಳಾರಿ – ಮೈಸೂರು ವಿಲೀನದ ಸಂಭ್ರಮಾಚರಣೆಗಾಗಿ ನಿರ್ಮಿಸಿದ್ದ ಸಭಾಮಂಟಪವನ್ನು ಸುಟ್ಟುಹಾಕಲು ಏಕೀಕರಣ ವಿರೋಧಿಗಳು ಸಂಚು ಹೂಡಿದ್ದರು. ಸಭಾಮಂಟಪದ ರಕ್ಷಣೆಯ ಹೊಣೆ ಹೊತ್ತು ಏಕೀಕರಣ ಚಳವಳಿಯಲ್ಲಿ ಸಕ್ರಿಯರಾಗಿದ್ದ ಪೈಲ್ವಾನ್ ರಂಜಾನ್ ಸಾಬ್ ಅಲ್ಲಿಯೇ ಮಲಗಿದರು. ಮಂಟಪ ಧ್ವಂಸಗೈಯಲು ಬಂದಿದ್ದ ವಿರೋಧಿಗಳು ಅವರ ಮೇಲೆಯೇ ಆಸಿಡ್ ಬಾಂಬ್ ಎಸೆದರು. ಇದರಿಂದ ತೀವ್ರವಾಗಿ ಗಾಯಗೊಂಡ ರಂಜಾನ್ ಸಾಬ್ ಸಾವನ್ನಪ್ಪಿದರು.
ಐಕ್ಯತೆಗಾಗಿ ದುಡಿದು ಮಡಿದ ರಂಜಾನ್ ಸಾಬ್ ಅವರಿಂದ ಮುಸ್ಲಿಂ ಸಮುದಾಯ ಮಾತ್ರವಲ್ಲ, ಇಡಿಯ ಕನ್ನಡ ನಾಡು ಪ್ರೇರಣೆ ಪಡೆಯುವ ಅಗತ್ಯವಿದೆ.
ಕನ್ನಡಿಗರ ಭಾಷಾಭಿಮಾನದ ಕೊರತೆಯ ಚರ್ಚೆ ನಡೆಯುತ್ತಿರುವ ಈ ಹೊತ್ತು ರಂಜಾನ್ ಸಾಬರ ನೆನಕೆ ಅತ್ಯಂತ ಅರ್ಥಪೂರ್ಣ.

"ಭಾರತೀಯ ಮುಸ್ಲಿಂ ಸಾಧಕರ ಹಾದಿಯಲ್ಲಿ"

(ಪುಸ್ತಕದ ಬ್ಲರ್ಬಿನಿಂದ)

18 ಕೋಟಿಗೂ ಹೆಚ್ಚು ಜನಸಂಖ್ಯೆಯಿರುವ, ದೇಶದ ಒಂದು ದೊಡ್ಡ ಜನವಿಭಾಗವನ್ನು ಈ ರೀತಿ ಈ ದೇಶದ ನಾಗರಿಕರೇ ಅಲ್ಲ ಎನ್ನುವಂತೆ ಮಾಡುವುದು ಸಾಧ್ಯವೇ, ಅವರು ಈ ದೇಶದ ಇತಿಹಾಸಕ್ಕೆ, ಸಂಸ್ಕೃತಿಗೆ, ನಾಗರಿಕತೆಗೆ ನೀಡಿದ ಕೊಡುಗೆಗಗಳನ್ನು ಇಲ್ಲವಾಗಿಸಲು ಸಾಧ್ಯವೇ? ಇದು ದೇಶವನ್ನು ಸಮೃದ್ಧಗೊಳಿಸಬಲ್ಲುದೇ, ಹೋಗಲಿ, ದೇಶದ ಪ್ರಜಾಪ್ರಭುತ್ವವನ್ನು ಉಳಿಸಬಲ್ಲುದೇ ಎಂಬ ಆತಂಕ ಈಗ ಎಡಪಂಥೀಯರಿಗಷ್ಟೇ ಸೀಮಿತವಾಗುಳಿದಿಲ್ಲ.

ಹೌದು, ಒಬ್ಬ ಹಿರಿಯ ಪತ್ರಕರ್ತರು ಹೇಳಿರುವಂತೆ, ದೇಶ ಈಗ ಕೋಮುವಾದದಿಂದಾಗಿ ಏನನ್ನು ಕಳಕೊಳ್ಳುತ್ತಿದೆ ಎಂಬುದನ್ನು ಎಲ್ಲರೂ ಅರಿಯಬೇಕಾಗಿದೆ. ಇದು ಕೇವಲ ಮುಸ್ಲಿಮರನ್ನು ತಟ್ಟುತ್ತಿರುವುದಲ್ಲ, ಪ್ರತಿಯೊಬ್ಬ ಭಾರತೀಯರು, ಹಿಂದೂಗಳು, ಸಿಖ್ಖರು, ಕ್ರೈಸ್ತರು, ಬೌದ್ಧರು, ಜೈನರು, ನಾಸ್ತಿಕರು ಎಲ್ಲರನ್ನೂ ತಟ್ಟುತ್ತಿದೆ.



ದಕ್ಷಿಣ ಕನ್ನಡ ಜಿಲ್ಲೆಯ ಡಿವೈಎಫ್ಐ ಘಟಕ ಈ ಪ್ರಶ್ನೆಗಳನ್ನು ಒಂದು ವಿಶಿಷ್ಟ ರೀತಿಯಲ್ಲಿ ಎತ್ತಿ-ಕೊಂಡು ಮಂಗಳೂರಿನಲ್ಲಿ ಮುಸ್ಲಿಮ್ ಯುವ ಸಮಾವೇಶ ಏರ್ಪಡಿಸಲು ನಿರ್ಧರಿಸಿ ಈ ಸಂದರ್ಭದಲ್ಲಿ ಒಂದು ಪೋಸ್ಟರ್ ಪ್ರಚಾರಾಂದೋಲನವನ್ನು ಆರಂಭಿಸಿದೆ. ಇದರಲ್ಲಿ ಮುಸ್ಲಿಮ್ ಸಾಧಕ ಸಾಧಕಿಯರ ಮತ್ತು ಕೆಲವು ಅಪರೂಪದ, ಅವಗಣನೆಗೆ ಒಳಗಾದ ವ್ಯಕ್ತಿಗಳ ಕಿರುಪರಿಚಯಗಳಿವೆ. ಇದರ ಉದ್ದೇಶ ಮಹಾನ್ ವ್ಯಕ್ತಿತ್ವಗಳನ್ನು ಸಮುದಾಯವೊಂದಕ್ಕೆ ಸೀಮಿತಗೊಳಿಸುವುದಲ್ಲ. ಕೋಮುವಾದದ ದಾಳಿಯಿಂದ ಜರ್ಜರಿತಗೊಂಡಿರುವ, ಕೀಳರಿಮೆಗೆ ಗುರಿಯಾಗಿರುವ, ಸಮಾಜದ ಕಣ್ಣಲ್ಲಿ ಕೆಟ್ಟವರಾಗಿ, ಅನ್ಯರಾಗಿ ಬಿಂಬಿಸಲ್ಪಟ್ಟಿರುವ ಮುಸ್ಲಿಂ ಸಮುದಾಯದ ಸಕಾರಾತ್ಮಕ ಅಂಶಗಳನ್ನು, ಆ ಸಮುದಾಯದ ಹಿನ್ನೆಲೆಯ ವ್ಯಕ್ತಿಗಳು ಈ ದೇಶಕ್ಕೆ ನೀಡಿದ ಕೊಡುಗೆಗಳನ್ನು ಸಮಾಜದ ಮುಂದಿಡುವುದು, ಪರಿಚಯಿಸುವುದು ನಮ್ಮ ಉದ್ದೇಶ ಎಂದಿದ್ದಾರೆ ಡಿವೈಎಫ್ಐ ಮುಖಂಡರು.

ಡಿವೈಎಫ್ಐನ ಈ ಪ್ರಯತ್ನದಲ್ಲಿ ಕೈಜೋಡಿಸಿ ಇವನ್ನು ಕರ್ನಾಟಕದ ಪ್ರಜಾಪ್ರಭುತ್ವವಾದಿಗಳಿಗೆ ತಲುಪಿಸುವ ಉದ್ದೇಶದಿಂದ ಕ್ರಿಯಾ ಪುಸ್ತಕ ಈ ಪ್ರಕಟಣೆಯನ್ನು ತರುತ್ತಿದೆ.

ಒಬ್ಬ ಉದಾತ್ತ ಹಿಂದೂವಿನ ಪ್ರಣಾಳಿಕೆ 'ಗರ್ವ್‌ಸೆ ಕಹೋ ಹಂ ಲಿಬರಲ್ ಹೈಂ' ಎಂದು ಹೇಳಬೇಕಾದ ಸಮಯವಿದು – ಸಾಗರಿಕಾ ಘೋಷ್

ಪ್ರಿಯ ಉದಾತ್ತ ಹಿಂದೂಗಳೇ,

ನೀವುಗಳೆಲ್ಲ ಇಲ್ಲಿದ್ದೀರಿ. ನಿಮ್ಮ ದನಿಗಳು ಮೌನವಾಗಿರಬಹುದು. ಇಂದು ನಿಮ್ಮನ್ನು ತಪ್ಪಾಗಿ ಪ್ರತಿನಿಧಿಸಲಾಗುತ್ತಿದೆ, ಆಕ್ರೋಶಕಾರೀ ರೀತಿಯಲ್ಲಿ. ಅ ಕಿರುಚಾಡುತ್ತಿರುವ ದನಿಗಳು, ನಿಮ್ಮ ಪರವಾಗಿ ಮಾತಾಡುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿರುವವರು, 'ಹಿಂದೂ' ಅವಕಾಶವನ್ನು ವಶಪಡಿಸಿಕೊಂಡು ಇತರ ಧರ್ಮಗಳ ಮೇಲೆ ಒಂದು ಪವಿತ್ರ ಯುದ್ಧದ ಕರೆ ನೀಡುತ್ತಿರುವ ಯುದ್ಧ-ಮಾದರಿಯ ಮೂಲಭೂತವಾದಿಗಳ ದನಿಗಳು ನೀವು ಗುರುತಿಸಿಕೊಳ್ಳುವಂತವುಗಳಲ್ಲ. ನಿಮ್ಮ ನಂಬಿಕೆ ಉದಾತ್ತವಾದದ್ದು. ಸದಾ ಇದ್ದರೂ ಎಂದೂ ಪ್ರಾಬಲ್ಯ ಬಯಸುವಂತದ್ದಲ್ಲ. ನೀವು ಕವ್ವಾಲಿ, ಭಜನೆ, ಕ್ರಿಸ್‌ಮಸ್ ಕರೋಲ್‌ಗಳನ್ನು ಹಾಡಿದ್ದೀರಿ, ಯಾವುದೇ ತಪ್ಪಿನ ಭಾವನೆಯಿಲ್ಲದೆ ಕಬಾಬ್‌ಗಳನ್ನು ಸವಿದಿದ್ದೀರಿ. ಎಂದೂ ನೀವು ಧಾರ್ಮಿಕ ಪೋಲಿಸಿನ ಆಳ್ವಿಕೆಯನ್ನು ಕಂಡಿರಲಿಲ್ಲ, ಅಥವ ನಿಮ್ಮ ಹಿಂದುತನವನ್ನು ರಾಜಕೀಯ ವಿಧೇಯತೆ-ಯ ಮೂಲಕ ಸಾಬೀತು ಪಡಿಸಿ ಎಂಬ ಮಾತನ್ನು ಕೇಳಿರಲಿಲ್ಲ.

ಆದರೆ ಇದ್ದಕ್ಕಿದ್ದಂತೆ, ನಿಮ್ಮನ್ನು ಒಬ್ಬ ಸಸ್ಯಾಹಾರಿಯಾಗಿ , ಮುಸ್ಲಿಮರನ್ನು ದ್ವೇಷಿಸುವ ನೇಮಿಷ್ಟ ಸಮರೂಪತೆಗೆ ಬಲವಂತವಾಗಿ ತಳ್ಳಲಾಗುತ್ತಿದೆ. ನಿಮ್ಮ ಧರ್ಮ ಪ್ರೀತಿಸುವುದನ್ನು ಕಲಿಸಿದರೂ ದ್ವೇಷಿಸಿ ಎಂದು ನಿಮಗೆ ಹೇಳಲಾಗುತ್ತಿದೆ. ನಿಮ್ಮ ಪರಂಪರೆ ವಾದ, ವಿವಾದ, ಸಂವಾದದಿಂದ ತುಂಬಿದ್ದರೂ ನೀವೀಗ ಪ್ರಶ್ನಿಸಬಾರದು ಎಂದು ಹೇಳಲಾಗುತ್ತಿದೆ. ನಿಮ್ಮ ದೇವರುಗಳು ಸದಾ ಆಟವಾಡುತ್ತ, ಉಲ್ಲಾಸಮಯರಾಗಿ ಇರುವವರಾದರೂ ನೀವು ಸದಾ ಸಿಟ್ಟಿನಿಂದಿರಬೇಕು ಎಂದು ಹೇಳಲಾಗುತ್ತಿದೆ. ಕೃಷ್ಣ, ಗಣಪತಿ, ಸರಸ್ವತಿ -ಎಂದಾದರೂ ದ್ವೇಷ, ಸಿಟ್ಟಿನಿಂದ ತುಂಬಿದ್ದರೇ? ಮಹಾತ್ಮರಂತೆ, ಒಬ್ಬ ನಿಜವಾದ ಹಿಂದೂವಿನ ಲಕ್ಷಣವೆಂದರೆ, ಎಲ್ಲಕ್ಕಿಂತ ಮಿಗಿಲಾಗಿ, ಇತತರ ಬಗ್ಗೆ ಉದಾರತೆ ತೋರುವುದು....

ನಿಮ್ಮ ಧರ್ಮಶ್ರದ್ಧೆ ಒಂದು ಸಿಂಧೂರ, ಮಲ್ಲಿಗೆ, ಸೇವಂತಿಗೆಗಳ ಕಂಪಿನಿಂದ ಕೂಡಿದ ಉಲ್ಲಾಸಮಯ ಸಂಸ್ಕೃತಿ, ಪಂಚೇಂದ್ರಿಯಗಳಿಗೆ ಎಂತಹ ಹಬ್ಬ ಮತ್ತು ಆತ್ಮಕ್ಕೆ ಎಂತಹ ಸಾಂತ್ವನದ ಅಂಜನ! ಯಾವಾಗ ಈ ಉಲ್ಲಾಸಮಯ ಸೌಂದರ್ಯಾಸ್ವಾದನೆಯ ಧರ್ಮ ಅವಮಾನಗಳು, ದೇಶದ್ರೋಹ, ಧರ್ಮದ್ರೋಹ ಎಂದು ಕೆಂಡಕಾರುವ ಮರುಮತಾಂತರ, ಲವ್ ಜಿಹಾದ್, ಗೋವಿನ ಹೆಸರಲ್ಲಿ ರಕ್ತಪಾತ ನಡೆಸುವ ಒಂದು ಶಕ್ತಿಯಾಗಿ ಪರಿವರ್ತನೆಗೊಂಡಿತು? ಯಾವಾಗ ಇದು ಭೀತಿ ಹುಟ್ಟಿಸುವ ತತ್ವವಾಗಿ ಬಿಟ್ಟಿತು, ಜನಜಂಗುಳಿಯ ಆಳ್ವಿಕೆಯನ್ನು ಒಪ್ಪಿಕೊಳ್ಳುವಂತದ್ದಾಯಿತು? ಆಧ್ಯಾತ್ಮಿ ಕತೆಯ ಒಂದು ಬುಗ್ಗೆ ಅನಂತ ಎಫ್‌ಐಆರ್‌ಗಳ ಬುಗ್ಗೆಯಾಗಿ ಬಿಟ್ಟಿತು?

ಉದಾತ್ತ ಹಿಂದೂಗಳೇ, ನೀವು ಈ ಹೊಸ ಸಿಟ್ಟಿನ ಧರ್ಮವನ್ನು ಗುರುತಿಸಲಾರಿರಿ. ಏಕಾದರೂ ಗುರುತಿಸಬೇಕು? ನೀವು ಕಬೀರ ಮತ್ತು ಮೀರಾ, ಕೃಷ್ಣ ಚೈತನ್ಯ ಮತ್ತು ರಾಮಕೃಷ್ಣ ಪರಮಹಂಸರ ಉತ್ತರಾಧಿಕಾರಿಗಳು, ನಿಮಗೆ ಗೊತ್ತಿರುವುದು ವಿಭಿನ್ನತೆ ಮತ್ತು ಬಹುತ್ವವನ್ನು ಬಹಿರಂಗವಾಗಿ ಆಲಂಗಿಸುವ ಹಿಂದೂ ಧರ್ಮ. ದಾದ್ರಿಯಲ್ಲಿ ಮಹಮ್ಮದ್ ಅಖ್ಲಾಕ್‌ನನ್ನು ಅಥವ ಅಲವರ್‌ನಲ್ಲಿ ಪೆಹ್ಲೂ ಖಾನ್‌ನನ್ನು ಕೊಂದವರು, ಪ್ರೇಮಿಗಳ ಮೇಲೆ, ಸಿನೆಮಾ ನಿರ್ದೇಶಕರ ಮೇಲೆ, ಮಾಂಸಾಹಾರಿಗಳ ಮೇಲೆ, ಕಲಾವಿದರು, ಅಥವ ಲೇಖಕರು ಅಥವ ವಿಚಾರವಾದಿಗಳ ಮೇಲೆ ದಾಳಿ ಮಾಡುವವರು ನಿಜವಾಗಿ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಆಧ್ಯಾತ್ಮಿಕತೆಯನ್ನೇ ಕೇಂದ್ರವಾಗಿರಿಸಿಕೊಂಡ ಒಂದು ಧರ್ಮವನ್ನು ಪ್ರತಿನಿಧಿಸಲು ಸಾಧ್ಯವೇ?

ಇಲ್ಲ, ಉದಾತ್ತ ಹಿಮದೂಗಳೇ, ನಿಮ್ಮ ಹೆಸರಲ್ಲಿ ಕೊಲ್ಲುವವರ ಬಗ್ಗೆ ನಿಮಗೆ ಹೇಸಿಗೆಯೆನಿಸುತ್ತದೆ. ಗೋರಕ್ಷಕರೇ ಹಿಂದೂ ಧರ್ಮದ ಏಕೈಕ ಮುಖಗಳಾದರೆ ಜಗತ್ತು ಹಿಂದೂ ಧರ್ಮದ ಬಗ್ಗೆ ಏನೆಂದುಕೊಳ್ಳುವುದಿಲ್ಲ ಎಂದು ನಿಮಗೆ ದಿಗಿಲಾಗುತ್ತದೆ......

ಒಬ್ಬ ನಿಜವಾದ ಹಿಂದೂವಿಗೆ ಈ ರೀತಿ ಭಯಪಡಲು, ಅಥವ ಬೆದರಿಕೆಗೊಳಗಾಗಲು ಯಾವುದೇ ಕಾರಣವಿಲ್ಲ. ಏಕೆಂದರೆ ನೀವು ನಾಸ್ತಿಕರಾಗಿದ್ದೂ ಒಬ್ಬ ಹಿಂದೂ ಆಗಿರಬಹುದು. ಉಪನಿಷದ್‌ಗಳು ದೇವರ ಬಗ್ಗೆ ಮಾತಾಡಿಲ್ಲ. ಕುಂಭಮೇಳದಲ್ಲಿ ವ್ಯಕ್ತಿ ಮತ್ತು ಸೂರ್ಯ ಹಾಗೂ ನದಿಯ ನಡುವೆ ಮಧ್ಯಸ್ಥಿಕೆಗೆ ಪುರೋಹಿತರಿರುವುದಿಲ್ಲ. ಹಿಂದೂಧರ್ಮ ರಾಜಕೀಯ ಅಧಿಕಾರ ಪಡೆಯಲು ಪ್ರಯತ್ನಿಸಿಲ್ಲ ಎಂದರೆ ಅದರಲ್ಲಿ ಆಶ್ಚರ್ಯವಿಲ್ಲ. ಹಿಂದೂ ಧರ್ಮ ಎಂಬುದು ಎಷ್ಟೊಂದು ಅನಿರ್ವಚನೀಯ ಮತ್ತು ವೈವಿಧ್ಯಮಯ, ಅದ-ರಿಂದಾಗಿಯೇ ಅದು ಅಜೇಯವೂ ಆಗಿದೆ. ಆದ್ದರಿಂದ ಅದಕ್ಕೆ ಖಡ್ಗ ಝಳಪಿಸುವ ಅಗತ್ಯವೇನಿಲ್ಲ. .....

ಆದರೆ ಇಂದು ಹಿಂದುತ್ವದ ಪ್ರತಿಪಾದಕರು ರಾಜಕೀಯ ಅಧಿಕಾರದ

ಪುಟ 10 ಕ್ಕೆ

ಇಂದಿನ ದಿನಗಳಲ್ಲಿ ಕೋಮುವಾದವೇ ಮೇಲುಗೈ ಸಾಧಿಸಿದೆ. ಅದು ಅಲ್ಪಸಂಖ್ಯಾತರಲ್ಲಾಗಲೀ ಬಹುಸಂಖ್ಯಾತರಲ್ಲಾಗಲೀ ಅಪಾಯಕಾರಿ ಹಂತ ತಲುಪಿದೆ. ಅಲ್ಪಸಂಖ್ಯಾತ ಕೋಮುವಾದ ಸ್ವತಃ ಅವರಿಗೇ ಮಾರಕ. ಬಹುಸಂಖ್ಯಾತರ ಕೋಮುವಾದ ದೇಶಕ್ಕೆ ಮಾರಕ. ಇದನ್ನು ನಾವು ಯುವಕರಿಗೆ ತಿಳಿಸಬೇಕಾಗಿದೆ... .. ನಿರಾಶೆ, ಅಸಹಾಯಕತೆಗಳು ಯಾವತ್ತೂ ಯಾವುದೇ ಸಮಾಜವನ್ನು ಸದೃಢವಾಗಿ ರೂಪಿಸಲಾರವು. ನಮ್ಮ ಹಕ್ಕುಗಳಿಗಾಗಿ ಜವಾಬ್ದಾರಿಯಿಂದ ಹೋರಾಟ ಮಾಡುವಂಥ ಮನೋಭೂಮಿಕೆಯನ್ನು ಯುವಕರಲ್ಲಿ ಉಂಟುಮಾಡಬೇಕು. ಅದಕ್ಕೆ ಈ ಸಮಾವೇಶ ಸಹಾಯಕವಾಗುತ್ತದೆ ಎಂದು ಭಾವಿಸುತ್ತೇನೆ.

–ಬಿ.ಎ.ಮೊಯ್ದೀನ್, ಮಾಜಿ ಶಿಕ್ಷಣ ಸಚಿವರು

ಮಹಿಳೆಯರು, ದಲಿತರು ಹಾಗು ಅಲ್ಪಸಂಖ್ಯಾತ ಮತದವರ ಲಿಂಗ, ಜಾತಿ, ಮತಗಳ ಅಸ್ಮಿತೆ ನಮ್ಮ ನಾಡಿನ ಸಮಾಜದಲ್ಲಂತೂ ಅಧಿಕಾರಹೀನರ ಆಸ್ಮಿತೆ. ಅದು ಲಿಂಗ, ಜಾತಿ, ಮತಗಳನ್ನು ಒಡೆಯುವ ಅಸ್ಮಿತೆಗಳಲ್ಲ. ಸಮಾಜದಲ್ಲಿ ಆತ್ಮ ಗೌರವ ಸಹಿತವಾಗಿ ಸಮಾನತೆಯನ್ನು ಕೇಳುವ ಸಹಬಂಧುತ್ವದ ಉದ್ದೇಶದ ಆಸ್ಮಿತೆಗಳು. ಅಂಬೇಡ್ಕರ್ ಆಶಯದ 'ಸಾಮಾಜಿಕ ಸಹಬಂಧುತ್ವ'ವನ್ನು ಸಕಾರಗೊಳಿಸುವತ್ತ ದುಡಿಯಬೇಕು. ಮುಸ್ಲಿಂ ಯುವ ಸಮಾವೇಶವು, ಆ ಬಗೆಯ ಸಹಬಂಧುತ್ವದತ್ತ ನಡಿಗೆಯ ಒಂದು ಹೆಜ್ಜೆ

~ ಕೆ. ಫಣಿರಾಜ್

ಜಾತ್ಯತೀತತೆ ಮತ್ತು ಸಮಾಜವಾದ ಚಿಂತನೆಯ ಯುವ ಆಂದೋಲನವಾದ dyfi "ಮುಸ್ಲಿಂ ಯವ ಸಮಾವೇಶ" ವನ್ನು ಹಮ್ಮಿಕೊಂಡಿರುವುದು ಸ್ವಾಗತಾರ್ಹವಾಗಿದೆ. ಕೋಮುವಾದಿ ಸಿದ್ಧಾಂತದ ಮೂಲಕ ಎಲ್ಲಾ ದಮನಿತ ವಿಭಾಗಗಳನ್ನು ಏಕಕಾಲದಲ್ಲಿ ದಮನಿಸಲು ಹೊರಟ ಶಕ್ತಿಗಳನ್ನು ಅರ್ಥಮಾಡಿಕೊಳ್ಳದೆ, ಯುವಜನತೆ ಪ್ರತಿಕ್ರಿಯೆಗಾಗಿ ಹೋರಾಡಿ ಅತೀವ ನಷ್ಟಕ್ಕೊಳಗಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಮುಸ್ಲಿಂ ಯುವ ಜನತೆ ಹೆಚ್ಚಾಗಿ ಬಲಿಪಶುಗಳಾಗುತ್ತಿದ್ದು, ಅವರಲ್ಲಿ ಜಾತ್ಯತೀತತೆ, ಮತ್ತು ಸಹೋದರತೆಯನ್ನು ಬಡಿದೆಬ್ಬಿಸಿ, ಅವರನ್ನು ದೇಶಕಟ್ಟುವ ಕೆಲಸದಲ್ಲಿ ತೊಡಗಿಸಿಕೊಳ್ಳಲು ಈ ಸಮಾವೇಶದಿಂದ ಸಾಧ್ಯವಾಗುವುದರಲ್ಲಿ ಸಂಶಯವಿಲ್ಲ.

– ಬಿ ಎ ಮುಹಮ್ಮದ್ ಹನೀಫ್. ಅಧ್ಯಕ್ಷರು, ಬ್ಯಾರಿ ಸಾಹಿತ್ಯ ಅಕಾಡೆಮಿ

ಅನುಮಾನವೇ ಅವಮಾನ. ಸ್ವತಂತ್ರ ಭಾರತದಲ್ಲಿ ಅನುಮಾನದ ಅವಮಾನಕ್ಕೆ ಗುರಿಯಾಗುತ್ತಲೇ ಬಂದವರು ಮುಸ್ಲಿಮರು. ಮೆಳ್ಳೆಗಣ್ಣಿನ ಇತಿಹಾಸಕಾರರು, ಸ್ವಾರ್ಥಿ ರಾಜಕಾರಣಿಗಳು ಮತ್ತು ಕುರುಡುಕಣ್ಣಿನ ಧರ್ಮಗುರುಗಳು ಸೇರಿ ಅನುಮಾನದ ಕತ್ತಲೆಯೊಳಗೆ ಮುಸ್ಲಿಂ ಸಮುದಾಯವನ್ನು ತಳ್ಳುತ್ತಲೇ ಇದ್ದಾರೆ. ಜಾತಿ-ಧರ್ಮದ ಗೋಡೆಗಳನ್ನು ಕೆಡವಿ, ಪ್ರೀತಿ-ವಿಶ್ವಾಸದ ಇಟ್ಟಿಗೆಗಳನ್ನಿಟ್ಟು ಬಾಂಧವ್ಯದ ಬೆಸುಗೆಯಲ್ಲಿ ಮನುಷ್ಯತ್ವದ ಮಹಾಮನೆಯನ್ನು ನಾವೆಲ್ಲ ಕೂಡಿ ಕಟ್ಟಲೇಬೇಕಾಗಿದೆ.

– ದಿನೇಶ್ ಅಮೀನ್ ಮಟ್ಟು

ನಾನೊಬ್ಬಳು ಭಾರತೀಯ ಮುಸ್ಲಿಮ್...... ಪುಟ 8 ರಿಂದ

ನಮ್ಮ 'ಸ್ವಚ್ಛ ಮನೆ' ಒಂದು ಅಪವಾದವಾಗಿದ್ದಂತೆ, ನನ್ನ 'ದೇಶಪ್ರೇಮ' ಒಂದು ಅಪವಾದ, ನನ್ನ 'ಆಧುನಿಕ ಐಡೆಂಟಿಟಿ' ಕೂಡ ಒಂದು ಅಪವಾದ. ಆದರೆ ಏಕೆ? ಏಕೆಂದರೆ ರೂಢ ಮಾದರಿಗಳು, ಸ್ಟೀರಿಯೊಟೈಪ್‌ಗಳು ಇಸ್ಲಾಮ್‌ಭೀತಿಯ ರೋಗವನ್ನು ಸೃಷ್ಟಿಸುತ್ತವೆ ಮತ್ತು ಇಸ್ಲಾಮ್‌ಭೀತಿ ಹಿಂದೂ ಶ್ರೇಷ್ಠತೆಯನ್ನು ಸ್ಥಾಪಿಸಲು ನೆರವಾಗುತ್ತದೆ.

ನನ್ನ ಅನನ್ಯತೆಯ ನಿರಾಕರಣೆಯನ್ನು ಎಷ್ಟು ಚೆನ್ನಾಗಿ ಮರೆಮಾಚಲಾಗಿತ್ತೆಂದರೆ, ಆರಂಭದಲ್ಲಿ ನನಗೆ ನನ್ನ 'ಲಿಬರಲ್ ಐಡೆಂಟಿಟಿ' ಬಗ್ಗೆ ಖುಶಿಯೆನಿಸುತ್ತಿತ್ತು. ಆದರೆ ನಿಧಾನವಾಗಿ ಮತ್ತೆ-ಮತ್ತೆ ನನ್ನತ್ತ ಎಸೆಯಲಾಗುತ್ತಿದ್ದ ಈ ಟಿಪ್ಪಣಿಯ ಬಗ್ಗೆ ನನಗೆ ಒಂದು ರೀತಿಯ ಸಿಟ್ಟು ಬರಲಾರಂಬಿಸಿತು. ನಾನು ಜಾಮಿಯ ಮಿಲಿಯ ಇಸ್ಲಾಮಿಯ ಯೂನಿವರ್ಸಿಟಿಯಲ್ಲಿ ಫಿಲ್ಮ್ ಅಂಡ್ ಟೆಲಿವಿಶನ್ ಅಧ್ಯಯನಕ್ಕೆ ಹೋದಾಗ ತೀವ್ರ ಬದಲಾವಣೆಗಳಾದವು.

.....ನಾನು ಆ ಕೋರ್ಸಿಗೆ ಸೇರಿದಾಗ ನನ್ನ ಮನಸ್ಸು ಹೊಸ ಅನುಭವಗಳಿಗೆ ತೆರೆದು-ಕೊಂಡಿತು, ಆಗಲೇ ನನಗೆ 'ಬೇರೆ'ಯವರಾಗಿಸುವ "ನಾವು ಮತ್ತು ಅವರು' ಎಂಬ ಪರಿಕಲ್ಪನೆಗಳು ಅರ್ಥವಾಗಲಾರಂಭಿಸಿದ್ದು. ಆದರೆ ಆ ವೇಳಗಾಗಲೇ ನಾನು ಮುಸ್ಲಿಮರ ಕುರಿತ ಹಿಂದೂ ಕಥನಗಳಿಗೆ ಎಷ್ಟೊಂದು ಒಗ್ಗಿಹೋಗಿದ್ದೆ......ಏಕೆ ಅವರಿಗೆ ಗಡ್ಡ ಇರಬೇಕು? ಮಹಿಳೆಯರೇಕೆ ಬುರ್ಖಾ ಧರಿಸಬೇಕು? ಅವರು ಬೇರೆಯರಾಗಿ ಏಕೆ ಕಾಣಿಸಬೇಕು? ನಾವು (ಹಿಂದೂಗಳಿಗೆ) ರಾಮಮಂದಿರವನ್ನು ಏಕೆ ಕೊಡಬಾರದು? ಕಸಾಯಿ ವೃತ್ತಿಯನ್ನು ಬಿಟ್ಟು ಬೇರೆ ಯಾವುದೋ ವೃತ್ತಿಗೆ ಏಕೆ ಹೋಗಬಾರದು? ಐಡೆಂಟಿಟಿಯ ಪ್ರಶ್ನೆ ಬಂದಾಗ ನಾನು ನಮ್ಮನ್ನೇ 'ಅವರು 'ಎಂದು ಕರೆಯುತ್ತಿದ್ದೆ......ನಾನು ಲಿಬರಲ್ ಮುಸ್ಲಿಮಳೆನಿಸಿಕೊಳ್ಳುವ ಬಗ್ಗೆ ಏಕೆ ಖುಶಿಪಡುತ್ತಿದ್ದೆ? ನಾನು ಒಬ್ಬ ಮುಸ್ಲಿಮಳಂತೆ ಕಾಣಿಸುತ್ತಿಲ್ಲ ಎಂಬುದರಿಂದಾಗಿಯೇ ನನ್ನ ನೆರೆಕರೆಯವರು, ಸಹಯೋಗಿಗಳು ನನ್ನೊಂದಿಗೆ ಗೆಳೆತನದಿಂದಿರುತ್ತಾರೆಯೇ?.........

ನಾನು ಆಳಕ್ಕೆ ಅಗೆದಂತೆಲ್ಲ ನನ್ನ ಬಗ್ಗೆ ನನ್ನದೇ ವಿಚಾರಗಳು ಎಷ್ಟು ಸುರುಟಿಕೊಂಡಿದ್ದವು ಎಂಬುದು ಹೆಚ್ಚೆಚ್ಚು ಅರಿವಿಗೆ ಬರಲಾರಂಭಿಸಿತು. ನಿಜ ಹೇಳಬೇಕೆಂದರೆ, ನನ್ನ ಇಡೀ ಕುಟುಂಬ ಸಂಪ್ರದಾಯಶರಣ ಮುಸ್ಲಿಮರನ್ನು ನಿರ್ದಯವಾಗಿ ಪರೀಕ್ಷಿಸುತ್ತದೆ ಮತ್ತು ಟೀಕಿಸುತ್ತದೆ. ಅತ್ತ ಗೆಳೆಯರ 'ಪೂಜೆ'ಗಳಲ್ಲಿ ಭಜನೆಗಳನ್ನು ಹಾಡುತ್ತದೆ. ಇದು ಅವರನ್ನು ತುಷ್ಟೀಕರಿಸುವ ಒಂದು ಪ್ರಯತ್ನವೇ? ನಾವು ಎಲ್ಲ ಹಿಂದುಗಳಂತೆ ಹೋಳಿ ಮತ್ತು ದೀಪಾವಳಿ ಆಚರಿಸುತ್ತೇವೆ. ನನ್ನ ಮಗಳು ದೀಪಾವಳಿಯಂದು ದೀಪ ಹಚ್ಚಿ ಮನೆ ಬೆಳಗುತ್ತಾಳೆ, ಅದನ್ನು ನಮ್ಮ ನೆರೆಯವರು ಮೆಚ್ಚಿಕೊಳ್ಳುತ್ತಾರೆ. ಆದರೆ ಈದ್‌ನಂದು ನಮ್ಮ ಮನೆ ಮಾತ್ರವೇ ಬೆಳಗುತ್ತಿರುತ್ತದೆ, ಯಾವ ನೆರೆಕರೆಯವರೂ ಈದ್ ತಮ್ಮ ಹಬ್ಬ ಎಂದು ಒಪ್ಪಿಕೊಂಡಿಲ್ಲ. ಬಹುಸಂಖ್ಯಾತರು ಎಂದೂ ತಮ್ಮ ಅಲ್ಪಸಂಖ್ಯಾತರನ್ನು ಸಂತುಷ್ಟಪಡಿಸ ಬಯಸಿಲ್ಲ ಎಂಬುದು ಸ್ಪಷ್ಟ. ಆದರೆ 'ಅಲ್ಪಸಂಖ್ಯಾತರ ತುಷ್ಟೀಕರಣ' ಎಂದು ದೊಡ್ಡ ಬೊಬ್ಬೆಯೆಬ್ಬಿಸುತ್ತಾರೆ.

ತಮಾಷೆಯೆಂದರೆ, 1980ರ ದಶಕದಿಂದ 'ಹಿಂದೂಗಳ ಬಲಿ' ಎಂಬ ಕಥನದ ಆಟ ನಡೆದಿದೆ. ಅದರಿಂದ ಹಲವು ಗಲಭೆಗಳೆದ್ದಿವೆ, ಅವುಗಳಲ್ಲಿ ಸಾಯಿಸಲ್ಪಟ್ಟವರು ಹಿಂದೂಗಳಿಗಿಂತ ಹೆಚ್ಚಾಗಿ ಮುಸ್ಲಿಮರು. ಪ್ರತಿಯೊಂದು ಗಲಭೆ ಅಲ್ಪಸಂಖ್ಯಾತ ಸಮುದಾಯವನ್ನು ಒಂದು ತಲೆಮಾರಿನಷ್ಟು ಹಿಂದಕ್ಕೆ ತಳ್ಳುತ್ತದೆ. 20 ವರ್ಷಗಳಲ್ಲಿ ಕಟ್ಟಿದ ಮನೆಗಳನ್ನು ಕಸಿದುಕೊಳ್ಳುತ್ತದೆ, ಉಳಿತಾಯಗಳು, ಭದ್ರತೆ, ಜೀವನಾಧಾರವನ್ನು ಕಸಿದುಕೊಳ್ಳುತ್ತದೆ, ಪ್ರೀತಿಪಾತ್ರರ ಜೀವಗಳ ಬಗ್ಗೆಯಂತೂ ಹೇಳಬೇಕಾಗಿಲ್ಲ. ಮುಗ್ಧ ಮುಸ್ಲಿಮರ ಮೇಲೆ ಅತ್ಯಾಚಾರಗಳು, ಬಂಧನಗಳನ್ನು ನಾನು ಮುಟ್ಟಲೂ ಹೋಗಲಾರೆ.

ಆದರೆ ಹಿಂದೂ ಮಾತ್ರ ತಾನು 'ಬಲಿಯಾಗಿದ್ದೇನೆ' ಎಂಬ ನಂಬಿಕೆಯಲ್ಲೇ ಸಾಗಿದ್ದಾರೆ, ಕೃತಿಯಲ್ಲೂ ಕೂಡ. ಮುಸ್ಲಿಮರಿಗೆ ಅವರು ಅದೇ ಪ್ರಶ್ನೆಗಳನ್ನು ಮತ್ತೆ-ಮತ್ತೆ ಕೇಳುತ್ತಾರೆ- ಮುಸ್ಲಿಮರೇಕೆ ಘೆಟ್ಟೋಗಳಲ್ಲಿ, ಕೊಳೆಗೇರಿಗಳಲ್ಲಿ ಬದುಕುತ್ತಾ-ರೆ? ಅಖ್ಲಾಕ್‌ಗೆ ಏನಾಯ್ತು ನೆನಪಿದೆಯೇ? ಆತನೇನೂ ಕೊಳೆಗೇರಿಯಲ್ಲಿ ಬದುಕುತ್ತಿರಲಿಲ್ಲ. ಮುಸ್ಲಿಂ ಸಮುದಾಯ ತನ್ನ ಮಹಿಳೆಯರಿಗೇಕೆ ನೆರವಾಗುವುದಿಲ್ಲ? ಮುಸ್ಲಿಮ್ ಮಹಿಳೆಯರಿಗೆ ಹಿಂದೂ ಮಹಿಳೆಯರಷ್ಟೇ ನೆರವು ಬೇಕಾಗಿದೆ. ಅವರೇಕೆ ಸಂಪ್ರದಾಯಶರಣರಾಗಿದ್ದಾರೆ?

ಮುಸ್ಲಿಮರಿಗೇಕೆ ಪ್ರತ್ಯೇಕ ಕಾನೂನುಗಳಿವೆ? ನಿಜವಾಗಿಯೂ ಇವೆಯೇ?!!!! ಮುಸ್ಲಿಮರಿಗೆ ಸಮಾನ ನಾಗರಿಕ ಸಂಹಿತೆ ಏಕೆ ಬೇಡ? ನಿಜವಾಗಿಯೂ!!!??? ಎಲ್ಲ ಮುಸ್ಲಿಮರು ಭಯೋತ್ಪಾದಕರಾಗಿರಲಿಕ್ಕಿಲ್ಲ, ಆದ-ರೆ ಎಲ್ಲ ಭಯೋತ್ಪಾದಕರು ಮುಸ್ಲಿಮರು??!!! ಎಲ್ಲ ಹಿಂದೂಗಳೂ ಗಲಭೆಕೋರರು ಎನ್ನಬಹುದಾದಷ್ಟಕ್ಕೆ ಮಾತ್ರ. ಗೋರಕ್ಷಕರು ಭಕ್ಷಕರಲ್ಲವೇ? ಈ ಹಿಂದೂಗಳಿಗೆ ಯಾವುದೇ ಮುಸ್ಲಿಮ ಗೊತ್ತಿಲ್ಲ, ತಮ್ಮದೇ ನಂಬಿಕೆಯ ಬಗ್ಗೆಯೂ ಗೊತ್ತಿಲ್ಲ.

ಭಾರತದಲ್ಲಿ ಮುಸ್ಲಿಮರು ಆರ್ಥಿಕ ಮತ್ತು ಸಾಂಸ್ಕೃತಿಕ ಪರಕೀಯತೆಯ ಎರಡಲಗಿನ ಖಡ್ಗವನ್ನು ಎದುರಿಸುತ್ತಿದ್ದಾರೆ. ಅವರನ್ನು ಘೆಟ್ಟೋಗಳ ಬದು-ಕಿಗೆ ತಳ್ಳಲಾಗಿದೆ. ಕಳೆದ 70 ವರ್ಷಗಳನ್ನು ಅವರು ಗಲಭೆಗಳ ಭೀತಿಯಲ್ಲಿ ಕಳೆದಿದ್ದಾರೆ. ತಮ್ಮ ಧರ್ಮವನ್ನು ತ್ಯಜಿಸಲು(ನನ್ನಂತೆ) ಮತ್ತು ಬ್ರಾಹಣ ಕಥನದಲ್ಲಿ ವಿಲೀನವಾಗಲು ಸಿದ್ಧರಿರುವವರು ಮಾತ್ರವೇ ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೇರುವ ನಿರೀಕ್ಷೆ ಇಟ್ಟುಕೊಳ್ಳಲು ಸಾಧ್ಯ. ಅವರ ಸಾಂಸ್ಕೃತಿಕ ಆಚರಣೆಗಳು, ಆಹಾರ ಪದ್ಧತಿಗಳು, ಉಡುಗೆ-ತೊಡಿಗೆಯ ಶೈಲಿ ಮತ್ತು ವೃತ್ತಿಗಳ ಮೇಲೆ ದಾಳಿಗಳಿಂದ ಮಾನಸಿಕವಾಗಿ ಜಜ್ಜಿ ಹಾಕಲಾಗಿದೆ. ಪೋಲೀಸರಿಗೆ ಮತ್ತು ಜನಜಂಗುಳಿಗೆ ಸುಲಭದ ಗುರಿಯಾಗಿದ್ದಾರೆ. ಅವರನ್ನು ಚಚ್ಚಿ, ಬಡಿದು, ಎನ್‌ಕೌಂಟರ್‌ಗಳಲ್ಲಿ ಸಾಯಿಸಬಹುದು, ಅಥವ 23 ವರ್ಷಗಳ ಕಾಲ ಜೈಲಿನಲ್ಲಿ ಇಟ್ಟ ಮೇಲೆ ನಿರಪರಾಧಿ ಎಂದು ಸಾರಬಹುದು. ಅವರು ಮನೆಯನ್ನು ಬಾಡಿಗೆಗೆ ಪಡೆಯುವಂತಿಲ್ಲ, ತಮ್ಮ ಮಕ್ಕಳನ್ನು ಒಳ್ಳೆಯ ಶಾಲೆಗೆ ಸೇರಿಸುವಂತಿಲ್ಲ ಅಥವ ಮನೆಕೆಲಸಕ್ಕೆ ನೆರವಾಗುವವರನ್ನು ಪಡೆಯುವಂತಿಲ್ಲ.

ಭಾರತೀಯ ಮುಸ್ಲಿಮರನ್ನು 'ಬೇರೆಯವರಾಗಿಸುವ' ಈ ಕಥನಕ್ಕೆ ಯಾರು ದೂಷಣೆ ಹೊರಬೇಕು? ಸರಾಸರಿ ಉದಾತ್ತ(ಲಿಬರಲ್) ಹಿಂದೂ ಅವರ ಕಥನವನ್ನು ನನ್ನಂತವರು ಅನುಸರಿಸಲು ನಿರಾಕರಿಸಿದರೆ ತಳಮಳಗೊಳ್ಳುತ್ತಾರೆ. ...ನಾನು ಕೋಮುವಾದಿ ಹತ್ಯೆಗಳಿಗೆ, ಅಥವ ಪ್ರಭುತ್ವದ ಅತ್ಯಾಚಾರಗಳಿಗೆ, ಪ್ರಭುತ್ವದ ಧೋರಣೆಗಳಿಗೂ ಪ್ರತಿಕ್ರಿಯಿಸಬಾರದು ಎಂದು ಆಶಿಸುತ್ತಾರೆ, ನಾನು ರಾಜಕೀಯ ಸಿದ್ಧಾಂತಗಳನ್ನು ಟೀಕಿಸುವುದನ್ನಂತೂ ಮರೆತು ಬಿಡಿ, ಒಂದು ಅಭಿಪ್ರಾಯವನ್ನು ಹೊಂದುವುದೂ ಅವರಿಗೆ ಇಷ್ಟವಾಗುವುದಿಲ್ಲ. ಅವರು ನಿಜಸಂಗತಿಗಳು, ಅಂಕಿ-ಅಂಶಗಳು, ದಸ್ತಾವೇಜುಗಳು, ಇತಿಹಾಸವನ್ನು ನೋಡಲೂ ಇಷ್ಟಪಡುವುದಿಲ್ಲ. ಮೊಟ್ಟೆ, ಮೀನು, ಚಿಕನ್, ಮಟನ್, ಪೋರ್ಕ್ ತಿನ್ನುತ್ತಾರೆ, ಸ್ಕಾಚ್ ಕುಡಿಯುತ್ತಾರೆ, ಒಳ್ಳೆ ಡ್ರೆಸ್ ಮಾಡಿಕೊಳ್ಳುತ್ತಾರೆ, ವಿದ್ಯಾವಂತರು, ಬಿಳಿಕಾಲರ್ ಉದ್ಯೋಗ ಪಡೆದಿದ್ದಾರೆ. ನನ್ನ ಬಿರಿಯಾನಿಯನ್ನೂ ಚಪ್ಪರಿಸುತ್ತಾರೆ. ತಮ್ಮ ಮಗಳು ಯಾರನ್ನು ಬೇಕಾದರೂ ಮದುವೆಗೆ ಆರಿಸಿಕೊಳ್ಳಿ, ಒಬ್ಬ ಮುಸ್ಲಿಮನನ್ನು ಮಾತ್ರ ಬೇಡ ಎನ್ನುತ್ತಾರೆ.....

ಕೊನೆಯದಾಗಿ ನನಗೆ ಭಾರತದಲ್ಲಿ ಬದುಕಲು ಬಿಟ್ಟಿದ್ದಕ್ಕಾಗಿ ಕೃತಜ್ಞಳಾಗಿರಬೇಕು ಎಂದು ನಿರೀಕ್ಷಿಸುತ್ತಾರೆ. ಪಾಕಿಸ್ತಾನದಲ್ಲಿದ್ದರೆ ನನ್ನ ಬದುಕು ಹೇಗಿರುತ್ತಿತ್ತು ಊಹಿಸಿಕೊಳ್ಳಿ?!!!

ನಾವು ಸ್ಪಷ್ಟವಾಗಿ ಹೇಳುತ್ತೇವೆ ಕೇಳಿ, ನಾನಾಗಲೀ, ಭಾರತೀಯ ಮುಸ್ಲಿಮರಾಗಲಿ ಭಾರತದ ಹಿಂದೂಗಳಿಗೆ ಕೃತಜ್ಞರಾಗಿರಲು ಏನೂ ಇಲ್ಲ. ನಾವು 'ಉದಾತ್ತ ಶಕ್ತಿಗಳು' ಎಂಬ ಹೆಸರಲ್ಲಿ ನಿಮ್ಮ ಆಟವನ್ನು ಆಡಲು ನಿರಾಕರಿಸುತ್ತೇವೆ. ನಿಮ್ಮಲ್ಲಿ ಅಲ್ಪಸಂಖ್ಯಾತರ ಬಗ್ಗೆ ಆಳವಾಗಿ ಬೇರುಬಿಟ್ಟ ದ್ವೇಷವಿದ್ದರೆ ನೀವು ಉದಾತ್ತರಲ್ಲ, ಲಿಬರಲ್‌ಗಳಲ್ಲ. ಭಾರತ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಎಂಬುದು ಒಂದು ಪ್ರಹಸನ. ಭಾರತದಲ್ಲಿ ನಿಜವಾದ ಪ್ರಜಾಪ್ರಭುತ್ವವನ್ನು ಅದರ ಅಲ್ಪಸಂಖ್ಯಾತರ ಮೂಲಕವೇ ಸ್ಥಾಪಿಸಲು ಸಾಧ್ಯ – ಧಾರ್ಮಿಕ, ಜಾತಿ ಮತ್ತು ಮೂಲನಿವಾಸಿ ಅಲ್ಪಸಂಖ್ಯಾತರ ಸೌಹಾರ್ದದ ಮೂಲಕ.

ವಿ.ಸೂ.: ನಿಮಗೇನಾದರೂ ಬುರ್ಖಾ, ಅಥವ ಮುಸ್ಲಿಮ್ ಟೋಪಿ ಮತ್ತು ಗಡ್ಡದಿಂದ ಬೆದರಿಕೆಯಿದೆ ಅನಿಸಿದರೆ ಇರಲಿ ಬಿಡಿ! ನಾನಾಗಿ ಬಯಸುವ ವರೆಗೆ ನಾನದನ್ನು ಬದಲಿಸಲಾರೆ. ಏನು ಬೇಕಾದರೂ ಮಾಡಿಕೊಳ್ಳಿ.

(kaafila.online ನಲ್ಲಿ ಎಪ್ರಿಲ್ 27, 2017ರಂದು ಪ್ರಕಟವಾದ Sabiha Farhat ಅವರ I am an Unapologetic Indian Muslim ಲೇಖನದಿಂದ)

(ಕೃಪೆ: ಸಬ್‌ರಂಗ್ ಇಂಡಿಯಾ – ಅನು: ವೇದರಾಜ್ ಎನ್.ಕೆ)

ಭಾರತೀಯ ಮುಸ್ಲಿಂ ಸಾಧಕರ ಕುರಿತು ಹೆಚ್ಚೆಚ್ಚು ಪ್ರಚಾರ ಸಿಗುವಂತಾದರೆ ಅದರಿಂದ ರಾಷ್ಟ್ರಕ್ಕೆ ಲಾಭವೇ ಆಗುತ್ತದೆ. ಭಾರತದ ಮಾನವ ಸಂಪತ್ತಿನ ಗಮನಾರ್ಹ ಭಾಗವೊಂದು ಕೀಳರಿಮೆಯಿಂದ ನರಳುತ್ತಿದ್ದರೆ ಅದು ಖಂಡಿತ ಒಳ್ಳೆಯದಲ್ಲ. ಮುಸ್ಲಿಂ ಯುವ ಸಮಾವೇಶ ಫಲಪ್ರದವಾಗಲಿ

– ಪಿ ಮಹಮ್ಮದ್

ಮಾಡದ ತಪ್ಪಿಗೇಕೆ ಕಟಕಟೆಯಲ್ಲಿ ನಿಲ್ಲಬೇಕು?
ಸಾಕು ಸಾಕಿನ್ನು ಅನುಮಾನ
ಅವಮಾನದ ಬೆಂಕಿಯಲ್ಲಿ ಬೇಯುವುದು
ಎದ್ದು ನಿಂತಿದ್ದೇವೆ ನಾವು ಸಮಾನತೆಗಾಗಿ
ಸ್ವಾತಂತ್ರ್ಯಕ್ಕಾಗಿ ಕೊರಳು ಕೊಟ್ಟವರ ವಂಶಸ್ಥರು
ನಾವು ಕೇಳುತ್ತೇವೆ; ಪ್ರಜಾಪ್ರಭುತ್ವ ಎಂಬುದಿದ್ದರೆ
ಎಲ್ಲಿ ನಮ್ಮ ಸಮಪಾಲು?

– ಬಿ ಪೀರ್ ಭಾಷಾ

ಮುಸ್ಲಿಂ ಯುವ ಸಮಾವೇಶ ಆತ್ಮಶೋಧನೆಯ ಪ್ರಾಮಾಣಿಕ ಪ್ರಯತ್ನ. ಜಗದ ಅನುಮಾನಗಳ ನಡುವೆ ಮುರಿದು ಬಿದ್ದಿರುವ ಮನಸ್ಸುಗಳ ನಡುವಿನ ತಿಳಿ ಮಾತುಕಥೆ... .. ಅನೇಕ ರೂಪಗಳಲ್ಲಿ ಹರಿದು ಹೋಗಿರುವ ಮುಸ್ಲಿಂ ಯುವಜನಾಂಗವನ್ನು ಹೊಲಿದು ಒಟ್ಟು ಮಾಡುವ ಒಂದು ಯತ್ನವಾಗುತ್ತಿದೆ. ಇದು ಯಾರ ಮೇಲಿನ ಯುದ್ಧದ ತಯಾರಿಯಲ್ಲ. ತನ್ನ ತಾ ಅರಿಯುವ ಪ್ರಯತ್ನ. ಹೊಸಯುಗದ ಹೊಸ ಬೆಳಕಿನತ್ತ ಮಾನವೀಯಗೊಂಡು ನಡೆಯುವ ಯತ್ನ. ಇದು ಇಲ್ಲಿ ಸಾಧ್ಯವಾಗಬೇಕು.

~ ಕಲೀಮ್ ಉಲ್ಲಾ

ಈ ನೆಲಮೂಲದ ಬದುಕಿನೊಂದಿಗೆ ಮುಸ್ಲಿಂ ಸಮುದಾಯ ಹೊಂದಿರುವ ಅಂತರ್ ಸಂಬಂಧವನ್ನು ಉಪೇಕ್ಷಿಸಿ ಆ ಇಡೀ ಸಮುದಾಯದ ಧಾರ್ಮಿಕ ಅಸ್ಮಿತೆಯನ್ನೇ 'ಮುಸ್ಲಿಂ' ಎಂಬಂತಹ ಸಂಕುಚಿತ ನೋಟಕ್ರಮವೊಂದನ್ನು ಮುಂದಿಟ್ಟಿದೆ. .. .. ಆ ಮಾದರಿಯ ಚರಿತ್ರೆಯ ತಪ್ಪಾದ ನಿರೂಪಣೆಗಳನ್ನು ಒಡೆಯುವ ಮಹತ್ವದ ಕೆಲಸವನ್ನು ಇಂದು ಮುಸ್ಲಿಂ ಸಮುದಾಯದ ಒಳಗೆ ಮತ್ತು ಅದರ ಹೊರಗಿರುವ ನೈಜ ಚರಿತ್ರೆಯ ಅರಿವಿರುವ ಪ್ರಜ್ಞಾವಂತ ಜನರು ಮಾಡಬೇಕಾಗಿದೆ.

– ಕಿರಣ್ ಗಾಜನೂರು

ಭಾರತದಲ್ಲಿ ಮುಸ್ಲಿಂ ಸಮುದಾಯ ಗುರುತಿಸಲ್ಪಡಬೇಕಾದುದು ಒಂದು ಧರ್ಮದ ಅನುಯಾಯಿಗಳು ಎನ್ನುವ ನೆಲೆಯಲ್ಲಿ ಅಲ್ಲ. ತುಳಿತಕ್ಕೊಳಪಟ್ಟ ಸಮುದಾಯ ಎನ್ನುವ ನೆಲೆಯಲ್ಲಿ. ಮತ್ತು ಮುಸ್ಲಿಮರು ಸಂಘಟಿತರಾಗಬೇಕಾದುದು ಮತ್ತು ಅವರನ್ನು ಸಂಘಟಿಸ ಬೇಕಾದುದು ಈ ನೆಲೆಯಲ್ಲೇ ಆಗಿದೆ. ಸಾಚಾರ್ ವರದಿ ಭಾರತದ ಮುಸ್ಲಿಮರನ್ನು "ನವ ದಲಿತರು" ಎಂದು ಕರೆದಿರೋದನ್ನೂ ನಾವು ಗಮನಿಸಬೇಕು. ಈ ನಿಟ್ಟಿನಲ್ಲಿ ಡಿವೈಎಫ್ಐ ಮಂಗಳೂರಿನಲ್ಲಿ ಹಮ್ಮಿಕೊಂಡಿರುವ ಯುವ ಮುಸ್ಲಿಂ ಸಮಾವೇಶ ಒಂದು ಮಹತ್ವದ ಕಾರ್ಯತಂತ್ರವಾಗಿದೆ.

– ಬಿ ಎಮ್ ಬಶೀರ್

ಒಬ್ಬ ಉದಾತ್ತ ಹಿಂದೂವಿನ ಪ್ರಣಾಳಿಕೆ...... ಪುಟ 9 ರಿಂದ

ಹಿಂದೆ ಬಿದ್ದಿದ್ದಾರೆ, ಹಿಂದೂ ಧರ್ಮವನ್ನು ಸಹಿಷ್ಣುವಾಗಿಸಿದ ಅಂತರ್ಮುಖತೆಯ ಗುಣವನ್ನು ನಾಶ ಮಾಡುತ್ತಿದ್ದಾರೆ. ಕ್ರಿಶ್ಚಿಯನ್ ಜಗತ್ತು ಚರ್ಚ್ ಮತ್ತು ಪ್ರಭುತ್ವವನ್ನು ಪ್ರತ್ಯೇಕಿಸಲು ಶತಮಾನಗಳ ಕಾಲ ಹೋರಾಟ ನಡೆಸಿತು. ಇಸ್ಲಾಮೀ ಜಗತ್ತು ಧರ್ಮವನ್ನು ತಮ್ಮನ್ನು ಊರ್ಜಿತಗೊಳಿಸಿಕೊಳ್ಳಲು ಬಳಸಿದ ಪುರೋಹಿತರುಗಳ ಮುತ್ತಿಗೆಗೆ ಒಳಗಾಗಿದೆ. ಈಗ ಆಧುನಿಕ ಹಿಂದುತ್ವವಾದಿಗಳು ರಾಜಕೀಯ ದಳವಾಯಿಗಳನ್ನು ಪವಿತ್ರ ವ್ಯಕ್ತಿಗಳಿಂದ ಪ್ರತ್ಯೇಕಿಸುವ ರಕ್ತಮಯ ಯುದ್ಧಗಳನ್ನು ನಡೆಸಬೇಕಾಗಿ ಬಂದ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಸಮಾಜಗಳು ಅನುಭವಿಸಬೇಕಾಗಿ ಬಂದ ದುರಂತಗಳನ್ನೇ ಭಾರತದಲ್ಲಿ ಪುನರಾವರ್ತಿಸ ಬಯಸುತ್ತಿದ್ದಾರೆ. ವಿರೋಧಾಬಾಸವೆಂದರೆ, ಹಿಂದೂ ಧರ್ಮವನ್ನು ರಾಜಕೀಯಕರಣಗೊಳಿಸಿ ಈ ಕುರುಡು ಭಕ್ತರುಗಳು ಅದರ ಅನನ್ಯ ಶಕ್ತಿಯನ್ನು ಹರಣ ಮಾಡುತ್ತಿದ್ದಾರೆ........

ಹಿಂದೂ ಧರ್ಮದ ಬಹುತ್ವದಿಂದಾಗಿಯೇ, ಅದಕ್ಕೆ ಒಂದು ಏಕೈಕ ಸ್ಥಾಪಿತ ಕೇಂದ್ರ ಪೀಠ, ಏಕೈಕ ನಂಬಿಕೆಗಳ ಕಂತೆ, ಒಂದೇ ಆಧ್ಯಾತ್ಮಿಕ ಅಧಿಕಾರ ಕೇಂದ್ರ ಇರಲಿಲ್ಲವಾದ್ದರಿಂದಲೇ ಅದಕ್ಕೆ ಎಂದೂ ಪ್ರಭುತ್ವ ಶಕ್ತಿಯ ಅಗತ್ಯ ಕಂಡಿರಲಿಲ್ಲ.

ಉದಾತ್ತ ಹಿಂದೂಗಳೇ, ನಿಮ್ಮ ಧರ್ಮವನ್ನು ಮರಳಿ ಪಡೆಯಬೇಕಾದ ಸಮಯವೀಗ ಬಂದಿದೆ. ಉದಾತ್ತ ಹಿಂದೂವಿನ ಒಂದು ಪ್ರಣಾಳಿಕೆಯನ್ನು ಸೃಷ್ಟಿಸಿ, ಅದರಂತೆ ಬದುಕಬೆಕಾದ ಸಮಯವೀಗ ಬಂದಿದೆ. ಹಿಂದೂ ಪರಂಪರೆ ಒಂದು ನಿರ್ದಿಷ್ಟ ಸ್ಥಳದಲ್ಲಿ ರಾಮಮಂದಿರ ಕಟ್ಟಬೇಕೆನ್ನುವುದಕ್ಕಿಂತ ಎಷ್ಟೋ ದೊಡ್ಡದು. ಹಿಂದೂ ಧರ್ಮದಲ್ಲಿ ದೇವರು ಪ್ರತಿ ಹಿಂದೂವಿನ ಮನೆಯ ಪೂಜಾ ಕೋಣೆಗಳಲ್ಲಿ ನೆಲೆಸಿರುತ್ತಾರೆ ತಾನೇ.

ಒಂದಿಷ್ಟು ನಿರ್ದಿಷ್ಟ ದೇವತೆಗಳ ಒಂದು ಏಕರೂಪೀ ಧಾರ್ಮಿಕ ವಿಧೇಯತೆಯನ್ನು ಸೃಷ್ಟಿಸುವುದು, ಒಂದೇ ರೀತಿಯ ಪೂಜಾವಿಧಾನ, ಒಂದೇ ರೀತಿಯ ಆಹಾರ ಪದ್ಧತಿಗೆ ಪ್ರಾಧಾನ್ಯತೆ, ಒಂದೇ ಜನಾಂಗೀಯ ಮಾದರಿ, ಒಂದೇ ಭಾಷೆ, ಒಂದೇ ದೇವಸ್ಥಾನದ ಆಗ್ರಹ ನಿಮ್ಮ ಪೂರ್ವಜರು ದಂಗು ಬಡಿಸುವ ವೈವಿಧ್ಯತೆಗಳೊಂದಿಗೆ ನಿರಾಳವಾಗಿ ಬದುಕಿದ ಒಂದು ಧರ್ಮಶ್ರದ್ಧೆಯನ್ನು ತಿರಸ್ಕರಿಸುವಂತದ್ದು.

ಉದಾತ್ತ ಹಿಂದೂಗಳೇ, ಹಿಂದೂ ಧರ್ಮ ಎಂದರೆ ಚಚ್ಚಿ ಹಾಕುವುದು ಮತ್ತು ಪೋಲೀಸ್ ದೂರುಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಹೊಲಸು ಭಾಷೆಯಲ್ಲ, ಅದಕ್ಕಿಂತ ಎಷ್ಟೋ ಹೆಚ್ಚಿನದ್ದು ಎಂದು ತೋರಿಸಿಕೊಡಬೇಕಾದ ಸಮಯ ಬಂದಿದೆ. ಹಲವು ತಲೆಮಾರುಗಳ ಹಿಂದೂಗಳು ಮಸೀದಿಯಿಂದ ನಮಾಜಿನ ಕರೆಯನ್ನು ಎಳ್ಳಷ್ಟೂ ಆತಂಕಿತರಾಗದೆ ಕೇಳುತ್ತ ಬಂದಿಲ್ಲವೇ? ನಾವು ಇಡೀ ಜಗತ್ತು, ವಿದ್ವಾಂಸರಿಂದ ಹಿಡಿದು ಹಿಪ್ಪಿಗಳು, ಬೀಟ್ಲ್‌ಗಳ ವರೆಗೆ ಒಂದೊಮ್ಮೆ ಪ್ರೀತಿಸಿದ ಒಂದು ಧರ್ಮಕ್ಕೆ ಸೇರಿದವರು, ಅದನ್ನು ಈಗ ಅಲ್ಪ ರಾಜಕೀಯಕ್ಕಾಗಿ ನಾಶ ಪಡಿಸುವುದನ್ನು ಒಪ್ಪುವುದಿಲ್ಲ ಎಂದು ದನಿಯೆತ್ತಿ ಹೇಳಿ. ಉದಾತ್ತ ಹಿಂದೂಗಳೇ, ಇದೀಗ ನಿಮ್ಮ ಸಮಯ.

(blogs.timesofindia.indiatimes.com ನಲ್ಲಿ ಎಪ್ರಿಲ್ 26, 2017 ರಂದು ಪ್ರಕಟವಾದ Sagarika Ghose ಅವರ Manifesto for a liberal Hindu – It's time for secular Hindus to say: Garv se kaho hum liberal hain ಲೇಖನದಿಂದ)

(ಕೃಪೆ: ಸಬ್‌ರಂಗ್ ಇಂಡಿಯಾ – ಅನು: ವೇದರಾಜ್ ಎನ್.ಕೆ)

ನಿರ್ಭಯ ಮತ್ತು ಬಿಲ್ಕಿಸ್ ಬಾನೊ ತೀರ್ಪುಗಳು: ಭಿನ್ನ ಮಾನದಂಡಗಳು – ಬೃಂದಾ ಕಾರಟ್

(ಅನುವಾದ: ಟಿ. ಸುರೇಂದ್ರ ರಾವ್)

ಹಿಂದೆಂದೂ ಕಂಡು ಕೇಳರಿಯದ ರೀತಿಯಲ್ಲಿ ಭಾರತದ ಅಂತಃಸಾಕ್ಷಿಯನ್ನು ಕೆರಳಿಸಿದ ನಿರ್ಭಯ ಪ್ರಕರಣವು, ಹಿಂದೆ ಎಂದೂ ಬೀದಿ ಪ್ರತಿಭಟನೆಗಿಳಿಯದ ಸಾವಿರಾರು ಯುವಜನರನ್ನು ಹೋರಾಟಕ್ಕಿಳಿಸಿತು. ಈಗ ತೀರ್ಪಿನಲ್ಲಿ ಸವಿಸ್ತಾರವಾಗಿ ಹೇಳಿದಂತೆ, ಆ ಹರೆಯದ ಹೆಣ್ಣು ಜ್ಯೋತಿಯ ಧೈರ್ಯ ಮತ್ತು ಸ್ಥೈರ್ಯ, ಅವಳ ಮೇಲಿನ ಪಾತಕದ ಕ್ರೌರ್ಯ, ಅತ್ಯಂತ ಅನ್ಯಾಯದ ಮತ್ತು ಅತ್ಯಂತ ಜಿಗುಪ್ಸೆ ಹುಟ್ಟಿಸುವ ಅವಳ ಸಾವು ಇವೆಲ್ಲವೂ ನಮ್ಮ ವ್ಯವಸ್ಥೆ ಕೊಳೆತು ನಾರುತ್ತಿರುವುದನ್ನು ಸಂಕೇತಿಸುತ್ತದೆ, ತರುಣಿಯರ ನಿಜವಾದ ಭಯ ಹಾಗೂ ಭೀಕರ ಅನುಭವಗಳನ್ನು ಬಿಂಬಿಸುತ್ತದೆ, ಅದು ನಮ್ಮ ಸಾಮಾಜಿಕ ಗಡಿಗಳಾಚೆಗಿನ ಸಾರ್ವತ್ರಿಕ ಪ್ರಸ್ತುತತೆಯ ಪ್ರಕರಣವಾಗಿದೆ. ನಿರ್ಭಯ ಪ್ರಕರಣ ಮತ್ತು ಸಾರ್ವಜನಿಕ ಕೋಪ ಅಂದಿನ ಸರ್ಕಾರ ಮತ್ತು ಎಲ್ಲಾ ರಾಜಕೀಯ ಪಕ್ಷಗಳ ಮೇಲೆ ತಂದ ಒತ್ತಡವು ನಿಕಟಪೂರ್ವ ಮುಖ್ಯ ನ್ಯಾಯಾಧೀಶ ಜೆ.ಎಸ್.ವರ್ಮಾ ಅವರ ನೇತೃತ್ವದ ಆಯೋಗ ರಚನೆಗೆ ಕಾರಣವಾಯಿತು. ಆ ಆಯೋಗವು ಕೆಲವು ಪ್ರಮುಖ ಶಿಫಾರಸುಗಳನ್ನು ಮಾಡಿತು. ಕಾನೂನಿಗೆ ತಿದ್ದುಪಡಿಗಳನ್ನು ತರುವುದರ ಜತೆಯಲ್ಲೇ, ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಯಲು ಮತ್ತು ಸಾಮಾಜಿಕ ಸ್ತರಗಳಲ್ಲಿ ಮಹಿಳೆಯರು ತಮ್ಮ ಸಮಾನ ಹಕ್ಕುಗಳಿಗಾಗಿ ನಿರ್ಭೀತ ಮತ್ತು ಸುರ–ಕ್ಷೆಯ ವಾತಾವರಣ ಕಲ್ಪಿಸಲು ಆಡಳಿತ ವ್ಯವಸ್ಥೆಯು ಕೈಗೊಳ್ಳಬೇಕಾದ ಕ್ರಮಗಳನ್ನೂ ಆಯೋಗವು ಶಿಫಾರಸು ಮಾಡಿದೆ. ವರ್ಮಾ ಆಯೋಗವು ಪ್ರಸ್ತಾಪಿಸಿದ ಕೆಲವು ತಿದ್ದುಪಡಿಗಳನ್ನು ಸಂಸತ್ತು ಒಪ್ಪಿಕೊಂಡಿದೆ ಮತ್ತು ಅಂಗೀಕರಿಸಿದೆ. ಆದರೆ ಮಹಿಳೆಯರಿಗಾಗಿ ನಿರ್ಭೀತ ಹಾಗೂ ಸುರಕ್ಷೆಯ ದೇಶವನ್ನಾಗಿ ಮಾಡುವಲ್ಲಿ ಜಾರಿಮಾಡಬೇಕಾದ ಕ್ರಮಗಳು ಇನ್ನೂ ಬಹಳ ದೂರದಲ್ಲೇ ಇವೆ.

ಕೆಲವು ಸ್ವಾಗತಾರ್ಹ ಅಂಶಗಳು

ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದ ಬಗ್ಗೆ ನಮ್ಮ ದೇಶದೊಳಗಡೆ ಶಿಕ್ಷೆಯ ದರ 20%ರಷ್ಟು ತೀರ ಕಡಿಮೆ ಇರುವಾಗ, ಪ್ರಕರಣಗಳು ದಶಕಗಟ್ಟಲೆ ಎಳೆದುಕೊಂಡು ಹೋಗುತ್ತಿರುವಾಗ, ಜ್ಯೋತಿಯ ಮೇಲಿನ ಭೀಕರ ಅಪರಾಧ ಎಸಗಿದ ದುಷ್ಕರ್ಮಿಗಳು ತಪ್ಪಿಸಿಕೊಳ್ಳಲಾಗಲಿಲ್ಲ ಮತ್ತು ನಾಲ್ಕೂವರೆ ವರ್ಷಗಳೊಳಗೇ ನ್ಯಾಯಾಂಗದ ಪ್ರಕ್ರಿಯೆ ಮುಗಿದಿರುವುದು ಬಹು ತೃಪ್ತಿಕರ ಸಂಗತಿ. ನಿರ್ಭಯ ಪ್ರಕರಣದಲ್ಲಿ ಶಿಕ್ಷೆಗೊಳಗಾದ ದುಷ್ಕರ್ಮಿಗಳ ಅಪರಾಧದ ಬಗ್ಗೆ ಸ್ವಲ್ಪವೂ ಅನುಮಾನ ಇಲ್ಲ. ಕೆಳ ನ್ಯಾಯಾಲಯಗಳಲ್ಲಿ ಆರೋಪಿಗಳ ಪರ ವಕೀಲರ ವಾದಗಳು ಆ ಹರೆಯದ ಹೆಣ್ಣುಮಗಳ ನಡೆತೆ–ಯ ಕುರಿತು, ಕೋರ್ಟುಗಳಲ್ಲಿ ಮತ್ತು ಹೊರಗಡೆ, ಸಾಮಾನ್ಯವಾಗಿ ಅತ್ಯಾಚಾರ ಪ್ರಕರಣಗಳಲ್ಲಿ ಪ್ರತಿವಾದಿಗಳು ಮಾಡುವಂತೆ, ಮಾಡಿದ ದೋಷಾರೋಪಣೆಗಳಂತೆ ಇದ್ದವು. ಅವೆಲ್ಲವನ್ನೂ ಸುಪ್ರೀಂ ಕೋರ್ಟು ತಿರಸ್ಕರಿಸಿರುವುದು ಸ್ವಾಗತಾರ್ಹ ಅಂಶ.

ಮಹಿಳೆಯರ ಮೇಲಿನ ಲೈಂಗಿಕ ಅಪರಾಧ ಪ್ರಕರಣಗಳಲ್ಲಿ ಅದರ ವಿರುದ್ಧ ಹೋರಾಡುತ್ತಿರುವ ಸಂತ್ರಸ್ಥೆಯರಿಗೆ, ನಿರ್ಭಯ ಪ್ರಕರಣ–ಕ್ಕೆ ಸಂಬಂಧಪಟ್ಟಂತೆ ನ್ಯಾಯಾಂಗ ಪ್ರಕ್ರಿಯೆಯಲ್ಲಿನ ಈ ಧನಾತ್ಮಕ ಅಂಶಗಳು ಧೈರ್ಯ ತುಂಬುತ್ತವೆ. ಇವು ಅಪರೂಪದ ಸಂಗತಿಗಳಾಗದೆ ಸಹಜವಾಗಿ ಎಲ್ಲರಿಗೂ ದೊರಕುವಂತಾಗಲಿ.

ಶಿಕ್ಷೆಯ ಬಗ್ಗೆ ಹೇಳುವುದಾದರೆ, ಕೆಳ ಕೋರ್ಟುಗಳೂ ಒಳಗೊಂಡಂತೆ ಎಲ್ಲಾ ಕೋರ್ಟುಗಳು ಆರೋಪಿಯನ್ನು ತಪ್ಪಿತಸ್ಥ ಎಂದು ಸಾರಿವೆ ಮತ್ತು ಗಲ್ಲುಶಿಕ್ಷೆಯನ್ನೇ ನೀಡಿವೆ. ಈಗ ಸುಪ್ರೀಂ ಕೋರ್ಟು ಸಹ ಅದನ್ನು ಎತ್ತಿಹಿಡಿದಿದೆ.

ಗಲ್ಲು ಶಿಕ್ಷೆ ಬಗ್ಗೆ ಬೇಕಾಬಿಟ್ಟಿ ನಿರ್ಧಾರ

ಹಿಂದೆ ಅಪರಾಧ ಮಾಡಿದ ದಾಖಲೆಗಳಿಲ್ಲ ಎಂಬ ವಾದವನ್ನು ಪ್ರತಿವಾದಿಗಳು ಮಾಡಿದ್ದರು. ಶಿಕ್ಷೆ ನೀಡುವಾಗ ನ್ಯಾಯಾಂಗದ ತೀರ್ಮಾನಗಳಲ್ಲಿ ಈ ಅಂಶವನ್ನು ನ್ಯಾಯಶಾಸ್ತ್ರ ಪರಿಗಣಿಸುತ್ತದೆ. ಬಡತನ ಮತ್ತು ಅಪರಾಧಿಗಳ ಬದುಕಿನಲ್ಲಿನ ಭೀಕರ ಸ್ಥಿತಿಯನ್ನು ಮುಂದೆ ತಂದು ಅಪರಾಧದ ತೀಕ್ಷ್ಣತೆಯನ್ನು ತಗ್ಗಿಸುವ ಅಂಶವನ್ನಾಗಿ ಪ್ರತಿವಾದಿಗಳು ಬಳಸಿದ್ದಾರೆ. ಇಂತಹ ಪ್ರಕರಣಗಳಲ್ಲಿ ಒಪ್ಪಲಿಕ್ಕೇ ಸಾಧ್ಯವಾಗದಂತಹ ಸಮರ್ಥನೆಗಳಿವು. ಹೌದು, ಭಾರತದಂತಹ ತೀವ್ರ ಅಸಮಾನ ವ್ಯವಸ್ಥೆಯಲ್ಲಿ ಬಡವರ ಮಕ್ಕಳು ಬದುಕಲು ಬೇರೆ ದಾರಿಯಿಲ್ಲದೆ ಪಾತಕ ಶಕ್ತಿಗಳ ಶೋಷಣೆಗೆ ತುತ್ತಾಗುತ್ತಾರೆ ಎನ್ನುವುದು ನಿಜ. ಇಲ್ಲಿ, ದೇಶದ ರಾಜಧಾನಿಯಲ್ಲಿ, ನೂರಾರು ಬೀದಿ ಮಕ್ಕಳು, ಕೆಲವರು ಓಡಿ ಬಂದವರು, ಅಮಾನವೀಯ ಸ್ಥಿತಿಯಲ್ಲಿ ಬದುಕುತ್ತಿರುವುದನ್ನು ನಮ್ಮ ಕಣ್ಣಾ–ರೆ ನೋಡುತ್ತೇವೆ. ಅವರು ಹೇಗೆ ಬೆಳೆಯುತ್ತಾರೆ, ಯುವಕರಾಗಿ ಬೆಳೆಯುವಾಗ ಅವರು ಏನನ್ನು ತಮ್ಮ ಜತೆ ತೆಗೆದುಕೊಂಡು ಹೋಗುತ್ತಾರೆ, ನಿಜಕ್ಕೂ ಇವು ನಮ್ಮನ್ನು ತೀವ್ರವಾಗಿ ಕಾಡುವ ಮತ್ತು ಪ್ರಸ್ತುತವಾದ ಪ್ರಶ್ನೆಗಳು. ಭಾರತದಂತಹ ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಪರಿಸರವೇ, ಸಾಮಾನ್ಯವಾಗಿ ಪಾತಕಗಳ ಹುಟ್ಟಿಗೆ ಕಾರಣವಾಗುತ್ತವೆ. ಗಲ್ಲು ಶಿಕ್ಷೆ ನಮ್ಮ ಶಾಸನ ಪುಸ್ತಕಗಳಲ್ಲಿ ಇರುವಾಗ ಇಂತಹ ಪ್ರಶ್ನೆಗಳು ಜೀವನ್ಮರಣದ ವಿಷಯಗಳಾಗುತ್ತವೆ.

> **ಒಂದೇ ದಿನದ ಎರಡು ತೀರ್ಪುಗಳು ದೇಶದ ಗಮನ ಸೆಳೆದಿವೆ. ಮೊದಲನೆಯದು ನಿರ್ಭಯ ಪ್ರಕರಣದ ಸುಪ್ರೀಂ ಕೋರ್ಟ್ ತೀರ್ಪು. ಎರಡನೆಯದು ಬಿಲ್ಕಿಸ್ ಬಾನೊ ಪ್ರಕರಣದ ಮುಂಬಯಿ ಹೈಕೋರ್ಟ್ ತೀರ್ಪು. ಎರಡು ಪ್ರಕರಣಗಳು, ಇಬ್ಬರು ಮಹಿಳೆಯರು, ನ್ಯಾಯದ ಎರಡು ಮಾನದಂಡಗಳು.**

ಗಲ್ಲುಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಸುಪ್ರೀಂ ಕೋರ್ಟು ಪರಿಗಣಿಸಿದ ಅನೇಕ ಪ್ರಕರಣಗಳಿವೆ. ಯಾವುದು ಅಪರೂಪದಲ್ಲಿ ಅಪರೂಪದ ಪ್ರಕರಣಗಳಾಗುತ್ತವೆ ಎಂಬುದನ್ನು ಅನೇಕ ಬಾರಿ ವ್ಯಕ್ತಿನಿಷ್ಠ ಅಂಶಗಳು ನಿರ್ಧರಿಸುತ್ತವೆ. ಕೆಲವು ಪ್ರಕರಣಗಳಲ್ಲಿ ಗಲ್ಲು ಶಿಕ್ಷೆಯನ್ನು "ಸಾಮೂಹಿಕ ಅಂತಃಸಾಕ್ಷಿ"ಯನ್ನು ಸಂತೃಪ್ತಿಗೊಳಿಸಲು ನೀಡಲಾಗಿದೆ, ಕೆಲವೊಮ್ಮೆ ಖಾಪ್ ಪಂಚಾಯತ್ ಗಳ ಕ್ರಮಗಳನ್ನು ಸಮರ್ಥಿಸಲು ಈ ವಾದವನ್ನು ಮುಂದೊಡ್ಡಲಾಗಿದೆ. ಈ ಪ್ರಕ್ರಿಯೆ ಬೇಕಾಬಿಟ್ಟಿಯಾದ್ದು ಮತ್ತು ವ್ಯಕ್ತಿನಿಷ್ಠವಾಗಿ ನಿರ್ಧರಿಸಿದ್ದು. ಗಲ್ಲುಶಿಕ್ಷೆಯನ್ನು ರದ್ದುಮಾಡಲು ಬಲವಂತದ ಕಾರಣಗಳಿವೆ. ಒಂದು ವ್ಯವಸ್ಥೆಯಾಗಿ, ಪೆರೋಲ್ ಇಲ್ಲದ ಕಠೋರ ಜೀವಾವಧಿ ಶಿಕ್ಷೆಯನ್ನು ಗರಿಷ್ಠ ಶಿಕ್ಷೆಯೆಂದು ಪರಿಗಣಿಸುವುದು ಹೆಚ್ಚು ಸೂಕ್ತವಲ್ಲವೆ? ಗಲ್ಲು ಶಿಕ್ಷೆಯನ್ನು ರದ್ದುಮಾಡಬೇಕೆಂದು ನಾನಂತೂ ತಾತ್ವಿಕವಾಗಿ ನಂಬಿದ್ದೇನೆ.

ಬಿಲ್ಕಿಸ್ ಬಾನೊ ಪ್ರಕರಣದ ತೀರ್ಪಿನಲ್ಲಿ ಗಲ್ಲು ಶಿಕ್ಷೆ ಬಗೆಗಿನ ತೀರ್ಮಾನಗಳ ಬೇಕಾಬಿಟ್ಟಿ ಸ್ವಭಾವವನ್ನು ನಾವು ಕಾಣಬಹುದು. ನಿರ್ಭಯ ಪ್ರಕರಣದಲ್ಲಿ ಅಪರಾಧಿಗಳಿಗೆ ಗಲ್ಲು ಶಿಕ್ಷಯಾಗಿರಬೇಕಾದರೆ, ಬಿಲ್ಕಿಸ್ ಮತ್ತವರ ಕುಟುಂಬದವರು ಅನುಭವಿಸಿದ ಭೀಕರ ಹಿಂಸೆಗೆ ಕಾರಣರಾದವರಿಗೂ ಅದು ಅನ್ವಯಿಸಬೇಕಲ್ಲ ಎಂದು ಕೆಲವರು ವಾದ ಮುಂದಿಟ್ಟಿದ್ದಾರೆ. ನಿರ್ಭಯ ಪ್ರಕರಣದಲ್ಲಿ ಅಪರಾಧಿಗಳಿಗೆ ನೀಡಿದ ಗಲ್ಲುಶಿಕ್ಷೆಯನ್ನು ತಮ್ಮ ಪ್ರಕರಣದ ಅಪರಾಧಿಗಳಿಗೂ ಅನ್ವಯಿಸಬೇಕೆಂದು ಸುಪ್ರೀಂ ಕೋರ್ಟಿಗೆ ಮನವಿ ಸಲ್ಲಿಸಲು ಬಿಲ್ಕಿಸ್ ಅವರೇ ಮುಂದಾಗಿದ್ದಾರೆಂದು ವರದಿಯಾಗಿದೆ. ಆದರೆ ಈ ಎರಡೂ ಪ್ರಕರಣಗಳನ್ನು ಎದುರು ಬದುರು ಇಟ್ಟು ನೋಡುವ ನನ್ನ ವಾದದ ಉದ್ದೇಶವೇನೆಂದರೆ, ಗಲ್ಲುಶಿಕ್ಷೆ ನಿರ್ಧರಿಸುವಾಗಿನ ಪ್ರಕ್ರಿಯೆಯಲ್ಲಿನ ದೌರ್ಬಲ್ಯ ಹಾಗೂ ನ್ಯೂನತೆಯನ್ನು ಎತ್ತಿತೋರಿಸುವುದೇ ಆಗಿದೆ.

ಬಿಲ್ಕಿಸ್ : 15 ವರ್ಷಗಳ ಮುಗಿಯದ ಹೋರಾಟ

ಬಿಲ್ಕಿಸ್ ಬಾನೊ ಪ್ರಕರಣದಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರತಿಭಟನೆಗಳಾಗಲಿಲ್ಲ. ಮಾರ್ಚ್ 2002ರಿಂದ, ಅವರೊಬ್ಬರೇ ಏಕಾಂಗಿಯಾಗಿ ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ, ತೀಸ್ತಾ ಸೆಟಲ್‌ವಾಡರಂಥಾ ಮಾನವ ಹಕ್ಕುಗಳ ಹೋರಾಟಗಾರರ ಸಹಾಯದಿಂದಾಗಿ ಹೋರಾಡಿದರು. ಈಗ ಬಿಲ್ಕಿಸ್ ಅವರಂಥವರಿಗೆ ಸಹಾಯ ಮಾಡಿದ್ದಕ್ಕಾಗಿ ತೀಸ್ತಾ ಅವರೆ ಅನ್ಯಾಯಕ್ಕೊಳಗಾಗಿ ಸಂತ್ರಸ್ಥೆಯಾಗಬೇಕಾಯಿತು. 15 ವರ್ಷಗಳ ನಂತರವೂ, ಬಿಲ್ಕಿಸ್ ಅವರ ನ್ಯಾಯಕ್ಕಾಗಿನ ಹುಡುಕಾಟ ಇನ್ನೂ ಮುಂದುವರಿದೇ ಇದೆ.

ಈ ತೀರ್ಪಿನಲ್ಲಿ ಕೂಡ, ಹಲ್ಲೆಯ ಭೀಕರ ವಿವರಗಳನ್ನು ದಾಖಲಿಸಲಾಗಿದೆ. ಈ ತೀರ್ಪಿನ ಪ್ರಕಾರ, "ಫೆಬ್ರವರಿ 27 ರಂದು, ದೊಡ್ಡ ಸಂಖ್ಯೆಯ ಹಿಂದೂ ಕರಸೇವಕರ ಸಾವಾಯಿತು . . .ಗೋದ–ತ್ರ ರೈಲು ನಿಲ್ದಾಣದಲ್ಲಿ . . .ಮುಸ್ಲಿಂ ಕೋಮಿನ ಸದಸ್ಯರಿಂದ ಎಂದು ಆಪಾದಿಸಲ್ಪಟ್ಟವರಿಂದ. ಈ ಕಾರಣದಿಂದಾಗಿ, ಗುಜರಾತ್ ರಾಜ್ಯದಲ್ಲಿ ವ್ಯಾಪಕ ಕೋಮು ಗಲಭೆಗಳಾದವು. ಆ ಕೋಮು ಗಲಭೆಗಳಲ್ಲಿ ದೊಡ್ಡ ಸಂಖ್ಯೆಯ ಜೀವಹಾನಿಗಳಾದವು."

ಬಿಲ್ಕಿಸ್ ಎದುರಿಸಿದ ಭೀಕರತೆಯ ಹಿನ್ನೆಲೆ ಇದು. ತರುಣಿ, ಗರ್ಭಿಣಿಯಾಗಿದ್ದ ಬಿಲ್ಕಿಸ್ ತನ್ನ ಹಳ್ಳಿ ದೊಹಡ್ ಜಿಲ್ಲೆಯ ರಣಧಿಕ್‌ಪುರ ಬಿಟ್ಟು ತನ್ನ ಇಡೀ ಕುಟುಂಬದೊಂದಿಗೆ ಓಡಿಹೋಗಬೇಕಾಯಿತು. ಮಾರ್ಚ್ 3 ರಂದು, ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಓಡಾಡುತ್ತಿರುವಾಗ, ಎರಡು ಕಾರುಗಳಲ್ಲಿ ಮುಸ್ಲಿಮರಿಗಾಗಿ ಹುಡುಕಾಡುತ್ತಿದ್ದ ದುಷ್ಕರ್ಮಿಗಳ ತಂಡದ ಕಣ್ಣಿಗೆ ಇವರು ಬಿದ್ದರು. ಆ ಸಮಯದಲ್ಲಿ ತನ್ನ ಮೂರು ವರ್ಷದ ಮಗಳು ಸಲೀಹಳನ್ನು ತನ್ನ ಕಂಕುಳಲ್ಲಿ ಹೊತ್ತಿದ್ದಳು. ತನ್ನ ಕಡೆಗೆ ಬರುತ್ತಿದ್ದ ತನ್ನ ಹಳ್ಳಿಯವರೇ ಆದ ಗಂಡಸರನ್ನು ಇವಳು ಗುರುತಿಸಿದಳು. ಅವಳ ತೋಳಿನಿಂದ ಮಗಳನ್ನು ಕಿತ್ತುಕೊಂಡ ಅವರು ಮಗುವಿನ ತಲೆಯನ್ನು ನೆಲಕ್ಕೆ ಬಡಿದರು. ಅವಳ ಕಣ್ಣೆದುರಿನಲ್ಲೇ ಮಗಳು ಜೀವ ತೊರೆದಳು. ಗರ್ಭಿಣಿಯಾಗಿದ್ದ ಬಿಲ್ಕಿಸ್‌ನ ಮೇಲೆ ಮೂರು ಜನ ಗಂಡಸರು ಸಾಮೂಹಿಕ ಅತ್ಯಾಚಾರ ನಡೆಸಿದರು. ಅವಳ ತಂಗಿ ಮತ್ತು ಅವಳ ಸೋದರ ಸಂಬಂಧಿಯೂ ಅತ್ಯಾಚಾರಕ್ಕೊಳಗಾದರು. ಅವರಲ್ಲಿ ಒಬ್ಬಳು ಹಿಂದಿನ ದಿನವಷ್ಟೆ ಜನ್ಮ ನೀಡಿದ್ದಳು. ಆ ಮಗು ಅವಳ ಬಳಿ ಇತ್ತು. ಆ ಗುಂಪಿನಲ್ಲಿದ್ದ ಎಲ್ಲಾ ಎಂಟು ಜನರನ್ನೂ, ಮಗುವನ್ನೂ ಒಳಗೊಂಡಂತೆ, ಆ ಕಟುಕರು ಕೊಲೆ ಮಾಡಿದರು. ಆಗ ಪ್ರಜ್ಞೆ ತಪ್ಪಿ ಬಿದ್ದಿದ್ದ ಬಿಲ್ಕಿಸ್ ಸತ್ತಿದ್ದಾಳೆಂದು ಬಗೆದು ಬಿಟ್ಟು ಹೋಗಿದ್ದರವರು. ಆದರೆ ಅವಳು ಬದುಕುಳಿದಳು.

ಬಿಲ್ಕಿಸ್ ಪ್ರಕರಣದ ಭೀಕರ ಕತೆ

ಅವಳು ಅನುಭವಿಸಿದ ಭಯಂಕರ ಕತೆಯನ್ನು ಇಲ್ಲಿ ನೆನೆಯಲು ಸಾಧ್ಯವಿಲ್ಲ. ಪ್ರತಿ ಹೆಜ್ಜೆಯಲ್ಲೂ, ನ್ಯಾಯಕ್ಕಾಗಿನ ಅವಳ ಹೋರಾಟವನ್ನು ನಾಶಪಡಿಸಲಾಯಿತು. ಎಫ್.ಐ.ಆರ್.ನ್ನು ತಿದ್ದಿದರು, ವೈದ್ಯಕೀಯ ವರದಿ ಮತ್ತು ದೇಹದ ಮರಣೋತ್ತರ ವರದಿಗಳಲ್ಲಿ ಬಹು ಮುಖ್ಯವಾದ ವಿವರಗಳನ್ನೇ ಕೈಬಿಟ್ಟರು, ಶವಗಳನ್ನು ಕುಟುಂಬದವರಿಗೆ ಕೊಡದೆ, ಪೋಲಿಸರು ತಾವೇ ಹೂತುಹಾಕಿದರು. ಬಿಲ್ಕಿಸ್‌ನ ಮಗಳ ಶವ ಮಾಯವಾಗಿಬಿಟ್ಟಿತ್ತು. ಈ ಎಲ್ಲಾ ಸುಳ್ಳುಗಳನ್ನು ಮತ್ತು ಅಸತ್ಯಗಳನ್ನು ಕೆಳ ಕೋರ್ಟು ಸ್ವೀಕರಿಸಿತು. ಪಾತಕ ನಡೆದಿದ್ದಾಗ್ಯೂ ಅಪರಾಧಿಗಳು 'ಸಿಗಲಿಲ್ಲ' ಎಂದು ಹೇಳುವ ಮೂಲಕ ಒಂದೇ ವರ್ಷದಲ್ಲಿ ಪ್ರಕರಣವನ್ನು ಮುಗಿಸುವ ಯತ್ನ ಮಾಡಲಾಯಿತು. ಪ್ರಕರಣ ಮುಚ್ಚಿ ಹಾಕಲಾಯಿತು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್.ಹೆಚ್.ಆರ್.ಸಿ) ದ ತಂಡ ಮತ್ತಿತರರು ವಿವರಗಳನ್ನು ಕಲೆಹಾಕಿದ್ದರು. ಈ ಪ್ರಕರಣವನ್ನು ಪುನರಾರಂಭಿಸಬೇಕೆಂದು ಕೇಳಿ ಸುಪ್ರೀಂ ಕೋರ್ಟಿನಲ್ಲಿ ಮೊಕದ್ದಮೆ ದಾಖಲಿಸಲಾಯಿತು. ಪ್ರಕರಣವನ್ನು ಸಿಬಿಐಗೆ ವಹಿಸಿಕೊಡಲಾಯಿತು. ಎರಡು ವರ್ಷಗಳ ನಂತರ, 2004ರಲ್ಲಿ, ಸಿಬಿಐ ತನ್ನದೇ ಆದ ತನಿಖೆ ಆರಂಭಿಸಿತು.





ನ್ಯಾಯಕ್ಕಾಗಿನ ಬಿಲ್ಕಿಸ್ ಹೋರಾಟವು ಸದಾ ಒಂದು ಚಿಕ್ಕ ಹೆಜ್ಜೆ ಮುಂದೆ ಮತ್ತು ಅನೇಕ ಹೆಜ್ಜೆ ಹಿಂದೆ ಸರಿಯಬೇಕಾಗುತ್ತಿತ್ತು. ಅವಳ ಪ್ರಕರಣದಲ್ಲಿ ಅವಳು ಪ್ರಮುಖ ಸಾಕ್ಷಿಯಾಗಿದ್ದಳು. ಅವಳಿದ್ದ ರಾಜ್ಯದಲ್ಲಿ ಅವಳು ಬೆದರಿಕೆಗಳನ್ನು, ಒತ್ತಡಗಳನ್ನು ಮತ್ತು ಅಪಾರ ಯಾತನೆಯನ್ನು ಅನುಭವಿಸಬೇಕಾಯಿತು. ಆ ರಾಜ್ಯದ ಮುಖ್ಯ ಮಂತ್ರಿ ಮತ್ತು ಸರ್ಕಾರ ತನ್ನ ಆಡಳಿತ ಯಂತ್ರವನ್ನು ಹಾಗೂ ಸರ್ಕಾರಿ ಸಂಪನ್ಮೂಲಗಳನ್ನು ಬಳಸಿ ಕೊಲೆ ಮತ್ತು ಹಿಂಸೆಯಲ್ಲಿ ಆರೋಪಿಗಳಾಗಿದ್ದ ನೂರಾರು ಜನರನ್ನು ಬೆಂಬಲಿಸಿತು ಹಾಗೂ ಸಮರ್ಥಿಸಿಕೊಂಡಿತು. ಗುಜರಾತಿನ ಸರ್ಕಾರ ಮತ್ತು ಆಡಳಿತವು ಮುಚ್ಚುಮರೆಯಿಲ್ಲದೆ ನೇರವಾಗಿ ಮತ್ತು ಉದ್ದಟತನದಿಂದ ನ್ಯಾಯಶಾಸ್ತ್ರವನ್ನೇ ಬುಡಮೇಲುಮಾಡಿ ಗುಜರಾತ್ ಗಲಭೆಯ ಸಂತ್ರಸ್ಥರ ವಿರುದ್ಧ ಇರುವುದರಿಂದ, ಸುಪ್ರೀಂ ಕೋರ್ಟು ಬಿಲ್ಕಿಸ್ ಅವರ ಮನವಿಯನ್ನು ಸ್ವೀಕರಿಸಿತು ಮತ್ತು ಆ ಮೊಕದ್ದಮೆಯನ್ನು ಗುಜರಾತಿನಿಂದ ಮುಂಬಯಿಗೆ ವರ್ಗಾಯಿಸಿತು. ಸೆಷನ್ಸ್ ಕೋರ್ಟು 12 ಜನರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿ ಇತರರನ್ನು ಖುಲಾಸೆಗೊಳಿಸಿತ್ತು. ಸಾಕ್ಷಿಯನ್ನು ನಾಶಪಡಿಸಿದ್ದಾರೆಂದು ಸಿಬಿಐ ಆರೋಪಿಸಿದ್ದ ಪೋಲಿಸ್ ಅಧಿಕಾರಿಗಳನ್ನು ಮತ್ತು ವೈದ್ಯರನ್ನು ಖುಲಾಸೆಗೊಳಿಸಲಾಗಿತ್ತು. ಪಿತೂರಿಯ ಆಪಾದನೆಯನ್ನೂ ವಜಾಗೊಳಿಸಲಾಗಿತ್ತು. ಇದರ ವಿರುದ್ಧ ಸಿಬಿಐ ಹೈಕೋರ್ಟಿಗೆ ಅರ್ಜಿ ಸಲ್ಲಿಸಿತ್ತು.

ಇಲ್ಲಿ ಕೂಡ ಇತ್ತೀಚಿನ ತೀರ್ಪು ಅರ್ಧಂಬರ್ಧ ನ್ಯಾಯ ಮಾತ್ರ ದಯಪಾಲಿಸಿದೆ. ಆಪಾದಿತ ಪೋಲಿಸರು ಮತ್ತು ವೈದ್ಯರನ್ನು ತಪ್ಪಿತಸ್ಥರು ಎಂದು ಪರಿಗಣಿಸಿ ಮೂರು ವರ್ಷಗಳ ಜೈಲುವಾಸವನ್ನು ವಿಧಿಸಲಾಗಿದೆ. ಭಾರತೀಯ ದಂಡ ಸಂಹಿತೆ(ಐಪಿಸಿ) ಯ ಪರಿಚ್ಛೇದ 217 ಮತ್ತು 218 ಅಡಿಯಲ್ಲಿ ಇವತ್ತಿನ ಕಾನೂನಿನ ಅಡಿಯಲ್ಲಿ ಗರಿಷ್ಠ ದಂಡ ಇದಾಗಿದೆ.

ಪುಟ 15 ಕ್ಕೆ


‘ಮನರೇಗ’ದಲ್ಲಿ ಕೆಲಸವೂ ಇಲ್ಲ, ಕೂಲಿಗೂ ಕಾಯಬೇಕು: ಶ್ರಮೇವ ಜಯತೇ!



ಮನರೇಗ ಅಂದರೆ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಒಂದು ಉದ್ಯೋಗದ ಗ್ಯಾರಂಟಿ ಕೊಡುವ ಕಾಯ್ದೆ. ಇದರ ಪ್ರಕಾರ ವರ್ಷದಲ್ಲಿ ಕನಿಷ್ಟ 100ದಿನಗಳ ಕೆಲಸ ಕೊಡಿಸಬೇಕಲ್ಲದೆ, ಅದಕ್ಕೆ ಕೂಲಿಯನ್ನು ಉದ್ಯೋಗದ ಹಾಜರಾತಿ ಪಟ್ಟಿಯಲ್ಲಿ ಹೆಸರು ನೋಂದಾಯಿಸಿದ 15 ದಿನಗಳೊಳಗೆ ಕೊಡಬೇಕು. ಇಲ್ಲವಾದರೆ ವಿಳಂಬದ ಪ್ರತಿಯೊಂದು ದಿನಕ್ಕೂ ಸರಕಾರ ‘ಪರಿಹಾರ’ ಎಂದು ದಂಡ ತೆರಬೇಕು.

ಆದರೆ ಸರಕಾರ ಈ ‘ಪರಿಹಾರ’ವನ್ನು ಅತೀಕಡಿಮೆ ಪ್ರಮಾಣದಲ್ಲಿ ಲೆಕ್ಕ ಹಾಕಲು ನಿಬಂಧನೆಗಳನ್ನು ರೂಪಿಸಿದೆ ಮಾತ್ರವಲ್ಲ, ಹಾಗೆ ಲೆಕ್ಕ ಹಾಕಿರುವ ‘ಪರಿಹಾರ’ವನ್ನೂ ಮತ್ತಷ್ಟು ವಿಳಂಬ ಮಾಡಿ ಕೊಡುತ್ತಿದೆ, ಅಥವ ಕೊಡುವುದೇ ಇಲ್ಲ ಎಂದು ಇಬ್ಬರು ವಿಶ್ಲೇಷಕರು ಹೇಳುತ್ತಾರೆ (ನಿತಿನ್ ಸೇಥಿ ಮತ್ತು ಸಾಹಿಲ್ ಮಕ್ಕರ್, ಬಿಸಿನೆಸ್ ಸ್ಟಾಂಡರ್ಡ್).

ಉದಾಹರಣೆಗೆ, ಎಪ್ರಿಲ್ 2017ರ ಕೂಲಿ ವಿಳಂಬದ ಮೊತ್ತ 52.80 ಕೋಟಿ ರೂ. ಇದಕ್ಕೆ ಸರಕಾರವೇ ಲೆಕ್ಕ ಹಾಕಿರುವ ‘ಪರಿಹಾರ’ 6.31 ಲಕ್ಷ ರೂ. ಇದನ್ನು ಮೇ 1 ರ ವೇಳೆಗೆ ತೆರಬೇಕು. ಆದರೆ ಕೇಂದ್ರ ಸರಕಾರ ರಾಜ್ಯ ಮಟ್ಟದ ಅಧಿಕಾರಿಗಳಿಗೆ ಆ ದಿನದ ವರೆಗೆ ಪಾವತಿಗೆ ಮಂಜೂರು ಮಾಡಿದ ಮೊತ್ತ ಕೇವಲ ರೂ. 1734 !



ಆದರೆ ಶ್ರಮೇವ ಜಯತೇ ಎಂಬ ಮಂತ್ರ ಪ್ರಧಾನ ಮಂತ್ರಿಗಳ ಟ್ವಿಟರ್‌ನಲ್ಲಿ ಈ ಮೇದಿನದಂದೂ ರಾರಾಜಿಸಿದೆ.

ಸರಕಾರದ ದಾಖಲೆಗಳ ಪ್ರಕಾರ 2016–17 ರ ವರ್ಷದಲ್ಲಿ ವಿಳಂಬಿತ ಕೂಲಿ ಮೊತ್ತ ರೂ. 19,604 ಕೋಟಿ ರೂ. ಇದು ಒಟ್ಟು ಕೂಲಿಯ ಸುಮಾರು 56%. ಅಂದರೆ ಅರ್ಧಕ್ಕಿಂತ ಹೆಚ್ಚು ಬಡ ಗ್ರಾಮೀಣ ಕೂಲಿಕಾರರು ಮಾಡಿದ ಕೆಲಸಕ್ಕೆ ಕೂಲಿ ಕೊಡಲೂ ಮೀನ–ಮೇಷ. ಇದರಲ್ಲಿ ಒಟ್ಟು 2578ಕೋಟಿ ರೂ. ಕೂಲಿ ಎರಡು ತಿಂಗಳಾದರೂ ಕೊಡಲಿಲ್ಲ, 3836 ಕೋಟಿರೂ.ಗಳಷ್ಟು ಕೂಲಿಯನ್ನು ಮೂರು ತಿಂಗಳಾದರೂ ಪಾವತಿ ಮಾಡಿರಲಿಲ್ಲ. ಕಾಯ್ದೆಯ ಈ ಉಲ್ಲಂಘನೆಗೆ, ಮೇಲೆ ಹೇಳಿದಂತೆ ಸರಕಾರ ತಾನೇ ರೂಪಿಸಿದ ಹಲವು ನಿಬಂಧನೆಗೊಳಪಟ್ಟು ಅತ್ಯಂತ ಜಿಪುಣತನದಿಂದ ಲೆಕ್ಕ ಹಾಕಿದ ‘ಪರಿಹಾರ’ದ ಮೊತ್ತ ರೂ.441 ಕೋಟಿ. ಇದರಲ್ಲಿಯೂ ಮಂಜೂರಾತಿ ನೀಡಿದ್ದು ಕೇವಲ ರೂ.17.15 ಕೋಟಿ.ಗೆ ಮತ್ತು ತೆತ್ತದ್ದು ಕೇವಲ ರೂ. 10.70 ಕೋಟಿ ರೂ. ಮಾತ್ರ! ಇದು ಅಚ್ಛೇ ದಿನ್‌ಗಳ ಹಿಂದಿನ ಎರಡು ವರ್ಷಗಳ ಕತೆ ಕೂಡ. ಸ್ವತಃ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ಎಂಐಎಸ್ ಈ ಅಂಕಿ–ಅಂಶಗಳನ್ನು ನೋಡಿ–

* 2015–16ರಲ್ಲಿ ವಿಳಂಬಿತ ಕೂಲಿಯ ಮೊತ್ತ ರೂ.23,806 ಕೋಟಿ ಇದಕ್ಕೆ ಲೆಕ್ಕ ಹಾಕಿದ ಪರಿಹಾರದ ಮೊತ್ತ ರೂ. 532 ಕೋಟಿರೂ. ಆದರೆ ಮಂಜೂರು ಮಾಡಿದ ಮೊತ್ತ ಕೇವಲ ರೂ. 35.6ಕೋಟಿ ಇದರಲ್ಲಿ ನಿಜವಾಗಿ ತೆತ್ತಿರುವುದು ಕೇವಲ ರೂ.20.6 ಕೋಟಿ
* 2014–15ರಲ್ಲಿ ವಿಳಂಬಿತ ಕೂಲಿಯ ಮೊತ್ತ ರೂ.17,137 ಕೋಟಿ ಇದಕ್ಕೆ ಲೆಕ್ಕ ಹಾಕಿದ ಪರಿಹಾರದ ಮೊತ್ತ ರೂ. 506 ಕೋಟಿ. ಆದರೆ ಮಂಜೂರು ಮಾಡಿದ ಮೊತ್ತ ಕೇವಲ ರೂ.11.3 ಕೋಟಿ ಇದರಲ್ಲಿ ನಿಜವಾಗಿ ತೆತ್ತಿರುವುದು ಕೇವಲ ರೂ.7.4 ಕೋಟಿ

ಕೇವಲ ಕೂಲಿಯಷ್ಟೇ ಅಲ್ಲ, ನೀಡಿರುವ ಉದ್ಯೋಗಗಳ ಅಂಕಿ–ಅಂಶಗಳೂ ಅತ್ಯಂತ ಕಳವಳಕಾರಿ.

ಈ ‘ಅಚ್ಛೇ ದಿನ್’ಗಳ ಮೊದಲ ವರ್ಷದಲ್ಲಿ 4.65 ಕೋಟಿ ಉದ್ಯೋಗಗಳಿಗೆ ಬೇಡಿಕೆ ಬಂದಿತ್ತು. ಅದು 2015–16ರಲ್ಲಿ 15% ಹೆಚ್ಚಿ 5.35 ಕೋಟಿ ಆಗಿದೆ. 2016–17ರಲ್ಲಿ ಇನ್ನೂ 6% ಹೆಚ್ಚಿ 5.69 ಕೋಟಿ. ಈ ಹಣಕಾಸು ವರ್ಷದ ಮೊದಲ 35 ದಿನಗಳಲ್ಲಿಯೇ 1.38 ಕೋಟಿ ಕುಟುಂಬಗಳು ಕೆಲಸ ಕೇಳಿ ಅರ್ಜಿ ಹಾಕಿವೆ. **ಇಷ್ಟು ಕಡಿಮೆ ಕೂಲಿಯ ಕೆಲಸಕ್ಕೂ ಬೇಡಿಕೆ ವರ್ಷೇ–ವರ್ಷೇ ಹೆಚ್ಚುತ್ತಿರುವುದು, ವರ್ಷಕ್ಕೆ 2 ಕೋಟಿ ಉದ್ಯೋಗಗಳ ನಿರ್ಮಾಣದ ಭರವಸೆಯ ‘ಅಚ್ಛೇ ದಿನ್”ಗಳಲ್ಲಿ ವಾಸ್ತವವಾಗಿ ನಿರುದ್ಯೋಗವೇ ಹೆಚ್ಚುತ್ತಿರುವುದನ್ನು ತೋರಿಸುತ್ತದೆ.**

ಈ ರೀತಿ ವರ್ಷಕ್ಕೆ ನೂರು ದಿನಗಳ ಕೆಲಸವಾದರೂ ಸಿಗಲಿ ಎಂದು ಅರ್ಜಿ ಹಾಕಿದವರಲ್ಲಿ 10––11ಶೇ.ಮಂದಿಗೆ ಕೆಲಸ ಸಿಕ್ಕಿಲ್ಲ. ಕಳೆದ ವರ್ಷ ಕೆಲಸ ಕೇಳಿದ್ದ 58 ಲಕ್ಷ ಕುಟುಂಬಗಳಿಗೆ ಕೆಲಸ ಸಿಕ್ಕಿಲ್ಲ.

ಐಸಿಎಸ್‌ಎಸ್‌ಆರ್ ಅಧ್ಯಕ್ಷರಾಗಬೇಕಾದರೆ............

1. ಜಾತಿಪದ್ಧತಿ ಮತ್ತು ಅಸ್ಪೃಶ್ಯತೆ ಅರಬ, ತುರ್ಕ ಮತ್ತು ಮೊಗಲ ಅತಿಕ್ರಮಣಕೋರರಿಂದ ಬಂದದ್ದು , 2.ನರೇಂದ್ರ ಮೋದಿಯವರು ಅಸಹಿಷ್ಣುತೆಗೆ ಅತಿ ಹೆಚ್ಚು ತುತ್ತಾದವರು ಮತ್ತು 3. ಭಾರತದ ಬೌದ್ಧಿಕ ಅವನತಿಗೆ ಮೆಕಾಲೆ ಮತ್ತು ಮಾರ್ಕ್ಸ್ ಕಾರಣ ಎಂದು ನಂಬುವ ಸಾಮಾಜಿಕ ವಿಜ್ಞಾನಿಯೊಬ್ಬರಿದ್ದರೆ, ಈ ಅಚ್ಛೇ ದಿನ್‌ಗಳಲ್ಲಿ ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಸಂಸ್ಥೆ(ಐಸಿಎಸ್‌ಎಸ್‌ಆರ್)ಗೆ ಅಧ್ಯಕ್ಷರಾಗಲಿಕ್ಕೆ ಅವರಿಗಿಂತ ಉತ್ತಮ ಅಭ್ಯರ್ಥಿಗಳು ಯಾರಿರಲು ಸಾಧ್ಯ? ಇದು ‘ಸಬ್‌ರಂಗ್‌ಇಂಡಿಯಾ’ದ ಸಿಬ್ಬಂದಿಯ ಉದ್ಗಾರ.

ಮಾನವಶಾಸ್ತ್ರಜ್ಞ ಪ್ರೊ.ಬಿ.ಬಿ. ಕುಮಾರ್ ಈ ಅರ್ಹತೆಗಳೊಂದಿಗೆ ಆ ಸ್ಥಾನಕ್ಕೆ ನೇಮಿಸಲ್ಪಟ್ಟಿದ್ದಾರೆ. ಅವರೊಡನೆ ಸ್ಪರ್ಧೆಯಲ್ಲಿದ್ದ ಇನ್ನೆರಡು ಹೆಸರುಗಳು ಬಿಜೆಪಿ ಎಂಎಲ್‌ಸಿಗಳಾಗಿದ್ದ ಪ್ರೊ. ಅಶೋಕ ಮೋದಕ್ ಮತ್ತು ಆರೆಸ್ಸೆಸ್ ಪ್ರಾಯೋಜಿತ ಅಖಿಲ ಭಾರತೀಯ ಇತಿಹಾಸ ಸಂಕಲನ ಯೋಜನಾದ ಅಧ್ಯಕ್ಷ ಸತೀಶ ಮಿತ್ತಲ್!

ಮತ್ತೊಂದು ಅಮಾನುಷ ಹತ್ಯೆ– ಈಗ ಬುಲಂದ್‌ಶಹರ್‌ನಲ್ಲಿ

ಇದು ಗೋಹತ್ಯೆಯ ಹೆಸರಿನಲ್ಲಲ್ಲ, ಲವ್‌ಜಿಹಾದ್ ಹೆಸರಿನಲ್ಲಿ. ಉತ್ತರಪ್ರದೇಶದ ಬುಲಂದ್ ಶಹರಿನ ಸೋಹಿ ಎಂಬ ಹಳ್ಳಿಯಲ್ಲಿ ಮೇ 2ರಂದು ಕಾವಿ ಬಟ್ಟೆಯನ್ನು ತಲೆಗೆ ಸುತ್ತಿಕೊಂಡಿದ್ದ ಐದಾರು ಮಂದಿ ಬಂದು ಗುಲಾಮ್ ಅಹ್ಮದ್ ಎಂಬ ರೈತನನ್ನು ಬಡಿದು ಸಾಯಿಸಿದರು ಎಂದು ವರದಿಯಾಗಿದೆ. ಸಾಯಿಸಿದವರು ತಾವು ಹಿಂದೂ ಯುವ ವಾಹಿನಿಯವರು ಎಂದು ಹೇಳಿಕೊಳ್ಳುತ್ತಿದ್ದರಂತೆ. ಗುಲಾಮ್ ಅಹ್ಮದ್‌ನ ನೆರೆಮನೆಯ ಹುಡುಗನೊಬ್ಬ ಹಿಂದೂ ಹುಡುಗಿಯೊಂದಿಗೆ ಓಡಿ ಹೋಗಿದ್ದ, ಹುಡುಗನ ಮನೆಯವರಿಗೂ ಇದು ಆಘಾತದ ಸಂಗತಿಯಾಗಿತ್ತು, ಆದ್ದರಿಂದ ಹುಡುಗಿಯ ಮನೆಯವರ ಜೊತೆಗೆ ಅವರೂ ಹುಡುಕುತ್ತಿದ್ದರು. ಆದರೂ ಅವರಿಗೆ ಓಡಿ ಹೋಗಲು ನೆರವಾಗಿದ್ದಾನೆ ಎಂದು ಗುಲಾಮ್ ಅಹ್ಮದ್‌ನನ್ನು ಕೊಚ್ಚಿ ಕೊಂದರು ಎನ್ನಲಾಗಿದೆ. ವಾಸ್ತವವಾಗಿ ಕೋಮುಗಲಭೆ ಸೃಷ್ಟಿಸುವುದೇ ಅವರ ಉದ್ದೇಶವಾಗಿತ್ತು ಎಂದು ಹಳ್ಳಿಯವರು ಹೇಳುತ್ತಿದ್ದಾರಂತೆ. ಮುಖ್ಯಮಂತ್ರಿಗಳು ಈ ದೇಶದ ಹಿತೈಷಿಯಾಗಿದ್ದರೆ ಈ ರೀತಿ ಅಮಾಯಕರನ್ನು ಸಾಯಿಸುವ ಈ ಹಿಂದೂ ಯುವ ವಾಹಿನಿಯನ್ನು (ಅವರೇ ಸ್ಥಾಪಿಸಿದ್ದು) ಕೂಡಲೇ ನಿಷೇಧಿಸಬೇಕು ಎಂದು ಗುಲಾಮ್ ಅಹ್ಮದ್ ಮಗ ವಕೀಲ್ ಅಹ್ಮದ್ ಆಗ್ರಹಿಸಿದ್ದಾನೆ.

ಸಹರಾಣಪುರದಲ್ಲಿ ಮತ್ತೆ ಗಲಭೆ, 1 ಜೀವ, 25 ದಲಿತರ ಮನೆಗಳು ಬಲಿ

ಎಪ್ರಿಲ್ 20ರಂದು ಅಂಬೇಡ್ಕರ್ ಜಯಂತಿಯ ಮೆರವಣಿಗೆಯ ಹೆಸರಲ್ಲಿ ಬಿಜೆಪಿ ಎಂಪಿಯ ನೇತೃತ್ವದಲ್ಲಿ ಗಲಭೆ ನಡೆದಿತ್ತು. ಆ ದಿನ ಪೋಲಿಸ್ ಸಿಬ್ಬಂದಿ ಮತ್ತು ಪೋಲಿಸ್ ಅಧಿಕಾರಿಯ ಮೇಲೆಯೇ ಹಲ್ಲೆ ನಡೆದಿತ್ತು– ಮೆರವಣಿಗೆಗೆ ಮುಸ್ಲಿಮರು ಅಡ್ಡಿಪಡಿಸಿದರು ಎಂದು ಹೇಳಲಾಗಿತ್ತು.

ಮೇ 6 ರಂದು ಮಹಾರಾಣ ಪ್ರತಾಪ ಜಯಂತಿಯ ಮೆರವಣಿಗೆಗೆ ದಲಿತರು ಅಡ್ಡಿಪಡಿಸಿದರು ಎಂದು ಠಾಕುರ್‌ಗಳು ಮತ್ತು ದಲಿತರ ನಡುವೆ ಗಲಭೆ ನಡೆಯಿತು, ಇದರಲ್ಲಿ ಒಬ್ಬ ಠಾಕುರ್ ಹುಡುಗನ ಪ್ರಾಣ ಮತ್ತು 25 ದಲಿತರ ಮನೆಗಳು ಬಲಿಯಾಗಿವೆ ಎಂದು ವರದಿಯಾಗಿದೆ.

25 ಮಂದಿ ಭದ್ರತಾ ಸಿಬ್ಬಂದಿಯನ್ನು ಬಲಿ ತೆಗೆದುಕೊಂಡ ಛತ್ತಿಸ್‌ಗಢ್‌ನ ಸುಕ್ಮದ ಮಾವೋವಾದಿಗಳ ಹೊಂಚುದಾಳಿಯ ಬಗ್ಗೆ ಮಾನವ ಹಕ್ಕುಗಳ ಹೋರಾಟಗಾರರು ಮೌನ ತಾಳಿರುವರೇಕೆ ಎಂದು ಕೇಂದ್ರ ಪ್ರಸಾರ ಮಂತ್ರಿಗಳ ಅಬ್ಬರದ ಪ್ರಶ್ನೆಗೆ ನ್ಯಾಯಮೂರ್ತಿ ರಾಜಿಂದರ್ ಸಾಚರ್ ಬಲವಾದ ಸವಾಲು ಹಾಕಿದ್ದಾರೆ. ಅವರಿಗೆ ಒಂದು ಪತ್ರ ಬರೆದು ಅದರೊಂದಿಗೆ ಈ ದಾಳಿ ನಡೆದ ಸುದ್ದಿ ಬಂದ ಕೂಡಲೇ ಪಿಯುಸಿಎಲ್‌ನ ಛತ್ತೀಸ್‌ಗಢ ಘಟಕ ನೀಡಿದ್ದ ಖಂಡನಾ ಹೇಳಿಕೆಯನ್ನು ಲಗತ್ತಿಸುತ್ತ “ಇದನ್ನು ನಿಮ್ಮ ಕಚೇರಿ ನಿಮಗೆ ಈ ಮೊದಲೇ ಕೊಟ್ಟಿರಬಹುದು ಎಂದು ಆಶಿಸುತ್ತೇನೆ.. .. ಇದಕ್ಕೆ ಸಾರ್ವಜನಿಕ ಕ್ಷಮೆ ಕೋರುವುದು ಸಭ್ಯತೆ ಮತ್ತು ಸಾಮಾನ್ಯ ಸಾರ್ವಜನಿಕ ಸನ್ನಡತೆಯ ಲಕ್ಷಣ” ಎಂದಿದ್ದಾರೆ. –ಸುದ್ದಿ



ವ್ಯಂಗ್ಯಚಿತ್ರ: ಆರ್.ಪ್ರಸಾದ್, ಔಟ್ ಲುಕ್

‘ಮಾದರಿ’ ರಾಜ್ಯದ ಉಪ ಸಿಎಂ ಮಗನ ರಾದ್ಧಾಂತ

ಅಚ್ಛೇ ದಿನಗಳ ಮಾದರಿಯೆನಿಸಿದ, ಅದಕ್ಕಿಂತಲೂ ಹೆಚ್ಚಾಗಿ ಪಾನನಿಷೇಧ ಇರುವ ಗುಜರಾತಿನ ರಾಜಧಾನಿ ಅಹಮದಾಬಾದ್‌ನ ವಿಮಾನ ನಿಲ್ದಾಣದಲ್ಲಿ ಮೇ 8ರ ಮುಂಜಾವಿನ ಕತಾರ್ ಏರ್‌ವೇಸ್‌ನ ಗ್ರೀಸಿಗೆ ಹೊರಟಿದ್ದ ವಿಮಾನದಲ್ಲಿ ರಾಜ್ಯದ ಉಪಮುಖ್ಯಮಂತ್ರಿಗಳ ಮಗ ಕಂಠಮಟ್ಟ ಕುಡಿದು ಗಲಾಟೆ ನಡೆಸಿದ್ದರಿಂದ ಅವರಿಗೆ ಮತ್ತು ಅವರ ಹೆಂಡತಿ ಮತ್ತು ಮಗಳಿಗೆ ಪ್ರಯಾಣ ಮಾಡಲು ಬಿಡಲಿಲ್ಲ ಎಂದು ಎಲ್ಲ ಪತ್ರಿಕೆಗಳಲ್ಲಿ ವರದಿಯಾಗಿದೆ.

ಜಮೀನು ಮಾರಾಟದ ವ್ಯವಹಾರ ನಡೆಸುತ್ತಿರುವ ಈ ಸುಪುತ್ರ ವಿಮಾನ ನಿಲ್ದಾಣ ತಲುಪಿದಾಗ ನಡೆಯಲೂ ಆಗದಷ್ಟು ಪಾನಮತ್ತರಾಗಿದ್ದರಂತೆ. ವಿಮಾನ ನಿಲ್ದಾಣದ ಸಿಬ್ಬಂದಿಯೇನೋ ವೀಲ್‌ಚೇರಲ್ಲೇ ಕೂರಿಸಿ ಅಗತ್ಯ ಪ್ರಯಾಣಿಕ ತಪಾಸಣೆಗಳನ್ನು ನಡೆಸಿದರು. ಆದರೆ ವಿಮಾನ ಕಂಪನಿಯವರು ಮಾತ್ರ ಅವರನ್ನು ಹತ್ತಿಸಿಕೊಳ್ಳು ನಿರಾಕರಿಸಿದರು.

ಆದರೆ ಉಪಮುಖ್ಯಂತ್ರಿಗಳು ಇದೆಲ್ಲ ವಿರೋಧಿಗಳು ತಮ್ಮ ಪ್ರತಿಷ್ಠೆಗೆ ಕಳಂಕ ತರಲು ಹರಡುತ್ತಿರುವ ಸುಳ್ಳು ಸುದ್ದಿ, ತಮ್ಮ ಮಗ ಆರೋಗ್ಯ ಕೆಟ್ಟಿದ್ದರಿಂದ ಆತನ ಕುಟುಂಬ ರಜಾಪ್ರವಾಸವನ್ನು ರದ್ದು ಮಾಡಿ ವಾಪಾಸಾಗಿದ್ದಾರೆಂದು ಹೇಳಿದ್ದಾರೆ.

ಬಿಜೆಪಿ ಮುಖಂಡರ ಮೇಲೆ ಆರೆಸ್ಸೆಸ್ ಮಂದಿಯಿಂದಲೇ ಹಲ್ಲೆ!


ಹೌದು, ವಿಶೇಷವೆಂದರೆ ಈ ಸುದ್ದಿ ಬಿಜೆಪಿ ಮತ್ತು ಆರೆಸ್ಸೆಸ್ ಮುಖಂಡರು ಸದಾ ಸಿಪಿಐ(ಎಂ) ‘ಹಿಂಸಾಚಾರದ’ ಮಂತ್ರ ಜಪಿಸುವ ಕೇರಳದ ಸುದ್ದಿ. ಅಲ್ಲಿಯ ರಾಜ್ಯ ಮಂಡಳಿಯ ಸದಸ್ಯರೊಬ್ಬರ ಮೇಲೆ ಮೇ 8 ರಂದು ಹಲ್ಲೆ ನಡೆದು ಅವರು ಗಂಭೀರ ಗಾಯಗಳೊಂದಿಗೆ ಆಸ್ಪತ್ರೆ ಸೇರಿದರು. ತಮ್ಮ ಮೇಲೆ ನಾಲ್ಕು ಆರೆಸ್ಸೆಸ್ ಮಂದಿ ಹಲ್ಲೆ ಮಾಡಿದರು ಎಂದು ಅವರೇ ಸ್ವತಃ ಪೋಲೀಸರಿಗೆ ದೂರು ಕೊಟ್ಟಿದ್ದಾರೆ. ನಸುಕಿನಲ್ಲ ತಮ್ಮ ಮನೆಗೆ ನುಗ್ಗಿ ಅವರು ಹಲ್ಲೆ ಮಾಡಿದರಂತೆ.

ಇದು ವಿರೋಧಿಗಳ ಸುಳ್ಳು ಸುದ್ದಿಯೆಂದು ಹೇಳಿಕೆಗಳು ಇದುವರೆಗೆ ಬಂದಿಲ್ಲ

ನೋಟು ರದ್ಧತಿ ಮಾಡಿ ಮೇ 8ಕ್ಕೆ ಆರು ತಿಂಗಳುಗಳು ಕಳೆದವು. ಆದರೆ ಈಗಲೂ ಆರ್‌ಬಿಐ ಆಗಲೀ, ಸರಕಾರವಾಗಲೀ ಇನ್ನೂ ಬ್ಯಾಂಕುಗಳಲ್ಲಿ ಜಮಾ ಆದ ಹಳೆಯ ನೋಟುಗಳ ಮೊತ್ತ ಎಷ್ಟೆಂದು ದೇಶಕ್ಕೆ ತಿಳಿಸಿಲ್ಲ. –ಸುದ್ದಿ

ನೋಟುರದ್ಧತಿ ಆರ್ಥಿಕರಂಗದಲ್ಲಿ ಏನಾದರೂ ಸಾಧಿಸಬೇಕೆಂದು ಹೊರಟಿದ್ದರೆ.. ....ಅದನ್ನು ಸಾಧಿಸಿಲ್ಲ ಎಂಬ ತೀರ್ಮಾನಕ್ಕೆ ಈಗ ಆರು ತಿಂಗಳ ನಂತರ ಖಂಡಿತವಾಗಿಯೂ ಬರಬಹುದು,
–ವಿವೇಕ್ ಕೌಲ್, ಹಿರಿಯ ಆರ್ಥಿಕ ಪತ್ರಕರ್ತ,
ಫಸ್ಟ್‌ಪೋಸ್ಟ್.ಕಾಂ.

ಆರು ತಿಂಗಳಲ್ಲಿ ಬಹಳಷ್ಟು ಮಾಹಿತಿಗಳು ಲಭ್ಯವಾಗಿವೆ. ಪರಾಮರ್ಶೆಗೆ ಒಳ್ಳೆಯ ಸಮಯ. ತೀರ್ಪು ಸ್ಪಷ್ಟ. ಅದೊಂದು ಧೋರಣೆಯ ಪ್ರಮಾದ. ಅದು ಸಾಧಿಸಿದ್ದು ಏನೂ ಇಲ್ಲ, ಆದರೆ ಬಡವರು ಮತ್ತು ಅನೌಪಚಾರಿಕ ವಲಯ ಭಾರೀ ಬೆಲೆ ತೆರಬೇಕಾಗಿ ಬಂದಿದೆ.
– ಕೌಶಿಕ್ ಬಸು,
ವಿಶ್ವ ಬ್ಯಾಂಕ್‌ನ ಮುಖ್ಯ ಆರ್ಥಿಕತಜ್ಞರಾಗಿದ್ದವರು.



ವ್ಯಂಗ್ಯಚಿತ್ರ: ಆಲೋಕ್ ನಿರಂತರ್



ಕಾರ್ಪೋರೇಟ್ ಸಾಲಗಳ ಮನ್ನಾಕ್ಕೆ ಬ್ಯಾಂಕುಗಳ ಮರುಖಾಸಗೀಕರಣದತ್ತವೇ ಅಂತಿಮ ಒತ್ತು?

ದೇಶದ ಬ್ಯಾಕಿಂಗ್ ಕ್ಷೇತ್ರದಲ್ಲಿ ಕೆಟ್ಟ ಸಾಲಗಳ ಪ್ರಮಾಣ ಅತಂಕಕಾರಿಯಾಗಿ ಹೆಚ್ಚುತ್ತಿರಲು ಈ ಸರಕಾರದ ಮತ್ತು ಹಿಂದಿನ ಸರಕಾರಗಳ ಧೋರಣೆಗಳೇ ಕಾರಣ. ಇವು ಖಾಸಗಿ ಬಳಕೆ ಮತ್ತು ಹೂಡಿಕೆಗಳಿಗೆ ವಾಣಿಜ್ಯ ಬ್ಯಾಂಕುಗಳು ಹೆಚ್ಚೆಚ್ಚು ಸಾಲಗಳನ್ನು ನೀಡುವ ಸುಸ್ಥಿರವಲ್ಲದ ವಿಸ್ತರಣೆಗೆ ಕಾರಣವಾದ ಧೋರಣೆಗಳು. ಹಣಕಾಸು ಬಂಡವಾಳದ ಆದೇಶಗಳಿಗೆ ಶರಣಾಗಿರುವ ಸರಕಾರ ಈ ಧೋರಣೆಗಳನ್ನು ಬದಲಿಸದೆ ಈ ಸಮಸ್ಯೆಯ ಪರಿಹಾರಕ್ಕೆ ಸಂಪನ್ಮೂಲಗಳನ್ನು ಕ್ರೋಡೀಕರಿಸುವ ಹೆಸರಿನಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಮರುಖಾಸಗೀಕರಣದತ್ತವೇ ದೇಶವನ್ನು ತಳ್ಳುತ್ತಿರುವಂತೆ ಕಾಣುತ್ತದೆ. ಆದರೆ ಇದು ದೇಶದ ಆರ್ಥಿಕವನ್ನು ತೀವ್ರ ದುಷ್ಪರಿಣಾಮ ಬೀರುವ ದಿಕ್ಕಿನತ್ತ ತಳ್ಳುತ್ತದೆ ಎನ್ನುತ್ತಾರೆ

ಪ್ರೊ. ಸಿ ಪಿ ಚಂದ್ರಶೇಖರ್.

ಅವರ Bank Privatisation: The Final Push? ಲೇಖನದ ಅಂಶಗಳನ್ನು ಇಲ್ಲಿ ನಮ್ಮ ಓದುಗರಿಗಾಗಿ ಸಂಗ್ರಹಿಸಿ ಕೊಡಲಾಗಿದೆ. **ಸಂಗ್ರಹಾನುವಾದ: ಮುರಳಿ**

ಭಾರತದ ಬ್ಯಾಂಕ್‌ಗಳಲ್ಲಿ ಅದರಲ್ಲೂ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿನ ಬೃಹತ್ ಪ್ರಮಾಣದ ವಸೂಲಾಗಲಾರದ ಸಾಲ (ಎನ್‌ಪಿಎ) ದೇಶದಲ್ಲಿ ಮುಂದುವರೆಯುತ್ತಿರುವ ಆರ್ಥಿಕ ಕತೆಯಲ್ಲಿ ಒಂದು ಅತಿದೊಡ್ಡ ಕಪ್ಪು ಚುಕ್ಕೆಯಾಗಿದೆ. ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿಯವರು ಇತ್ತೀಚೆಗೆ ನ್ಯೂಯಾರ್ಕ್‌ನಲ್ಲಿ ನಡೆದ ವಿದೇಶಿ ಸಂಬಂಧಗಳ ಪರಿಷತ್ತಿನಲ್ಲಿ ಮಾತನಾಡುತ್ತಾ, ಎನ್‌ಪಿಎ ಭಾರತ ಸರ್ಕಾರ ಎದುರಿಸುತ್ತಿರುವ ಅತಿದೊಡ್ಡ ಸವಾಲಾಗಿದೆ ಇದನ್ನು ನಿವಾರಿಸುವುದು ಮೊದಲ ಆದ್ಯತೆಯಾಗಿದೆ ಎಂದು ಹೇಳಿದ್ದರು. ಇದಕ್ಕೆ ಸಮಾನಾಂತರವಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಉನ್ನತ ಅಧಿಕಾರಿಗಳು ಎನ್‌ಪಿಎ ಸಮಸ್ಯೆಯನ್ನು ನಿವಾರಿಸಲು ಹಲವಾರು ಶಿಫಾರಸುಗಳನ್ನು ಮುಂದಿಡುತ್ತಿದ್ದಾರೆ.

ಈ ಶಿಫಾರಸುಗಳ ಪೈಕಿ ಬ್ಯಾಂಕ್‌ಗಳಲ್ಲಿ ಸರ್ಕಾರ ಹೊಂದಿರುವ ಪಾಲನ್ನು ಶೇ.50ಕ್ಕಿಂತ ಕೆಳಕ್ಕೆ ಇಳಿಸುವುದು ಅತಿ ಹೆಚ್ಚು ವಿವಾದಕ್ಕೆ ಗುರಿಯಾಗಿದೆ. ಇದರಿಂದ ಈ ಎನ್‌ಪಿಎ ಸಮಸ್ಯೆ ಬ್ಯಾಂಕ್‌ಗಳ ಮರು ಖಾಸಗೀಕರಣವನ್ನು ಕೊನೆಗೂ ಮಾಡಿಯೇ ಬಿಡುವ ಅವಕಾಶ ಕಲ್ಪಿಸಿರುವಂತೆ ಕಾಣುತ್ತದೆ. ಆದರೆ ಈ ಆಯ್ಕೆಯನ್ನು ಮಾಡಿಕೊಳ್ಳುವುದೆಂದರೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿನ ಸಮಸ್ಯೆಗಳನ್ನು ನಿವಾರಿಸುವ ಹೆಸರಿನಲ್ಲಿ ಅದರ ಒಳ್ಳೆಯ ಅಂಶಗಳನ್ನೂ ಕಳಕೊಂಡಂತಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಬ್ಯಾಂಕ್‌ಗಳಲ್ಲಿ ಎನ್‌ಪಿಎ ಪ್ರಮಾಣ ಗಣನೀಯವಾಗಿ ಏರಿಕೆ ಕಾಣುತ್ತಿದೆ, ಇದು ಬ್ಯಾಂಕ್‌ಗಳ ಆದಾಯದ ಮೇಲೆ ಭಾರಿ ದುಷ್ಪರಿಣಾಮ ಬೀರಿದೆ ಎಂಬುದೇನೋ ನಿಜ. 2015ರ ಮಾರ್ಚ್ ಅಂತ್ಯಕ್ಕೆ ಬ್ಯಾಂಕ್‌ಗಳು ನೀಡಿದ್ದ ಒಟ್ಟಾರೆ ಸಾಲದ ಪ್ರಮಾಣದಲ್ಲಿ ಶೇ.5.1ರಷ್ಟಿದ್ದ ಎನ್‌ಪಿಎ 2016ರ ಮಾರ್ಚ್ ಅಂತ್ಯಕ್ಕೆ ಶೇ.7.8 ಮತ್ತು 2016ರ ಸೆಪ್ಟೆಂಬರ್ ಅಂತ್ಯಕ್ಕೆ ಶೇ.9.1ಕ್ಕೆ ಏರಿಕೆ ಕಂಡಿತ್ತು. 2018ರ ಮಾರ್ಚ್ ಅಂತ್ಯಕ್ಕೆ ಈ ಪ್ರಮಾಣ ಶೇ.10 ಮೀರುವ ಅಂ–ದಾಜಿದೆ.

ಈಗಿನ ಕೇಂದ್ರ ಸರ್ಕಾರದ ಅವಧಿಯಲ್ಲಿ ಎನ್‌ಪಿಎ ಪ್ರಮಾಣ ಇಷ್ಟೊಂದು ಪ್ರಮಾಣದಲ್ಲಿ ಏರಿಕೆ ಕಾಣಲು ಎರಡು ಪ್ರಮುಖ ಅಂಶಗಳು ಕಾರಣವಾಗಿವೆ. ಮೊದಲನೆಯದು, ಆರ್‌ಬಿಐ ಈ ಎನ್‌ಪಿಎ ಖಾತೆಗಳ ಪುನರ್ರಚನೆಯನ್ನು ನಿಲ್ಲಿಸಿದ್ದು ಮತ್ತು ಇದರಿಂದಾಗಿ ಇಂತಹ ಆಸ್ತಿಗಳನ್ನು ಹಿಂದಿನಂತೆ ಸ್ಟಾಂಡರ್ಡ್ ಆಸ್ತಿಯೆಂದು ಪರಿಗಣಿಸಲಾಗದಿದ್ದುದು.

ಎರಡನೆಯ ಕಾರಣ, ಎನ್‌ಪಿಎ ಗಳ ಸಿಂಹಪಾಲನ್ನು ಹೊಂದಿರುವ ಸರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿನ ಈ ಕೆಟ್ಟ ಸಾಲಗಳನ್ನು ಮನ್ನಾ ಮಾಡಲು ಸರ್ಕಾರ ಅಗತ್ಯ ಪ್ರಮಾಣದ ಹಣವನ್ನು ಮೀಸಲಿಡದಿದ್ದದ್ದು. 2016ರ ಮಾರ್ಚ್ ಅಂತ್ಯಕ್ಕೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿನ ಒಟ್ಟಾರೆ ಎನ್‌ಪಿಎ ಪ್ರಮಾಣ 5.02 ಲಕ್ಷ ಕೋಟಿ ರೂ.ಗಳಷ್ಟಿತ್ತು. ಆದರೆ 2015–16 ಮತ್ತು 2016–17ನೆ ಸಾಲಿನ ಬಜೆಟ್‌ನಲ್ಲಿ ಇದಕ್ಕಾಗಿ ನೀಡಿದ ಹಣ 50 ಸಾವಿರ ಕೋಟಿ ಮಾತ್ರ ಅಂದರೆ ಶೇ.10ರಷ್ಟೂ ಇಲ್ಲ. ಬ್ಯಾಂಕ್‌ಗಳ ಮರು ಬಂಡವಾಳೀಕರಣಕ್ಕೆ ಸರ್ಕಾರದ ಈ ಮಟ್ಟಿನ ನಿರ್ಲಕ್ಷ್ಯ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಸುಸ್ತಿಸಾಲಗಳ ಪುನರ್ ರಚನೆಗೆ ಸರ್ಕಾರ ಯಾವುದೇ ಮುತುವರ್ಜಿ ತೋರುತ್ತಿಲ್ಲ ಮತ್ತು ತನ್ನಲ್ಲಿನ ಸಂಪನ್ಮೂಲಗಳನ್ನು ನೀಡಲು ಸಿದ್ಧವಿಲ್ಲ ಎಂಬುದನ್ನು ತೋರಿಸುತ್ತದೆ. ಅಂತಿಮವಾಗಿ ಬ್ಯಾಖಗಳು ತಮ್ಮದೇ ಪರಿಹಾರಗಳನ್ನು ಕಂಡುಕೊಳ್ಳಲಿ ಎಂದು ಬಿಟ್ಟಿದೆ.

ಇಲ್ಲಿ ಸರ್ಕಾರದ ಎರಡು ಪ್ರಮುಖ ನೀತಿಗಳನ್ನು ವಿಶೇಷವಾಗಿ ಪ್ರಸ್ತಾಪಿಸುವುದು ಅಗತ್ಯ. ಒಂದನೆಯದು ವಿದೇಶಿ ಹಣ ದೇಶದ ಮೇಲೆ ಇದ್ದ ಹತೋಟಿಗಳನ್ನು ಸಡಿಲಿಸಿ ಅದು ನಮ್ಮ ಆರ್ಥಿಕ ವಯವಸ್ಥೆಯೊಳಗೆ ಯಥೇಚ್ಚವಾಗಿ ಹರಿದುಬರಲು ಅವಕಾಶ ನೀಡಿದ್ದು. ಇದರಿಂದ ಬ್ಯಾಂಕ್‌ಗಳಲ್ಲಿ ಠೇವಣಿಗಳು ಹೆಚ್ಚಿ ಭಾರಿ ಪ್ರಮಾಣದಲ್ಲಿ ಸಾಲವನ್ನು ವಿತರಿಸಲು ಅವು ಮುಂದಾದವು. ಇದ–ರಿಂದ ಆರ್‌ಬಿಐ ಸ್ವತಃ ಹೇಳಿದಂತೆ ಸಾಲ ನೀಡುವಾಗ ಅಸಮರ್ಪಕವಾದ ಅಥವ ಅಪಾಯದ ಸಂಭವವಿರುವ ನಿರ್ಧಾರಗಳನ್ನು ಕೈಗೊಳ್ಳುವಂತಾಯಿತು.

ಮತ್ತೊಂದು ಪ್ರಮುಖ ನೀತಿ ಎಂದರೆ ಆರ್ಥಿಕ "ಬಿಗಿತ'ದಿಂದಾಗಿ ಮೂಲಸೌಕರ್ಯ ಕ್ಷೇತ್ರದಲ್ಲಿ ಸರ್ಕಾರದ ಹೂಡಿಕೆಗಳ ಕೊರತೆಯನ್ನು ತುಂಬಲು ಖಾಸಗಿ ಕಂಪನಿಗಳನ್ನು ಉತ್ತೇಜಿಸಿದ್ದು ಮತ್ತು ಆ ಕಂಪನಿಗಳಿಗೆ ವಿಶೇಷ ಸವಲತ್ತುಗಳನ್ನು ಹೊಂದಿರುವ ಸಾಲಗಳನ್ನು ನೀಡಿದ್ದು. ಇದೇ ಸಂದರ್ಭದಲ್ಲಿ ಸರ್ಕಾರ ಹಣಕಾಸು ಕ್ಷೇತ್ರದ ಸುಧಾರಣೆ ಹೆಸರಿನಲ್ಲಿ ಅಭಿವೃದ್ಧಿ ಬ್ಯಾಂಕ್‌ಗಳನ್ನು ಮುಚ್ಚಿ ಕಡಿಮೆ ಬಡ್ಡಿದರದ ಸಾಲಗಳನ್ನು ಅಲಭ್ಯಗೊಳಿಸಿದ್ದು. ಅಭಿವೃದ್ಧಿ ಬ್ಯಾಂಕ್‌ಗಳು ' ಬಂಡವಾಳಕ್ಕಾಗಿ ಸರ್ಕಾರವನ್ನು ವಿಪರೀತವಾಗಿ ಅವಲಂಬಿಸಿರುವುದರಿಂದಾಗಿ ಖಾಸಗಿ ವಲಯಕ್ಕೆ ಸಮಾನ ಅವಕಾಶ ಸಿಗದಂತಾಗುತ್ತದೆ ಎಂಬ ತರ್ಕವನ್ನು ಒಡ್ಡಲಾಯಿತು. ಇದ–ರಿಂದ ಮೂಲಸೌಕರ್ಯ ಕ್ಷೇತ್ರದ ಬಹುತೇಕ ಕಂಪನಿಗಳಿಗೆ ಅಭಿವೃದ್ಧಿ ಬ್ಯಾಂಕ್‌ಗಳಿಂದ ಸುಲಭ ಬಂಡವಾಳ ಸಿಗದಂತಾಯಿತು. ಅವು ಸಾಲಕ್ಕಾಗಿ ವಾಣಿಜ್ಯ ಬ್ಯಾಂಕ್‌ಗಳತ್ತ ಮುಖ ಮಾಡಿದವು. ಈಗಾಗಲೆ ಠೇವಣಿಗಳಿಂದ ತುಂಬಿದ್ದ ವಾಣಿಜ್ಯ ಬ್ಯಾಂಕ್‌ಗಳು ಭಾರಿ ಪ್ರಮಾಣದಲ್ಲಿ ಸಾಲವನ್ನು ನೀಡಿದವು. ಇವುಗಳಲ್ಲಿ ಬಹುತೇಕ ಪ್ರಾಜೆಕ್ಟ್‌ಗಳು ಯೋಗ್ಯವಲ್ಲದ್ದಾಗಿದ್ದವು. ಆದರೆ ಬಹುಶಃ ಇವಕ್ಕೆಲ್ಲ ಸರಕಾರದ ಅಘೋಷಿತ ಬೆಂಬಲವಿರುವುದರಿಂದ ಏನೂ ಆಗಲಿಕ್ಕಿಲ್ಲ ಎಂಬ ತಪ್ಪು ಅಂದಾಜಿನಿಂದ ಸಾಲಗಳನ್ನು ನೀಡಲಾಯಿತು. ದುರದರಷ್ಟವಶಾತ್ ಇವುಗಳಲ್ಲಿ ಬಹಳಷ್ಟು ಕಾರ್ಯಸಾಧ್ಯವಲ್ಲದ ಪ್ರಾಜೆಕ್ಟುಗಳೆಂದು ಸಾಬೀತಾಗಿ ಮರುಪಾವತಿಯಲ್ಲಿ ಸುಸ್ತಿದಾರರಾದವು. ಇದರಿಂದ ಎನ್‌ಪಿಎ ಪ್ರಮಾಣ ಗಣನೀಯವಾಗಿ ಏರಿಕೆ ಕಂಡಿತು.


ಅಂದರೆ ಖಾಸಗಿ ಕಂಪನಿಗಳನ್ನು ಆಧರಿಸಿದ ಮೂಲಸೌಕರ್ಯ ಅಭಿವೃದ್ಧಿಯ ಧೋರಣೆ ಮತ್ತು ಅಭಿವೃದ್ಧಿ ಬ್ಯಾಂಕ್‌ಗಳನ್ನು ಮುಚ್ಚುವ ಸರ್ಕಾರದ ನಿರ್ಧಾರದಿಂದಾಗಿ ಸರ್ಕಾರಿ ಬ್ಯಾಂಕ್‌ಗಳು ಅಪಾಯಕಾರಿ ಮೂಲರಚನೆಯ ಪ್ರಾಜೆಕ್ಟುಗಳಲ್ಲಿ ಸಿಲುಕಿಕೊಂಡವು.

ಇದರ ಪರಿಣಾಮವೆಂದರೆ ಭಾರತದಲ್ಲಿ ಈಗ ಮರೆತು ಹೋಗಿರುವ ಉದಾರೀಕರಣದ ನಂತರದ ಬ್ಯಾಂಕಿಂಗ್ ಕ್ಷೇತ್ರದ ಒಂದು ಲಕ್ಷಣ. ಅದೆಂದರೆ 2003ರ ನಂತರ ಸಾಲನೀಡಿಕೆಯಲ್ಲಿ ಆಗಿರುವ ಭಾರೀ ಹೆಚ್ಚಳ. ಇದು ಬ್ಯಾಂಕಿಂಗ್ ಕ್ಷೇತ್ರವನ್ನು ಹೆಚ್ಚೆಚ್ಚು ರಿಸ್ಕ್ ಇರುವ ಕ್ಷೇತ್ರಗಳಿಗೆ, ಸಾಲಗಾರರಿಗೆ ಸಾಲ ನೀಡುವಂತೆ ಮಾಡಿತು.

ಈ ಹಿಂದೆ 1996–97ರಲ್ಲಿ ಒಟ್ಟು ಎನ್‌ಪಿಎ 15.7% ತಲುಪಿತ್ತು. ಆದರೆ ಆಗ ಕೈಗೊಂಡ ಒಂದು ಪುನರ್ರಚನಾ ಕ್ರಮದಿಂದಾಗಿ ಅದು ಇಳಿಯಲು ಪ್ರಾರಂಭಿಸಿ 2001–02ರಲ್ಲಿ 10.4%ಕ್ಕೆ, 2004–05ರಲ್ಲಿ 5.2%ಕ್ಕೆ ಮತ್ತು 2008–09ರಲ್ಲಿ 2.3%ಕ್ಕೆ ಇಳಿದಿತ್ತು.

ಆದರೆ ಮೇಲೆ ಹೇಳಿದ ಕಾರಣದಿಂದಾಗಿ ನಂತರ ಮತ್ತೆ ಏರಲಾರಂಭಿಸಿತು. ಈಗ ಮತ್ತೆ ಅದು 10% ದಾಟುತ್ತಿದೆ. ಆದ್ದರಿಂದ ಈ ವಿದ್ಯಮಾನವನ್ನು ಎದುರಿಸಲು ಸರಕಾರ ಈ ರೀತಿ ಕೆಟ್ಟ ಸಾಲಗಳ ಪ್ರಮಾಣ ಸ್ಫೋಟಕ ರೀತಿಯಲ್ಲಿ ಏರಲು ಕಾರಣವಾದ ಧೋರಣೆಗಳ ಬಗ್ಗೆ ಪುನರಾಲೋಚನೆ ಮಾಡಬೇಕಿತ್ತು.

ಇವು ಖಾಸಗಿ ಬಳಕೆ ಮತ್ತು ಹೂಡಿಕೆಗಳಿಗೆ ವಾಣಿಜ್ಯ ಬ್ಯಾಂಕುಗಳು ಹೆಚ್ಚೆಚ್ಚು ಸಾಲಗಳನ್ನು ನೀಡುವ ಸುಸ್ಥಿರವಲ್ಲದ ವಿಸ್ತರಣೆಗೆ ಕಾರಣವಾದ ಧೋರಣೆಗಳು. ಇವು ಆರ್ಥಿಕತೆಯಲ್ಲಿ ಭಾರೀ ಬೆಳವಣಿಗೆಯನ್ನೇನೋ ತಂದವು. ಆದರೆ ಇಂತಹ ಬೆಳವಣಿಗೆ ಎಷ್ಟು ಸರಿ ಎಂಬುದನ್ನು ದೊಡ್ಡ ಪ್ರಮಾಣದಲ್ಲಿ ಪಾವತಿ ಬಾಕಿಯ ಸಮಸ್ಯೆ ಪ್ರಶ್ನಿಸುವಂತೆ ಮಾಡಿದೆ. ಡಿಸೆಂಬರ್ 2016ರಲ್ಲಿ ಪ್ರಕಟಿಸಿದ ರಿಝರ್ವ್ ಬ್ಯಾಂಕಿನ 'ಹಣಕಾಸು ಸ್ಥಿರತೆಯ ವರದಿ' ಕೆಟ್ಟ ಸಾಲಗಳೊಂದಿಗೆ ಹದಗೆಡುತ್ತಿರುವ ಆರ್ಥಿಕ ಪರಿಸ್ತಿತಿಗಳು ಬ್ಯಾಂಕುಗಳ ಸಮಸ್ಯೆಗಳನ್ನು ಇನ್ನಷ್ಟು ಉಲ್ಬಣಗೊಳಿಸುವ ಅಪಾಯವಿದೆ ಎಂದಿರುವುದು ಇದನ್ನು ಬಿಂಬಿಸುತ್ತದೆ. ಬ್ಯಾಂಕುಗಳು ಈಗ ಹೂಡಿಕೆಗಳಿಗೆ ಸಾಲ ನೀಡಲು ಹಿಂದೇಟು ಹಾಕುತ್ತಿವೆ. ಇದರಿಂದಾಗಿ ಆರ್ಥಿಕ ಬೆಳವಣಿಗೆಗೆ ಇದ್ದ ಪ್ರಧಾನ ಉತ್ತೇಜನೆ ಮಂದಗೊಳ್ಳುವುದು ಸಹಜ.



ಸುಸ್ತಿದಾರರ ಬೆನ್ನು ಹತ್ತಲು ರಿಝರ್ವ್ ಬ್ಯಾಂಕಿಗೆ ಹೆಚ್ಚಿನ ಹಲ್ಲುಗಳು–ಸುದ್ದಿ
ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಸರಾಗವಾಗಿ ಸಾಲ ನೀಡಲು ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಎನ್‌ಪಿಎ ಸಮಸ್ಯೆಯನ್ನು ನಿವಾರಿಸುವುದು ಅತಿ ಮುಖ್ಯ. ಆದರೆ ಸಾಲ ಮರುಪಾವತಿಯನ್ನು ಪುನರ್ರಚಿಸುವ ಈ ಪ್ರಕ್ರಿಯೆ ಇಳಿಮುಖವಾಗಿರುವ ಆರ್ಥಿಕ ಬೆಳವಣಿಗೆಯನ್ನು ಒಂದು ಬಿಕ್ಕಟ್ಟಿನ ಮಟ್ಟಿಗೆ ಇಳಿಸುವ ಸಾಧ್ಯತೆಯೂ ಇದೆ. ಆದರೂ ವಿತ್ತೀಯ ಕೊರತೆ ಒಂದು ನಿರ್ದಿಷ್ಟ ಮಟ್ಟ ದಾಟಬಾರದೆಂಬ ಗೀಳನ್ನು ಹಚ್ಚಿಕೊಂಡು ಅದರಲ್ಲಿ ಸಿಲುಕಿರುವ ಸರಕಾರ ತೆರಿಗೆಗಳ ಮೂಲಕ ಹೆಚ್ಚುವರಿ ಆದಾಯ ಕ್ರೋಡೀಕರಿಸಲು ಇಷ್ಟಪಡುತ್ತಿಲ್ಲ. ಬ್ಯಾಂಕ್‌ಗಳೇ ಈ ಎನ್‌ಪಿಎ ಸಮಸ್ಯೆಯನ್ನು ನಿವಾರಿಸಿಕೊಳ್ಳುತ್ತವೆ ಎಂಬ ನಿರೀಕ್ಷೆ ಇಟ್ಟುಕೊಂಡಿದೆ.

ಸರ್ಕಾರದ ನೀತಿಗಳು ಬ್ಯಾಂಕ್‌ಗಳ ಪುನರ್ ರಚನೆ ಪ್ರಕ್ರಿಯೆಗಳನ್ನು ಬೆಂಬಲಿಸುವ ಗುರಿ ಹೊಂದಿವೆ. ಇವುಗಳಲ್ಲಿ ಒಂದು, 'ಸ್ವತ್ತು ಮರು ನಿರ್ಮಾಣ ನಿಗಮ'(ಅಸೆಟ್ ರಿಕನ್‌ಸ್ಟ್ರಕ್ಷನ್ ಕಾರ್ಪೊರೇಶನ್–ಎಆರ್‌ಸಿ)ಗಳ ಸ್ಥಾಪನೆಗೆ ಅನುಮತಿ ನೀಡಿರುವುದು. ಸಂಕಷ್ಟದಲ್ಲಿರುವ ಅಥವಾ ನಷ್ಟದ ಸ್ವತ್ತುಗಳನ್ನು ಈ ಎಆರ್‌ಸಿಗಳು ಭಾರೀ ಡಿಸ್ಕೌಂಟಿನಲ್ಲಿ ಖರೀದಿಸುತ್ತವೆ, ಮತ್ತು ಅವುಗಳನ್ನು ಪುನರ್ರಚಿಸಿ ಮಾರಾಟ ಮಾಡುವ ಮೂಲಕ ಈ ಸಮಸ್ಯೆಯನ್ನು ನಿವಾರಿಸಬೇಕು ಎಂಬುದು ಇದರ ಉದ್ದೇಶ.

ಆದರೆ 2016ರಲ್ಲಿ ದೇಶದಲ್ಲಿ 16 ಎಆರ್‌ಸಿಗಳು ಇದ್ದರೂಅವುಗಳಿಂದ ಕೆಟ್ಟ ಸಾಲಗಳ ಖರೀದಿ ತುಂಬಾ ನಿಧಾನವಾಗಿತ್ತು. ಏಕೆಂದರೆ ಎಆರ್‌ಸಿಗಳು ಭಾರಿ ಪ್ರಮಾಣದಲ್ಲಿ ರಿಯಾಯಿತಿಗಳನ್ನು ಕೇಳಿದ್ದರಿಂದ ಮತ್ತು ಈ ಎಆರ್‌ಸಿಗಳಿಗೇ ಅಷ್ಟೊಂದು ದೊಡ್ಡ ಪ್ರಮಾಣದ ಸಾಲ–ಆಸ್ತಿಗಳನ್ನು ನಿರ್ವಹಿಸುವ ಸಾಮರ್ಥ್ಯ ಇಲ್ಲದ್ದರಿಂದ. ಈ ಕಾರಣದಿಂದಾಗಿ ಸರ್ಕಾರವೇ ಒಂದು ತನ್ನ ಒಡೆತನದ ಎಆರ್‌ಸಿಯನ್ನು ಸ್ಥಾಪಿಸಬಾರದೇಕೆ ಎಂದು ಹಲವು ಸಂದರ್ಭಗಳಲ್ಲಿ ಯೋಚಿಸುವಂತಾಯಿತು. ಆದರೆ ಇದಕ್ಕೂ ಸಹ ಬಜೆಟ್‌ನಲ್ಲಿ ಹಣವನ್ನು ಮೀಸಲಿಡುವ ಅಗತ್ಯವಿದೆ. ಆದರೆ ಇದರಿಂದ ವಿತ್ತೀಯ ಕೊರತೆ ಹೆಚ್ಚಲಿದೆ ಎಂಬ ಕಾರಣದಿಂದ ಸರ್ಕಾರ ಇದನ್ನು ಒಪ್ಪಲು ತಯಾರಾಗುತ್ತಿಲ್ಲ.

ಈ ಎಲ್ಲ ಕಾರಣಗಳಿಂದಾಗಿ ಸರ್ಕಾರ ಬ್ಯಾಂಕ್‌ಗಳ ಖಾಸಗೀಕರಣವನ್ನೇ ಮಾಡಿ ಬಿಡೋಣ, ಆಮೂಲಕ ಕೆಟ್ಟ ಸಾಲಗಳ ಮನ್ನಾಕ್ಕೆ ಸಂಪನ್ಮೂಲಗಳನ್ನು ಒಟ್ಟು ಹಾಕಬಹುದು ಎಂದು ಆ ದಿಕ್ಕಿನಲ್ಲಿ ಕೊನೆಯ ಪ್ರಯತ್ನಕ್ಕೆ ಮುಂದಾಗಿರುವಂತೆ ಕಾಣುತ್ತಿದೆ. ಹೀಗಾದರೆ ಸುಸ್ತಿದಾರರು, ಅವರಲ್ಲಿ ಬಹಳಷ್ಟು ಮಂದಿ ಉದ್ದೇಶಪೂರ್ವಕವಾಗಿ ಮರುಪಾವತಿ ಮಾಡದವರು, ದೊಡ್ಡ ಸಾಲಗಳನ್ನು ಪಡೆದು ಅವನ್ನು ದುರುಪಯೋಗ ಮಾಡಿಕೊಂಡವರು ಸೇರಿದಂತೆ ಎಲ್ಲ ಸುಸ್ತಿದಾರರು ತಪ್ಪಿಸಿಕೊಳ್ಳಲು ಅವಕಾಶವಾಗುತ್ತದೆ.

ಇನ್ನೊಂದೆಡೆಯಲ್ಲಿ ಇದು ಬ್ಯಾಕಿಂಗ್ ಕ್ಷೇತ್ರದಲ್ಲಿ ಸಾರ್ವಜನಿಕ ವಲಯವನ್ನು ಕುಂಠಿತಗೊಳಿಸಿ ಖಾಸಗಿ ವಲಯವನ್ನು ವಸ್ತರಿಸುತ್ತದೆ, ಆರ್ಥಿಕ ವ್ಯವಸ್ಥೆಗೆ ಅಗತ್ಯವಾದ ಹೆಚ್ಚಿನ ಸಾಲಗಳು ಖಾಸಗಿ ವಲಯದಿಂದಲೇ ಬರುವಂತಾಗುತ್ತದೆ. ಈ ಖಾಸಗಿ ವಲಯದ ಬ್ಯಾಂಕ್‌ಗಳು ತಮಗೆ ಅತಿ ಹೆಚ್ಚು ಲಾಭ ತರುವ ಗಿರಾಕಿಗಳನ್ನೇ ಆರಿಸಿಕೊಳ್ಳುತ್ತವೆ, ಅತಿ ಹೆಚ್ಚು ಪ್ರತಿಫಲ ಸಿಗುವ ಸಟ್ಟಾಕೋರ ಹೂಡಿಕೆಗಳಿಗೇ ಹೆಚ್ಚಿನ ಸಾಲಗಳನ್ನು ಕೊಡುತ್ತವೆ. ಅತ್ತ ಕೈಗಾರಿಕೆಗಳು ಮತ್ತು ಮೂಲಸೌಕರ್ಯ ವಲಯ ಬ್ಯಾಂಕಿಂಗ್ ನೆರವಿನಿಂದ ವಂಚಿತವಾಗುತ್ತವೆ. ಇದು ಆರ್ಥಿಕ ಬೆಳವಣಿಗೆಯ ಮೇಲೆ ಮಾರಕ ಪರಿಣಾಮ ಬೀರುತ್ತದೆ. ಬಹಳಷ್ಟು ಕ್ಷೇತ್ರಗಳಿಗೆ ಹಣಕಾಸು ಲಭ್ಯವಾಗದೇ ಹೋಗುತ್ತದೆ. ಜಾಗತಿಕ ಅನುಭವವನ್ನು ನೋಡಿದರೆ ಕೆಟ್ಟ ಸಾಲಗಳ ಸಮಸ್ಯೆ ಮತ್ತೆ ವಕ್ಕರಿಸುತ್ತದೆ. ಆದರೆ ಹಣಕಾಸು ಬಂಡವಾಳ ಪ್ರಾಯೋಜಿಸಿರುವ ಹಣಕಾಸು ಸಂಪ್ರದಾಯಶರಣತೆಯ ಗೀಳು ಸರಕಾರದ ಧೋರಣೆಯನ್ನು ಈ ತೀವ್ರವಾದ ದುಷ್ಪರಿಣಾಮಕಾರಿ ದಿಕ್ಕಿನತ್ತ ತಳ್ಳುತ್ತಿದೆ.

ಬಿಜೆಪಿಯ ವಂಚನೆಯನ್ನು ಬಯಲು ಮಾಡಿದ ಅಸ್ಸಾಂ ಅಂಗನವಾಡಿ ನೌಕರರ ಸತತ ಧೀರ ಹೋರಾಟ

ಮೇ 26 ರಂದು ಬಿಜೆಪಿಯ ಚುನಾವಣಾ ಪ್ರಣಾಳಿಕೆಯನ್ನು ಸುಡುವ 'ದೋಖಾ ದಿವಸ್'



ಅಸ್ಸಾಂ ರಾಜ್ಯ ಅಂಗನವಾಡಿ ನೌಕರರು ಕಳೆದ ಮೂರು ತಿಂಗಳಿಂದ ಸತತ ಹೋರಾಟದ ಕಣದಲ್ಲಿದ್ದಾರೆ. ಮೇ 4ರಿಂದ ಅವರು ರಾಜಧಾನಿ ಗುವಾಹಾಟಿಯಲ್ಲಿ ಸತತವಾಗಿ ಮತಪ್ರದರ್ಶನ ನಡೆಸಿದ್ದಾರೆ. ರಾಜ್ಯದ ಬಿಜೆಪಿ ಸರಕಾರ ಅವರ ವಿರುದ್ಧ ಜಲಫಿರಂಗಿಗಳನ್ನು ಬಳಸಿದ ನಂತರ ಆರನೇ ದಿನ ಒಂದು ಪತ್ರಿಕಾ ಸಮ್ಮೇಳನ ನಡೆಸಿ ಅಂಗನವಾಡಿ ನೌಕರರು ಮತ್ತು ಸಹಾಯಕರ ಬೇಡಿಕೆಗಳನ್ನೆಲ್ಲ ರಾಜ್ಯ ಸರಕಾರ ಒಪ್ಪುತ್ತದೆ, ಆದರೆ ಐಸಿಡಿಎಸ್ ಒಂದು ಕೇಂದ್ರ ಸರಕಾರೀ ಯೋಜನೆಯಾದ್ದರಿಂದ ಅದನ್ನು ಕೇಳುತ್ತದೆ ಎಂದಿದೆ.

ತಾನು ಅಧಿಕಾರದಲ್ಲಿರದ ಕರ್ನಾಟಕದಂತಹ ರಾಜ್ಯಗಳಲ್ಲಿ ಇದು ರಾಜ್ಯ ಸರಕಾರದ ಹೊಣೆ ಎನ್ನುವ ಬಿಜೆಪಿ ಇಲ್ಲಿ ಭಿನ್ನ ರಾಗ ಹಾಡುತ್ತಿದೆ. ಅಸ್ಸಾಂನ ಬಿಜೆಪಿ ಸರಕಾರ ಮೋದಿ ಸರಕಾರ ಬಜೆಟಿನಲ್ಲಿ ಐಸಿಡಿಎಸ್‌ಗೆ ಹಣ ಕಡಿತ ಮಾಡಿದ್ದನ್ನು ಖಂಡಿಸುತ್ತದೆಯೇ ಎಂದು ಅಖಿಲ ಭಾರತ ಅಂಗನವಾಡಿ ನೌಕರರು ಮತ್ತು ಸಹಾಯಕರ ಒಕ್ಕೂಟ(ಎಐಎಫ್‌ಎಡಬ್ಲ್ಯುಹೆಚ್)ದ ಪ್ರಧಾನ ಕಾರ್ಯದರ್ಶಿ ಸಿಂಧು ಅವರು ಪ್ರಶ್ನಿಸಿದ್ದಾರೆ. ಮೋದಿ ಸರಕಾರ ಮೂರು ವರ್ಷಗಳನ್ನು ಪೂರೈಸುವ ಮೇ 26ರಂದು ಎಐಎಫ್‌ಎಡಬ್ಲ್ಯುಹೆಚ್ ದೇಶಾದ್ಯಂತ 'ದೋಖಾ ದಿವಸ್' ಅಂದರೆ ಮೋಸದ ದಿನವಾಗಿ ಆಚರಿಸುತ್ತದೆ, ಅಂದು ಸುಳ್ಳು ಭರವಸೆಗಳನ್ನು ಕೊಟ್ಟಿರುವ ಬಿಜೆಪಿ ಪ್ರಣಾಳಿಕೆಯನ್ನು ಸುಟ್ಟು ಬಿಜೆಪಿಯ ನಿಜಮುಖವನ್ನು ಬಯಲು ಮಾಡಲಾಗುವುದು ಎಂದು ಅವರು ಹೇಳಿದ್ದಾರೆ.

ದಿಲ್ಲಿ ಮೆಟ್ರೋದ ದರಗಳು ದುಪ್ಪಟ್ಟು:

ದಿಲ್ಲಿ ನಗರಸಭೆಗಳ ಚುನಾವಣೆಗಳು ಮುಗಿಯುತ್ತಿದ್ದಂತೆಯೇ ಮೆಟ್ರೋದ ದರಗಳಲ್ಲಿ ಭಾರೀ ಏರಿಕೆ ಮಾಡಲಾಗಿದೆ. ಅಕ್ಟೋಬರ್‌ನಲ್ಲಿ ಮತ್ತೊಂದು ಏರಿಕೆ ಮಾಡಲಾಗುತ್ತದೆ ಎಂದೂ ಹೇಳಲಾಗಿದೆ. ಇದರಿಂದಾಗಿ ದರಗಳು ಇಮ್ಮಡಿಯಾಗುತ್ತವೆ. ಈಗ ಗರಿಷ್ಟ ದರ 30ರೂ. ಇನ್ನು ಮುಂದೆ 60ರೂ. ಆಗಲಿದೆ.

ದಿಲ್ಲಿ ಮತ್ತು ಸುತ್ತಲಿನ ಘಾಜಿಯಾಬಾದ್, ನೊಯ್ಡಾ ಮತ್ತು ಫರೀದಾಬಾದ್‌ನಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಪ್ರತಿದಿನ ಸರಾಸರಿ 44 ಕಿ.ಮೀ ದೂರದ ತಮ್ಮ ನಿವಾಸಗಳಿಂದ ಈ ಮೆಟ್ರೋ ರೈಲುಗಳಲ್ಲಿ ಪ್ರಯಾಣ ಮಾಡಬೇಕಾಗುತ್ತದೆ. ಈಗ ಇದಕ್ಕೆ ಪ್ರತಿತಿಂಗಳು 1560ರೂ. ತೆರುತ್ತಿದ್ದ–ರೆ, ಇನ್ನು ಮುಂದೆ 3120ರೂ. ತೆರಬೇಕಾಗಿ ಬರುತ್ತದೆ. ಇದು ಈಗಾಗಲೇ ಏರುಬೆಲೆಗಳು ಮತ್ತು ಕಡಿಮೆ ಸಂಬಳಗಳಿಂದ ನರಳುತ್ತಿರುವ ಸಾಮಾನ್ಯರ ಹೊರೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಆದ್ದರಿಂದ ಇದನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಆಗ್ರಹಿಸಿದೆ.

ದಿಲ್ಲಿ ಮೆಟ್ರೋದ ಆಡಳಿತ ನೌಕರರ ಸಂಬಳ ಹೆಚ್ಚಿಸಿದ್ದರಿಂದ ಇದು ಅನಿವಾರ್ಯವಾಗಿದೆ ಎಂದು ತಮ್ಮ ಹೊಣೆ ಜಾರಿಸಕೊಳ್ಳಲು ಪ್ರಯತ್ನಿಸಿದ್ದಾರೆ. ಇಂತಹ ನೆವಗಳನ್ನು ಒಪ್ಪಲು ಸಾಧ್ಯವಿಲ್ಲ. ನಾಗರಿಕರಿಗೆ ಅಗ್ಗದರಗಳಲ್ಲಿ ಸಾರಿಗೆ ವ್ಯವಸ್ಥೆ ಮಾಡುವುದು ಕೇಂದ್ರ ಮತ್ತು ರಾಜ್ಯಸರಕಾರಗಳ ಕರ್ತವ್ಯ. ಸ್ವಯಂಪ್ರಶಂಸೆಯ ಜಾಹೀರಾತುಗಳಿಗೆ ಪೋಲು ಮಾಡುತ್ತಿರುವ ಸಾವಿರಾರು ಕೋಟಿ ರೂ.ಗಳನ್ನು ಸಬ್ಸಿಡಿಯಾಗಿ ಮೆಟ್ರೋ ರೈಲಿಗೆ ಕೊಟ್ಟರೆ ಈ ನೆವ ಒಡ್ಡುವ ಅಗತ್ಯವಿರುವುದಿಲ್ಲ. **ನವ–ಉದಾರವಾದಿ ತರ್ಕ ಒಡ್ಡಿ ಸತತವಾಗಿ ಸಾರ್ವಜನಿಕ ಸಾರಿಗೆಯನ್ನು ಹೆಚ್ಚೆಚ್ಚು ತುಟ್ಟಿಗೊಳಿಸಲಾಗುತ್ತಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ದಿಲ್ಲಿಯ ಜನತೆ ಇದರ ವಿರುದ್ಧ ಬಲವಾದ ಪ್ರತಿರೋಧ ದನಿ ಎತ್ತಬೇಕು, ಈ ಏರಿಕೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ.**

'ಮುಂಬೈ ಯೂಥ್ ಮಾರ್ಚ್'



ಮುಂಬೈ ನಗರದ ಪೂರ್ವಭಾಗದಲ್ಲಿ ಬಡಜನರು, ಅಲ್ಪಸಂಖ್ಯಾತರು ಮತ್ತು ದಲಿತರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶದಲ್ಲಿ ಎಪ್ರಿಲ್ 23ರಂದು ಒಂದೂವರೆ ಗಂಟೆಗಳ ಕಾಲ ನಡೆಸಿದ ಯುವಜನರ ನಡಿಗೆ ಭಾರೀ ಸ್ಪಂದನ ದೊರೆತಿದೆ. ದೇಶದಲ್ಲಿ ಅಲ್ಪಸಂಖ್ಯಾತರು ಮತ್ತು ದಲಿತರ ವಿರುದ್ಧ ಹೆಚ್ಚುತ್ತಿರುವ ಅತ್ಯಾಚಾರಗಳ ಹಿನ್ನೆಲೆಯಲ್ಲಿ ಇದನ್ನು ಡಿವೈಎಫ್‌ಐ ಸಂಘಟಿಸಿತ್ತು.

ಡಿವೈಎಫ್‌ಐ ನ ರಾಜ್ಯ ಮುಖಂಡರಲ್ಲದೆ, ಅದರ ಅಖಿಲ ಭಾರತ ಅಧ್ಯಕ್ಷ ಮಹಮ್ಮದ್ ರಿಯಾಸ್ ನೇತೃತ್ವದ ಈ ನಡಿಗೆಯಲ್ಲಿ ಗುಜರಾತಿನ ಉನಾದಲ್ಲಿ ಗೋರಕ್ಷಕರೆನಿಸಿಕೊಂಡವರಿಂದ ಹಿಂಸಾಚಾರಕ್ಕೆ ಒಳಗಾದ ಜೀತುಭಾಯಿ ಸರ್ವೈಯ ಮತ್ತು ವಾಸ್‌ರಾಮ್ ಸರ್ವೈಯ ಸೋದರರು, 2002 ರ ಗುಜರಾತ್ ಹಿಂಸಾಕಾಂಡದ ಪ್ರತೀಕವಾಗಿ ಬಿಟ್ಟಿದ್ದ, ನಂತರ ಹಿಂದುತ್ವ ಕ್ಯಾಂಪ್‌ನ ವಿಷಮಯ ವಾತಾವರಣದಿಂದ ಬೇಸತ್ತು ಬಿಟ್ಟು ಬಂದಿರುವ ಅಶೋಕ್ ಮೋಚಿ, 'ಸಮಾಜ ಮತ್ತು ಜಾತ್ಯತೀತತೆ ಅಧ್ಯಯನ ಕೇಂದ್ರ'ದ ನಿರ್ದೇಶಕ ಡಾ.ಇರ್ಫಾನ್ ಇಂಜಿನಿಯರ್, 'ಇಂಡಿಯನ್ ಮುಸ್ಲಿಮ್ಸ್ ಫಾರ್ ಸೆಕ್ಯುಲರ್ ಡೆಮಾಕ್ರಸಿ'ಯು ಮುಖಂಡ ಹಾಗೂ ಗುಜರಾತ್ ಮತ್ತು ಕೇಂದ್ರ ಸರಕಾರದ ಕಿರುಕುಳಗಳನ್ನು ಸತತವಾಗಿ ಎದುರಿಸುತ್ತಿರುವ ಜಾವೇದ್ ಆನಂದ್, 'ಜಾತಿ ಅಂತ್ ಸಂಘರ್ಷ ಸಮಿತಿ'ಯ ಸಂಯೋಜಕ ಶೈಲೇಂದ್ರ ಕಾಂಬ್ಳೆ ಕೂಡ ಭಾಗವಹಿಸಿದ್ದು ಹಿಂದುತ್ವದ ಪ್ರಭಾವ ಹೆಚ್ಚುತ್ತಿರುವ ಈ ಪ್ರದೇಶದಲ್ಲಿ ಅದಕ್ಕೆ ವಿರುದ್ಧವಾದ ವಿಚಾರಗಳೂ ಬೆಳೆಯುತ್ತಿರುವುದನ್ನು ಬಿಂಬಿಸಿತು. ಡಿವೈಎಫ್‌ಐನ ಗುಜರಾತ್ ಮುಖಂಡರು ಹಾಗೂ ಇಲ್ಲಿನ ಹಿಂದಿನ ಮುಖಂಡರುಗಳಾದ ಡಾ.ಅಶೋಕ ಧವಲೆ, ಡಾ, ಎಸ್.ಕೆ.ರೇಗೆ ಮುಂತಾದ ಹಿರಿಯರೂ ಇದರಲ್ಲಿ ಭಾಗವಹಿಸಿದರು.

ಮೆರವಣಿಗೆಯ ಕೊನೆಯಲ್ಲಿ ರಮಾಬಾಯಿ ನಗರದಲ್ಲಿ ಬಹಿರಂಗ ಸಭೆ ನಡೆಯಿತು. ಇದು 20 ವರ್ಷಗಳ ಹಿಂದೆ 1997ರಲ್ಲಿ ಮುಂಬೈ ಪೋಲಿಸರ ಗೋಲೀಬಾರ್‌ನಲ್ಲಿ ಹುತಾತ್ಮರಾದ ದಲಿತರ ನೆನಪಿನ ಪ್ರದೇಶ ಎಂಬುದು ಕೂಡ ಗಮನಾರ್ಹ

ಪುಣೆ ಸಿಪಿಐ(ಎಂ) ಕಚೇರಿಗೆ ಬಾಂಬ್ ಪಾರ್ಸೆಲ್: ರಾಜ್ಯಾದ್ಯಂತ ಪ್ರತಿಭಟನೆ



ಮಹಾರಾಷ್ಟ್ರದ ಪುಣೆಯಲ್ಲಿರುವ ಸಿಪಿಐ(ಎಂ) ಕಚೇರಿಯಲ್ಲಿ ಎಪ್ರಿಲ್ 26 ರಂದು ಒಂದು ಖಾಸಗಿ ಕೋರಿಯರ್ ಕಂಪನಿ ತಂದು ಕೊಟ್ಟ ಪಾರ್ಸೆಲ್‌ನಲ್ಲಿ ಒಂದು ಸ್ಫೋಟಕ ಸಾಧನ ಇತ್ತು. ಜತೆಗೆ ಒಂದು ಪತ್ರವೂ ಇತ್ತು. ಅದು ಕಮ್ಯುನಿಸ್ಟರಾಗಿ ಕೆಲಸ ಮಾಡುತ್ತಿರುವ ಪಕ್ಷದ ಕಾರ್ಯಕರ್ತರಿಗೆ ಬೆದರಿ–ಕೆಯ ಪತ್ರ ಇದ್ದಿರಬಹುದು. ಪೋಲೀಸ್ ದೂರು ಕೊಡಲಾಗಿದೆ. ಅದಕ್ಕೆ ಇದುವರೆಗೆ ಅಪರಾಧಿಗಳನ್ನು ಪತ್ತೆ ಹಚ್ಚಲಾಗಿಲ್ಲ.

ಪಕ್ಷದ ಕಾರ್ಯದರ್ಶಿಮಂಡಳಿ ಸದಸ್ಯರೂ, ಹಿರಿಯ ಸಿಐಟಿಯು ಮುಖಂಡರೂ ಮತ್ತು ಒಬ್ಬ ಪ್ರಮುಖ ಬೌದ್ಧಿಕರೂ ಆಗಿರುವ ಅಜಿತ್ ಅಭಯಂಕರ್ ಅವರ ವಿಳಾಸವಿದ್ದ ಪಾರ್ಸೆಲ್ ಅದು. ಅದನ್ನು ತೆರೆಯುವಾಗ ಒಂದು ಪಾರದರ್ಶಕ ಪ್ಯಾಕೆಟ್‌ನಲ್ಲಿ ಬ್ಯಾಟರಿ, ವೈರ್‌ಗಳಿದ್ದುದು ಕಂಡು ಸಂದೇಹ ಬಂದು ತಕ್ಷಣ ಪೋಲೀಸರಿಗೆ ತಿಳಿಸಿದರು. ಬಾಂಬ್ ನಿರೋಧಕ ಸಾಧನದೊಂದಿಗೆ ಬಂದ ಪೋಲೀಸರಿಗೆ ಅದನ್ನು ಮತ್ತು ಪತ್ರವನ್ನು ಒಪ್ಪಿಸಲಾಯಿತು. ಅದು ಸ್ಫೋಟಕ ಸಾಧನ ಎಂದು ಪೋಲಿಸರು ದೃಢ ಪಡಿಸಿದರು. ಪಾರ್ಸೆಲ್ ಕಳಿಸಿದವರ ಹೆಸರು, ವಿಳಾಸ ಮತ್ತು ಮೊಬೈಲ್ ನಂಬರುಗಳಿದ್ದರೂ ಅವೆಲ್ಲ ಖೋಟಾ ಇರಬಹುದು. ಪತ್ರದಲ್ಲಿ ಏನಿತ್ತು ಎಂಬುದನ್ನು ಪೋಲಿಸರು ತಿಳಿಸಿಲ್ಲ.

ಅಭಯಂಕರ್ ಅಥವ ಸಿಪಿಐ(ಎಂ)ಗೆ ಈ ರೀತಿ ಸ್ಫೋಟಕಗಳಿರುವ ಪಾರ್ಸೆಲ್ ಬಂದಿರುವುದು ಮೊದಲ ಬಾರಿಯೇನಲ್ಲ. ಪಕ್ಷದ ಕಚೇರಿ ಪುಣೆಯ ಆರೆಸ್ಸೆಸ್ ಪ್ರಾಬಲ್ಯದ ಪ್ರದೇಶದಲ್ಲೇ ಇದೆ. ಆದ್ದ–ರಿಂದ ಆಗಾಗ ಬಲಪಂಥೀಯ ಶಕ್ತಿಗಳ ದಾಳಿಗಳಿಗೆ ಒಳಗಾಗಿದೆ. ಹಿಂದಿನ ಬಾರಿ ಸಪ್ಟಂಬರ್ 2014ರಲ್ಲಿ ದಾಳಿಯಾಗಿತ್ತು.

ಅಭಯಂಕರ್ ಆರೆಸ್ಸೆಸ್ ಸಿದ್ಧಾಂತ ಮತ್ತು ಬಿಜೆಪಿ ರಾಜಕೀಯವನ್ನು ಪರಿಣಾಮಕಾರಿಯಾಗಿ ಬಯಲಿಗೆಳೆಯುವಲ್ಲಿ ಮುಂಚೂಣಿಯಲ್ಲಿರುವವರು. ಈ ಹಿಂದೆ ಡಾ.ನರೇಂದ್ರ ಧಭೋಲ್ಕರ್ ಮತ್ತು ಗೋವಿಂದ ಪನ್ಸರೆಯವರ ಹತ್ಯೆಗಳ ಹಿನ್ನೆಲೆಯಲ್ಲಿ ಗೋವಾದ ಸನಾತನ ಸಂಸ್ಥಾವನ್ನು ಒಂದು ಭಯೋತ್ಪಾದಕ ಸಂಘಟನೆ ಎಂದು ಘೋಷಿಸಬೇಕೆಂದು ಹಿಂದಿನ ಕಾಂಗ್ರೆಸ್–ಎನ್‌ಸಿಪಿ ಸರಕಾರ ಕೇಂದ್ರ ಸರಕಾರ–ಕ್ಕೆ ಪ್ರಸ್ತಾವ ಕಳಿಸಿತ್ತು. ಅದು ಇನ್ನೂ ಧೂಳು ತಿನ್ನುತ್ತಿದೆ.

ಸಿಪಿಐಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಈ ಹೀನ ದಾಳಿಯನ್ನು ಬಲವಾಗಿ ಖಂಡಿಸಿದೆ. ಮೇ 8ರಂದು ರಾಜ್ಯಾದ್ಯಂತ ಪ್ರತಿಭಟನೆಗಳು ನಡೆದಿವೆ.



ಕೇರಳದ ಕೊಲ್ಲಂನಲ್ಲಿ ಮೇ 6ರಂದು ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವ ಆಚರಣೆ ಅತ್ಯಂತ ಉತ್ಸಾಹದ ವಾತಾವರಣದಲ್ಲಿ ನಡೆಯಿತು. ಈ ಜಿಲ್ಲೆಯ ಸಿಪಿಐ(ಎಂ)ನ 140 ಸ್ಥಳೀಯ ಸಮಿತಿಗಳನ್ನು ಪ್ರತಿನಿಧಿಸಿದ 140 ಕೆಂಪು ಸ್ವಯಂಸೇವಕರ ತಂಡಗಳು ಮತ್ತು ಅವರೊಂದಿಗೆ ಸಾವಿರಾರು ಕಾರ್ಯಕರ್ತರು ಇದರಲ್ಲಿ ಭಾಗವಹಿಸಿದರು. ಹಲವು ಪ್ರದೇಶ ಸಮಿತಿಗಳ ಮಹಿಳಾ ತುಕಡಿಗಳೂ ಬಹಳ ಸಂಖ್ಯೆಯಲ್ಲಿ ಭಾಗವಹಿಸಿದವು.

ಭವ್ಯ ಮೆರವಣಿಗೆಯ ಕೊನೆಯಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್, ಇನ್ನೊಬ್ಬ ಪೊಲಿಟ್‌ಬ್ಯುರೊ ಸದಸ್ಯರೂ ಅದ ಎಂ.ಎ.ಬೇಬಿ ಮತ್ತಿತರ ಮುಖಂಡರೂ ಮಾತನಾಡಿದರು.



ಫ್ಯಾಶಿಸಂ: ಆಳ ಅರಿವು ಪಡೆದ ಹಂಬಲದ ಮೇ ಸಾಹಿತ್ಯ ಮೇಳ

ಸಮಕಾಲೀನ ವಿದ್ಯಾಮಾನಗಳಿಗೆ ಸ್ಪಂದಿಸುವ, ಸಂವಾದಿದುವ ಪರಿಪಾಠವಿರುವ ಮೇ ಸಾಹಿತ್ಯ ಮೇಳ ಈ ಬಾರಿ ದೇಶದಲ್ಲಿ ಬೆಳೆಯುತ್ತಿರುವ ಅಸಹಿಷ್ಣುತೆ, ಮುಖ್ಯವಾಗಿ ಫ್ಯಾಶಿಸ್ಟ್ ಮನೋಭಾವದ ದಾಳಿಗಳ ಸುತ್ತ ತನ್ನ ಸಂವಾದವನ್ನು ಕೇಂದ್ರೀಕರಿಸಿತು.

ಇದೇ ಮೇ 6 ಮತ್ತು 7, 2017 ರಂದು ಸಾಂಸ್ಕೃತಿಕ ನಗರ ಧಾರವಾಡದಲ್ಲಿ ನಡೆದ ಮೇ ಸಾಹಿತ್ಯ ಮೇಳದ ಕೇಂದ್ರವನ್ನು 'ಫ್ಯಾಶಿಸಂ ಚಹರೆಗಳು: ಅಪಾಯ – ಪ್ರತಿ–ರೋಧ' ಎಂಬುದಾಗಿತ್ತು. ಇದನ್ನು ಗದಗ್–ನ ಲಡಾಯಿ ಪ್ರಕಾಶನ, ಕವಿ ಪ್ರಕಾಶನ–ಕವಲಕ್ಕಿ ಮತ್ತು ಚಿತ್ತಾರ ಕಲಾ ಬಳಗ– ಧಾರವಾಡ ಈ ಮೂರು ಸಂಸ್ಥೆಗಳು ಸಂಘಟಿಸಿದ್ದವು. ಹಿಂದೆ 2002 ರಿಂದ ಲಡಾಯಿ ಪ್ರಕಾಶನ ಸಾಹಿತ್ಯ ಸಮಾವೇಶ – ವಿಚಾರ ಸಂಕಿರಣ ಮೂಲಕ ಆರಂಭಿಸಿದ ಪ್ರಕ್ರಿಯೆ ಕಳೆದ 5 ವರ್ಷಗಳಿಂದ ಮೇ ಸಾಹಿತ್ಯ ಮೇಳವಾಗಿ ರೂಪಾಂತರಗೊಂಡಿದೆ.

ಈ ಮೇಳ ಪ್ರಮುಖವಾಗಿ ವೈಚಾರಿಕ ಚಿಂತನ – ಮಂಥನಕ್ಕೆ ಪ್ರಾಮುಖ್ಯತೆ ನೀಡಿರುವಾಗಲೇ ಹಲವು ವೈವಿಧ್ಯಮಯ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಒಳಗೊಂಡಿತ್ತು. ಮೇಳದ ಉದ್ಘಾಟನಾ ಸಂದರ್ಭಕ್ಕೆ 27 ಪ್ರಮುಖ ಬರಹಗಾರರ ವೈಚಾರಿಕ ಕೃತಿಗಳ ಪ್ರಕಟನೆ ಗಮನಾರ್ಹವಾಗಿದ್ದರೆ, ಜೊತೆಗೆ ನಾಟಕಗಳೇ (ಗೋಡೆಗಳು, ಇತರೆ) ಚಲನಚಿತ್ರ ಪ್ರದರ್ಶನ. (ಅಮರಾವತಿ), ಹಾಡುಗಳು, ರಕ್ತದಾನ, ಅಂತರ್‌ಜಾತಿ ವಿವಾಹ ಹೀಗೆ ಹಲವು ಚಟುವಟಿಕೆಗಳ ಮೂಲಕ ಆಶಯ ಅನಾವರಣಗೊಂಡವು. ಗದಗ–ಧಾರವಾಡ ಜಿಲ್ಲೆಗಳಲ್ಲದೇ ರಾಜ್ಯದ ಹಲವಾರು ಜಿಲ್ಲೆಗಳಿಂದಲೂ ಬರಹಗಾರರು, ಸಾಹಿತ್ಯಾಸಕ್ತಿ ಪ್ರಗತಿಪರರು ಸುಮಾರು 600 ಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸಿದ್ದರು.

ಇದರಲ್ಲಿ ಹಿರಿಯ – ಕಿರಿಯ ತಲೆಮಾರು ಭಾಗವಹಿಸಿದ್ದು ಅದರಲ್ಲೂ ಯುವ ಬರಹಗಾರರು, ಕವಿಗಳು, ಮಹಿಳೆಯರು ಭಾಗವಹಿಸುವಿಕೆ ವಿಶೇಷ ಉಲ್ಲೇಖನೀಯ. ಯಾಕೆಂದರೆ ಎಲ್ಲೆಡೆ ಸಾಹಿತ್ಯಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿಯೂ ಫ್ಯಾಶಿಸ್ಟ್ ಮನೋಭಾವದ ಶಕ್ತಿಗಳ ದಾಳಿ ವಾತಾವರಣದಲ್ಲಿ ಹೊಸ ತಲೆಮಾರಿನಿಂದ ಗಣನೀಯವಾಗಿ ಪಡೆದ ಬೆಂಬಲ ಸಕಾರಾತ್ಮಕವಾಗಿದೆ ಕೂಡ.

ಸಾಹಿತ್ಯಮೇಳವನ್ನು ಉದ್ಘಾಟಿಸಿದವರು ದೇಶದ ಖ್ಯಾತ ಬರಹಗಾರ್ತಿ, ಚಿಂತಕಿ ಪ್ರೋ. ಗೀತಾ ಹರಿಹರನ್‌ರವರು. ಫ್ಯಾಶಿಸಂ, ಫ್ಯಾಶಿಸ್ಟ್ ಮನೋಭಾವದ ಶಕ್ತಿಗಳು ಹುಟ್ಟುವ–ಬೆಳೆಯುವ ಆರ್ಥಿಕ, ಸಾಮಾಜಿಕ, ಚಾರಿತ್ರಿಕ ಸಂದರ್ಭಗಳನ್ನು ವಿವರವಾಗಿ ಬಿಡಿಸಿಟ್ಟ ಅವರು ಫ್ಯಾಶಿಸಂ ನ ಚಹರೆಗಳು ಮತ್ತು ಅದರ ಅಪಾಯ, ಬೆಳೆಯಬೇಕಾದ ಪ್ರತಿರೋಧದ ಗೊತ್ತು–ಗುರಿಗಳನ್ನು ವಿಶ್ಲೇಷಿಸಿದರು. 'ಹಿಂದೂ ಎಂಬ ಏಕರೀತಿಯ ಆಸ್ಮಿತೆ ಕಟ್ಟಿ, ಬಹುಸಂಖ್ಯಾತರು ಅಪಾಯದಲ್ಲಿ ಇದ್ದೇವೆ ಎಂಬ ಅನೈತಿಕ ಪ್ರಚಾರ – ಪಕ್ಷೋಬೆ ಮಾಡುವುದು ನಿಜವಾದ ಫ್ಯಾಶಿಸ್ಟ್ ಲಕ್ಷಣ ಎಂದು ಅಭಿಪ್ರಾಯ ಪಟ್ಟರು. ವಿಜ್ಞಾನ ಮತ್ತು ಚರಿತ್ರೆಯನ್ನು ಅಪಹಾಸ್ಯ ಮಾಡುವುದು ಫ್ಯಾಶಿಸ್ಟ್ ಲಕ್ಷಣ. ಏಕೆಂದರೆ ಇವುಗಳ ಎದುರು ಫ್ಯಾಶಿಸ್ಟ್ ಶಕ್ತಿಗಳು ಉಳಿಯುವುದಿಲ್ಲ.

ಜನಸಮೂಹದ ಸ್ಥಿತಿ ಮುಖ್ಯವಾಗುವುದೇ ಇಲ್ಲ. ಆದರೆ ರಾಷ್ಟ್ರ ಚೆನ್ನಾಗಿರಬೇಕು. ಅದಕ್ಕಾಗಿ ಲಕ್ಷಾಂತರ ಜನ ಸತ್ತರೂ ಪರವಾಗಿಲ್ಲ ಎಂಬ ಅಲೋಚನೆ ಫ್ಯಾಸಿಸ್ಟ್ ಗುಣ ಲಕ್ಷಣ. ಹೀಗಿತ್ತು ಅವರ ವಿಶ್ಲೇಷಣೆ.

ಮೊದಲ ದಿನದ ಸಾಹಿತ್ಯಿಕ ಸಂವಾದದ ಗೋಷ್ಠಿಯಲ್ಲಿ ಭಾಗವಹಿಸಿದವರು ಹಿರಿಯ ಚಿಂತಕರಾದ ಡಾ॥ ಅರವಿಂದ ಮಾಲಗತ್ತಿ, ರಂಜಾನ್‌ದರ್ಗಾ, ಪ್ರೊ. ಅಶೋಕ ಶೆಟ್ಟರ್, ಡಾ॥ ಹೆಚ್.ಎಸ್. ಅನುಪಮಾ, ಕೆ. ನೀಲಾ ಮುಂತಾದವರು.

"ಫ್ಯಾಶಿಸ್ಟ್ ಚಹರೆಗಳು ಮತ್ತು ಪ್ರತಿರೋಧ"ದ ಗೋಷ್ಠಿಯಲ್ಲಿ ಮಾತನಾಡಿದ ಖ್ಯಾತ ಚಿಂತಕ ಡಾ॥ ಆನಂದ ತೇಲ್ತುಂಬ್ಡೆ, ಶಿವಸುಂದರ್, ಪದ್ಮಶ್ರೀ ಡಾ॥ ಗಣೇಶ್ .ಎನ್. ದೇವಿ, ಡಾ। ರಾಜೇಂದ್ರ ಪೊದ್ದಾರ್, "ಫ್ಯಾಶಿಸ್ಟ್ ಮತ್ತು ಸಾಹಿತ್ಯ"ದಲ್ಲಿ ಡಾ॥ ಅಶೋಕ ಶೆಟ್ಟರ್, ಶ್ರೀಧರ್, ಹುಲಿಕುಂಟೆ ಮೂರ್ತಿ, ಡಾ॥ ಸುಶಿ ಕಾಡನಕೊಪ್ಪೆ, ಪ್ರೊ. ಕೇಶವಶರ್ಮ, ಡಾ॥ ಕಿರಣ ಗಾಜನೂರು ತಮ್ಮ ಅಭಿಪ್ರಾಯ ಹಂಚಿಕೊಂಡರು. 2ನೇ ದಿನದ ಗೋಷ್ಠಿಯಲ್ಲಿ ಮುಖ್ಯವಾಗಿ ಕ್ಯಾಂಪಸ್ ವಿದ್ಯಾರ್ಥಿ ಚಳುವಳಿ ಕುರಿತ ಗೋಷ್ಠಿಯಲ್ಲಿ ಆಶಯ ಭಾಷಣ ಮಾಡಿದರು ಜವಹಾರಲಾಲ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಪಿ.ಪಿ. ಅಮನ್ ಶೈಕ್ಷಣಿಕ ರಂಗದಲ್ಲಿ ಕೇಂದ್ರದ ಮೋದಿ ಸರ್ಕಾರ ನಡೆಸುತ್ತಿರುವ ಸರ್ವಾಧಿಕಾರಿ, ಫ್ಯಾಶಿಸ್ಟ್ ಸ್ವರೂಪದ ಧಾಳಿಗಳು ಮತ್ತು ಪ್ರತಿರೋಧವನ್ನು ವಿವರವಾಗಿ ವಿವರಿಸಿದರು. ಇದರಲ್ಲಿ ಭಾಗವಹಿಸಿದ ಕರ್ನಾಟಕದ ತುಮಕೂರಿನಲ್ಲಿ ದೇಶದ್ರೋಹದ ಕೇಸ್ ಎದುರಿಸಿದ ಜ್ಯೋತಿ ಪಿ ಒಳಗೊಂಡು ಹಲವು ವಿದ್ಯಾರ್ಥಿ ಮುಖಂಡರು ಸನ್ನಿವೇಶವನ್ನು ತೆರೆದಿಟ್ಟದ್ದು ಮತ್ತು ಈ ಸ್ಥಿತಿಯೆದರು ರಾಜೀ ಇಲ್ಲದೇ ಹೋರಾಡುವುದಾಗಿ ಘೋಷಿಸಿದ್ದು ಅತ್ಯಂತ ಸ್ಫೂರ್ತಿದಾಯಕವಾಗಿತ್ತು. ಮುಖ್ಯವಾಗಿ ಮಾತನಾಡಿದ ಚಿಂತಕ ಡಾ॥ ಮಲ್ಲಿಕಾರ್ಜುನ ಮೋದಿಯವರು ಕರ್ನಾಟಕ ಕ್ಯಾಂಪಸ್ ಹಾಗೂ ಪ್ರಾಧ್ಯಾಪಕರ ಪಾತ್ರ. ಇತ್ಯಾದಿ ವಿಶ್ಲೇಷಿಸಿದರು. ಜಾತಿ ಮತ್ತು ಕೋಮುವಾದಗಳ ನಡುವಿನ ಸಂಬಂಧಗಳನ್ನು ತೆರೆದು ತೋರಿಸಿದರು. 'ಫ್ಯಾಶಿಸಂ ವಿಚಾರಧಾರೆ ಹಾಗೂ ಶಕ್ತಿಗಳನ್ನು ಎದುರಿಸಲು ಬೇಕಾದ ವಿನ್ಯಾಸವನ್ನು ಕರ್ನಾಟಕದಲ್ಲಿ ರೂಪಿಸಿಕೊಳ್ಳಬೇಕಿದೆ. ಈ ಬಗ್ಗೆ ಸರಳ ತಿಳುವಳಿಕೆ ಸರಿಯಲ್ಲ ಎಂದರು.

ಡಾ॥ ಸಿದ್ದನಗೌಡ ಪಾಟೀಲರು ಮಾತನಾಡಿ, ಐಕ್ಯತೆ, ಚಿಂತನೆ ಮತ್ತು ಹೋರಾಟದಲ್ಲಿ ಬೆಳೆದು ಬರಬೇಕಾದ ಅಗತ್ಯ ಮನಗಾಣಿಸಿದರು.

ಎಲ್ಲರ ಗಮನ ಸೆಳೆದ ಮತ್ತೊಂದು ಗೋಷ್ಠಿಯೆಂದರೆ, 'ಸಮಕಾಲೀನ ಚಳವಳಿಗಳು' ಮುಂದಿನ ದಾರಿ". ಚರ್ಚೆಗೆ ಚಾಲನೆ ನೀಡಿದವರು ಹಿರಿಯ ಪತ್ರಕರ್ತ ಸನತ್‌ಕುಮಾರ್ ಬೆಳಗಲಿ. ಇದರಲ್ಲಿ ಹಿರಿಯ ಸಾಮಾಜಿಕ ಹೋರಾಟಗಾರರಾದ ಎಸ್. ಆರ್. ಹೀರೆಮತ್, ರೈತ ಮುಖಂಡರಾದ ಚಾಮರಸ್ ಮಾಲಿ ಪಾಟೀಲ್, ಎಸ್. ವೈ. ಗುರುಶಾಂತ್, ಗೌರಿ, ನರಸಿಂಹ ಮೂರ್ತಿ, ಮುಂತಾದವರ ವಿಶ್ಲೇಷಣೆಗಳು ಹಾಗೇ ಕವಿ ಗೋಷ್ಠಿ ಪರಿಣಾಮಕಾರಿಯಾಗಿತ್ತು. ಬಹುತೇಕ ಯುವಕವಿಗಳೇ ತುಂಬಿದ ಈ ಗೋಷ್ಠಿ ಭರವಸೆ ಹುಟ್ಟಿಸಿತ್ತು.

ಒಟ್ಟಾರೆ ಈ ಮೇ ಸಾಹಿತ್ಯ ಮೇಳ ಫ್ಯಾಶಿಸಂ ಬಗ್ಗೆ, ಅದರ ಕೃತ್ಯಗಳನ್ನು ತಾತ್ವಿಕವಾಗಿ, ತಿಳುವಳಿಕೆ ಹುಟ್ಟಿಸುವ ದಿಕ್ಕಿನಲ್ಲಿ ಒಂದು ಯಶಸ್ವಿ ಪ್ರಯತ್ನವಾಗಿತ್ತು. ವಿಶೇಷವಾಗಿ ಎಡ ಹಾಗೂ ಪ್ರಗತಿಪರ ಚಿಂತನೆಯ ಹಲವು ಧಾರೆಗಳನ್ನು, ಚಳುವಳಿಗಳ ಪ್ರಾತಿನಿಧಿತ್ವವನ್ನೂ ಒಂದೆಡೆ ಕಲೆಸುವಲ್ಲಿ ಹಾಗೂ ಒಳಗೊಳ್ಳುವಲ್ಲಿ ಯಶಸ್ವಿಯಾಗಿರುವುದನ್ನು ಅನೇಕರು ಗುರುತಿಸಿದರು. ಅತ್ಯಂತ ಬಿಗಿಯಾದ ವಾತಾವರಣದಲ್ಲಿ, ದಾಳಿಗಳ ಎದುರಲ್ಲಿ ಹೊಸ ಪೀಳಿಗೆ ಬರಹಗಾರರು ದಿಟ್ಟತನದಿಂದ ತೊಡಗಿ ತಮ್ಮ ಗಟ್ಟಿ ದನಿ ಮೊಳಗಿಸಿದ್ದು ಸ್ವಾಗತಾರ್ಹ, ಭರವಸೆಯಿಂದ ಕೂಡಿದ್ದಾಗಿದೆ. "ಈ ಸಾಹಿತ್ಯಮೇಳ ಒಂದು ಪರ್ಯಾಯ ಜನ ಚಳವಳಿ ಅಥವಾ ರಾಜಕೀಯ ಪರ್ಯಾಯ ತೋರಿಸುವುದಾಗಿಲ್ಲದಿದ್ದಾಗ್ಯೂ, ಅಪಾಯ, ಸವಾಲುಗಳ ಬಗ್ಗೆ ತಿಳುವಳಿಕೆ, ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಮತ್ತು ಇದೇ ಆಶಯವಾಗಿತ್ತು ಕೂಡ. ಇನ್ನಷ್ಟು ತಿಳಿಯುವ ತವಕವನ್ನೂ ಹುಟ್ಟಿಸಿರುವುದು ಇದರ ಯಶಸ್ಸಿನ ದ್ಯೋತಕ. ಪ್ರತಿರೋಧದ ಜನಚಳುವಳಿಗೆ ಪೂರಕ ಕ್ರಿಯೆ ಅಷ್ಟೇ. ಇಂತಹ ಸಂವಾದಗಳು ಹೆಚ್ಚಾಗಬೇಕಿದೆ ಎಂಬುದು ನಿಜ. ಬದುಕಿನ ನಿತ್ಯ ಪ್ರಶ್ನೆಗಳನ್ನು ಎತ್ತುತ್ತಲೇ ಜನರನ್ನು ಒಗ್ಗೂಡಿಸುತ್ತಾ ಉದಾರೀಕರಣದ ಆರ್ಥಿಕ ನೀತಿಗಳನ್ನು ಎದುರಿಸುತ್ತಲೇ ಇದಕ್ಕೆ ಪೂರಕವಾಗಿ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆ – ಚಳುವಳಿ ಸಾಗಬೇಕಿದೆ ಎಂದರು ಆಶಯ ಭಾಷಣ ಮಾಡಿದ ಕೆ. ನೀಲಾರವರು. ಮಾಧ್ಯಮಗಳ ಪಾತ್ರ ಕುರಿತ ಗೋಷ್ಠಿಯಲ್ಲಿ ಹಿರಿಯ ಪತ್ರಕರ್ತ, ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರರಾದ ದಿನೇಶ್ ಅಮೀನ್ ಮಟ್ಟು, ಅಗ್ನಿ ಪತ್ರಿಕೆಯ ಮಂಜುನಾಥ ಆದ್ದೆ, ಶೃಂಗೇಶ್, ಸಿದ್ದಣ್ಣ ಮುಂತಾದವರು ವಿಶ್ಲೇಷಿಸಿದರು. ●

ನಿರ್ಭಯ ಮತ್ತು ಬಿಲ್ಕಿಸ್ ಬಾನೊ ತೀರ್ಪುಗಳು..... ಪುಟ 11 ರಿಂದ

ಅವರು ಎಸಗಿದ ಅಪರಾಧದ ಹರವು ವಿಸ್ತಾರಕ್ಕೆ ಇದು ತೀರ ಕಡಿಮೆ ಶಿಕ್ಷೆಯೆಂದು ಕಾಣುತ್ತದೆ. ಆದರೆ ಹಿಂದಿನ ಕೋರ್ಟಿನ ತೀರ್ಪಿನಲ್ಲಿ ಮುಂದಿರಿಸಿದ್ದ ಖೋಟಾ ವಾದ ಮತ್ತು ಸಮರ್ಥನೆಯನ್ನು ಈ ಕೋರ್ಟು ಕತ್ತರಿಸಿಹಾಕಿದ್ದು ಹಾಗೂ ತಪ್ಪಿತಸ್ಥರು ಎಂದು ತೀರ್ಮಾನಿಸಿದ್ದು ನಿಜಕ್ಕೂ ಸ್ವಾಗತಾರ್ಹವಾದದ್ದು. ಎಸಗಿದ್ದ ಅಪರಾಧವನ್ನು ಮಿತಿಮೀರಿ ಮುಚ್ಚಿಹಾಕಲು ಯತ್ನಿಸಿ ಸಿಕ್ಕುಹಾಕಿಕೊಂಡಿದ್ದ ಪೋಲಿಸರು ಮತ್ತು ವೈದ್ಯರನ್ನು ಹಿಡಿದುಹಾಕಿದ ಮೊಟ್ಟಮೊದಲ ತೀರ್ಪು ಇದಾಗಿದೆ.

ಕೋಮು ವಿದ್ವೇಷ ಪ್ರೇರಿತ ಅಪರಾಧಗಳಿಗೆ ಕಡಿಮೆ ಶಿಕ್ಷೆ?

120 ಬಿ ಅಡಿಯಲ್ಲಿನ ಪಿತೂರಿ ಆಪಾದನೆಯನ್ನು ಕೋರ್ಟು ತಿರಸ್ಕರಿಸಿದೆ. ಇಲ್ಲಿ, ನಿರ್ಭಯ ಪ್ರಕರಣದಲ್ಲಿ ಬಳಸಿದ್ದ ಮಾನದಂಡ ಬದಲಾಗಿರುವುದು ಸ್ಪಷ್ಟವಾಗಿದೆ. " . . ಅದು ಆ ಕ್ಷಣದ ಪ್ರೇರೇಪಣೆ . . " ಎಂದು ಕೋರ್ಟು ಹೇಳಿದೆ. ಅದೇ ತೀರ್ಪಿನ ಇನ್ನೊಂದು ಕಡೆಯಲ್ಲಿ " . .ಅವರು ಮುಸ್ಲಿಮರಿಗಾಗಿ ಹುಡುಕಾಡುತ್ತಿದ್ದರು . ." ಎಂದಿದೆ. ಅವರು ಮುಸ್ಲಿಮರಿಗಾಗಿ ಹುಡುಕಾಡುತ್ತಿದ್ದರೆ ಅಪರಾಧ ಹೇಗೆ ಆ ಕ್ಷಣದ ಪ್ರೇರೇಪಣೆ ಆಗುತ್ತದೆ? ಅವರು ಮುಸ್ಲಿಮರಿಗಾಗಿ ಹುಡುಕುತ್ತಿದ್ದುದು ಅವರೊಡನೆ ಮಾತುಕತೆ ಮಾಡಲಲ್ಲ, ಅವರನ್ನು ಅತ್ಯಾಚಾರ ಮಾಡಿ ಕೊಲ್ಲಲು ಹುಡುಕುತ್ತಿದ್ದರಷ್ಟೆ. ಅದು ಸಾಧ್ಯವಾಗಿದ್ದು 'ಹುಡುಕಲು' ಅವರ ನಡುವೆ ಇದ್ದ ಒಪ್ಪಂದ ಕಾರಣ. ನಿರ್ಭಯ ತೀಪಿನಲ್ಲಿ "ಅಪರಾಧಿಗಳ ನಡುವಿನ ಒಪ್ಪಂದ" ಪಿತೂರಿ ಎಂದು ತಿಳಿಯಲು ಮುಖ್ಯ ಅಂಶ. ಆದರೆ ಬಿಲ್ಕಿಸ್ ತೀರ್ಪಿನಲ್ಲಿ ಪಿತೂರಿಯ ಆಪಾದನೆಯನ್ನು ವಜಾಗೊಳಿಸಲಾಗಿದೆ.

ಗಲ್ಲು ಶಿಕ್ಷೆಗಾಗಿ ಸಿಬಿಐ ಸಲ್ಲಿಸಿದ್ದ ಅರ್ಜಿಯ ತಿರಸ್ಕಾರಕ್ಕೆ ಅದು ನೀಡಿದ್ದ ಆಧಾರ ಸಮಸ್ಯೆ ಉಂಟುಮಾಡಿತ್ತು. ಮುಂದಿಟ್ಟಿದ್ದ ಆಧಾರಗಳಲ್ಲಿ ಒಂದು. "ಗೋಧ್ರಾ ಘಟನೆಯ ನಂತರ . . . ಅವರು ಪ್ರತೀಕಾರಕ್ಕಾಗಿ ಕುದಿಯುತ್ತಿದ್ದರು . . .ಅವರು ಅಪರಾಧದ ಚರಿತ್ರೆ ಹೊಂದಿದವರಲ್ಲ ಮತ್ತು ಕಟ್ಟಾ ಪಾತಕರಲ್ಲ.". ತಗ್ಗಿದ ಶಿಕ್ಷೆಗೆ "ಪ್ರತೀಕಾರ" ಒಂದು ಕಾರಣವಾಗಬಹುದೆ? ನಿರ್ಭಯ ಪ್ರಕರಣದ ಅಪರಾಧಿಗಳೂ "ಅಪರಾಧದ ಚರಿತ್ರೆ ಇರುವವರಲ್ಲ ಅಥವಾ ಕಟ್ಟಾ ಪಾತಕರಲ್ಲ". ಆದರೆ ಈ ಆಧಾರವನ್ನು ಸುಪ್ರೀಂ ಕೋರ್ಟು ಅಪರಾಧದ ಸ್ವರೂಪದಿಂದಾಗಿ ತಿರಸ್ಕರಿಸಿತು. ಹೌದು, ಬಿಲ್ಕಿಸ್ ಬದುಕುಳಿದಳು, ಆದರೆ ಅವಳ ಸೋದರಿಯರು ಭೀಕರವಾಗಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿ ಕೊಲ್ಲಲ್ಪಟ್ಟರು. ಮಹಿಳೆಯರ ಮೇಲೆ ಎಸಗಿದ ಅಪರಾಧಗಳಲ್ಲಿನ ಬರ್ಬರತೆ–ಯ ವಿಸ್ತಾರವನ್ನು ಹೋಲಿಸುವುದು ಜಿಗುಪ್ಸೆ ಹುಟ್ಟಿಸುತ್ತದೆ. ಗಲ್ಲುಶಿಕ್ಷೆ ನೀಡಿದ ಪ್ರಕರಣಗಳಿಗಿಂತ ಮಹಿಳೆಯರ ಮೇಲಿನ ಅಪರಾಧಗಳ ಸ್ವರೂಪ ಇಲ್ಲಿ ಕಡಿಮೆ ಎಂದು ಹೇಳಬಹುದೆ? ಆ ತೀರ್ಪು ಆ ಪ್ರಕರಣವನ್ನು ವಿವರಿಸುತ್ತಾ "ಅತ್ಯಂತ ಅಸಹ್ಯಕರ ಕಡು ಹಗೆತನ ಮತ್ತು ದ್ವೇಷವನ್ನು ತೋರುವ ಅಪರೂಪದ ಕಗ್ಗೊಲೆ" ಮತ್ತು "ಅಂತಹ ಅಪರಾಧ ಅಸಮರ್ಥನೀಯ ಹಾಗೂ ದೂರವಿಡಬೇಕಾದ್ದು", ಆದರೆ ಆ ತೀರ್ಪಿನಲ್ಲಿನ ತರ್ಕ ಕೋಮು ವಿದ್ವೇಷದಿಂದ ಪ್ರೇರಿತ ಅಪರಾಧಗಳು ಕಡಿಮೆ ಶಿಕ್ಷೆಯಲ್ಲಿ ಪರ್ಯವಸಾನವಾಗುತ್ತವೆ ಎಂಬ ವ್ಯಾಪಕ ಪ್ರಭಾವ ಬೀರುವ ತರ್ಕಕ್ಕೆ ಎಡೆಮಾಡಿಕೊಡುವುದಿಲ್ಲವೇ?

ಕೆಲವು ಪ್ರಕರಣಗಳು ತೀರ್ಪಿನಲ್ಲಿ ಸ್ವಲ್ಪ ಮಟ್ಟಿಗಾದರೂ ತಾರ್ಕಿಕ ಅಂತ್ಯ ಕಾಣುತ್ತವೆ. ಆದರೆ ಇನ್ನೂ ಕೆಲವು ಪ್ರಕರಣಗಳಲ್ಲಿ ಪ್ರಶ್ನೆಗಳು ಉಳಿದು ಬಿಡುತ್ತವೆ. ●

ದಂತಗಳಿಲ್ಲದ ಆನೆ ಮತ್ತು ಫ್ಯಾಸೀವಾದ........ ಪುಟ 6 ರಿಂದ

ಮನಮೋಹನ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ಪ್ರಾರಂಭ ಮಾಡಿದ ಮಾಡಬೇಕೆಂದಿದ್ದ, ಮತ್ತು ಮಾಡಲಾಗದ ಯೋಜನೆ, ಮಸೂದೆ–ಕಾಯಿದೆ–ಕಾರ್ಯಕ್ರಮಗಳನ್ನೆಲ್ಲಾ ಇನ್ನೂ ಹೆಚ್ಚಿನ ಕಾರ್ಯಕ್ಷಮತೆ ಮತ್ತು ವೇಗದಲ್ಲಿ ಕಾರ್ಯಗತಗೊಳಿಸುತ್ತಿದೆ. 'ಭಾಜಪ ಎಂದರೆ ಹಸುವಿನೊಂದಿಗಿನ ಕಾಂಗ್ರೆಸ್' ಎಂದು ಹಿಂದಿನ ಭಾಜಪ ಸರ್ಕಾರದಲ್ಲಿ ಬಂಡವಾಳ ಹಿಂತೆ–ಗೆತದ ಮಂತ್ರಿಯಾಗಿದ್ದ ಅರುಣ್ ಶೌರಿ ಹೇಳಿದ್ದು ಕೇವಲ ಲೇವಡಿಯಲ್ಲ. ಹಾಗಿದ್ದರೆ ಕಾಂಗ್ರೆಸ್ ಸರ್ಕಾರ ಇದ್ದಾಗ ಫ್ಯಾಸಿಸಂ ಬಗ್ಗೆ ಯಾಕೆ ಚರ್ಚೆ–ಸಂವಾದಗಳು ನಡೆಯಲಿಲ್ಲ?

ಹಾಗೆಯೇ ಮತ್ತೊಂದು ಪ್ರಶ್ನೆ–ಮುಸೋಲಿನಿ ಮತ್ತು ಹಿಟ್ಲರ್ ಕಾಲದ ಫ್ಯಾಸಿಸಂ ಈಗ ಇದೆಯೆ? ಈಗಿರುವ ಫ್ಯಾಸಿಸಂನ ಸ್ವರೂಪವನ್ನು ನೋಡಿದ–ರೆ ಇದು ಅದೇ ಅಲ್ಲ ಎಂಬುದು ನಿರ್ವಿವಾದ. ಹಾಗೆಯೇ ಬಂಡವಾಳವಾದದ ಹೊರರೂಪಗಳು ಬದಲಾಗುತ್ತಲೇ ಬಂದಿವೆ, ಮೊದಲಿದ್ದ ತಂತ್ರಜ್ಞಾನ ಈಗ ತೀರಾ ಹಳೆಯದಾಗಿದೆ. ಮುಸೋಲಿನಿ–ಹಿಟ್ಲರ್‌ಗೆ ಲಭ್ಯವಿಲ್ಲದ ಮಾಹಿತಿ ತಂತ್ರಜ್ಞಾನ ಮತ್ತು ಸಂವಹನ ಮಾಧ್ಯಮಗಳ ತಂತ್ರಜ್ಞಾನಗಳಲ್ಲಿ ಆಗಿರುವ ಆವಿಷ್ಕಾರಗಳು ಬಂಡವಾಳವಾದದ ಮೋದಿ ನೇತೃತ್ವದ ಭಾಜಪದ ಬೆನ್ನಿಗೆ ಇವೆ. ಇದೆಲ್ಲವೂ ನಿಜವೇ. ಆದರೆ ಈ ಸಮಾಜ ಸಂಘಟಿತವಾಗಿ ನಾವೆಲ್ಲರೂ ಅಸ್ತಿತ್ವದಲ್ಲಿರಲು ಬೇಕಾದ ಶ್ರಮಶಕ್ತಿ ಮಾಯವಾಗಿಲ್ಲ. ಹಾಗೆಯೇ ಇದೆ. ಉತ್ಪಾದನಾ ಸಲಕರಣೆಗಳು, ಉತ್ಪಾದನಾ ಸಂಬಂಧಗಳು, ಮಿಗುತೆ ಮೌಲ್ಯ, ಯಾವುದೇ ರೂಪಕ್ಕೆ ಪಲ್ಲಟಗೊಂಡರೂ ಶ್ರಮಶಕ್ತಿಯ ಮಹತ್ವ ಮತ್ತು ಅನಿವಾರ್ಯತೆಗಳು ಮಾತ್ರ ಹಾಗೆಯೇ ಇವೆ.

'ಕಾಲ ಬದಲಾಗಿದೆ' ಎಂದು ಎಲ್ಲ ಕಾಲಗಳಲ್ಲೂ ಎಲ್ಲರೂ ಹೇಳುತ್ತಲೇ ಬಂದಿದ್ದಾರೆ. ಈಗ ಕಾಲ ಬದಲಾಗಿದೆ ಎಂದರೆ, ಸರಕು ಉತ್ಪಾದನೆ–ವ್ಯಾಪಾರ ಹಿಂದೆ ಸರಿದು ಸೇವೆಗಳ ಉತ್ಪಾದನೆ–ವ್ಯಾಪಾರ ಮೇಲುಗೈ ಪಡೆದಿದೆ. ಸರಕು–ಸೇವೆಗಳ ಉದ್ಯಮ–ವ್ಯಾಪಾರಗಳ ಲಾಭ ರೂಪದ ಮಿಗುತೆ ಮೌಲ್ಯದ ಆರ್ಥಿಕತೆಯನ್ನು ಹಣಕಾಸು ಬಂಡವಾಳದ ಬಡ್ಡಿ–ಬಾಡಿಗೆ ರೂಪದ ಮಿಗುತೆ ಮೌಲ್ಯದ ಆರ್ಥಿಕತೆ ನಿಯಂತ್ರಿಸುತ್ತಿದೆ. ಭೌತಿಕ ಸರಕುಗಳ ವಿನಿಮಯ ಮಾಧ್ಯಮವಾಗಿದ್ದ ಮಾಯಾ ಸರಕಾದ ಹಣ ಕ್ಯಾನ್ಸರ್ ಜೀವಕೋಶಗಳಂತೆ ತನ್ನನ್ನು ತಾನೇ ಉತ್ಪಾದಿಸಿಕೊಳ್ಳುತ್ತಿದೆ. ಈ ಹಂತದಲ್ಲಿ ಬಂಡವಾಳವಾದವೆಂಬ ಆನೆ ತನ್ನ ದಂತವನ್ನು ತೋರಿಸಿ ಬದುಕುವ ಕಾಲ ಮುಗಿದು ಹೋಗಿದೆ. ಈಗ ಏನಿದ್ದರೂ ಅದು ತನ್ನ ಜಗಿಯುವ ಹಲ್ಲುಗಳನ್ನೂ ತೋರಿಸುವುದು ಅನಿವಾರ್ಯವಾಗಿದೆ. ಕಾಂಗ್ರೆಸ್ ಎಂಬ ಆನೆಯ ದಂತ ಮುರಿದಿವೆ. ದಂತಗಳೇ ಇಲ್ಲದ, ಮುಸೋಲಿನಿ ಮತ್ತು ಹಿಟ್ಲರ್ ಲೋಕದೃಷ್ಟಿಯನ್ನು ಆರಾಧಿಸುವ, ಸಂಘಪರಿವಾರದ ರಾಜಕೀಯ ಮುಖವಾಡವಾದ ಮೋದಿ ನೇತೃತ್ವದ ಭಾಜಪ ಈ ಕಾಲಘಟ್ಟದಲ್ಲಿ ಅಧಿಕಾರಕ್ಕೆ ಬಂದಿದೆ. ಅದು ಬೇಕೆಂದು ಬಯಸಿದರೂ ತೋರಿಸಲು ಅದ–ಕ್ಕೆ ದಂತಗಳಿಲ್ಲ. ಇರುವುದು ಜಗಿಯುವ ಹಲ್ಲುಗಳು ಮಾತ್ರ. ಅಂದರೆ ಭಾಜಪ ಮುಖೇನದ ಫ್ಯಾಸೀವಾದ ಹಿಂದಿನ ಸರ್ಕಾರಗಳಿಗಿದ್ದ ಪ್ರಜಾತಂತ್ರದ ಮುಖವಾಡವಿಲ್ಲದೆ ನಗ್ನವಾಗಿದೆ. ಅದನ್ನು ಮರೆಮಾಚಲು ಡಿಜಿಟಲ್ ಮಂತ್ರ. ಅಭಿವೃದ್ಧಿ ಮಂತ್ರ. ಅದಕ್ಕಿರುವುದು ಡಿಜಿಟಲ್–ಅಭಿವೃದ್ಧಿ ಎಂಬ ಸುಳ್ಳು ದಂತಗಳು ಮಾತ್ರ. ಆದ್ದರಿಂದಲೇ ಫ್ಯಾಸಿಸಂ ಬಗ್ಗೆ ಈಗ ಇಷ್ಟೊಂದು ಚರ್ಚೆ.

ಈಗಿರುವ ಮುಖ್ಯ ಪ್ರಶ್ನೆ ಈ ಡಿಜಿಟಲ್–ಅಭಿವೃದ್ಧಿಯ ಸುಳ್ಳು ದಂತಗಳ, ನಗ್ನ ಹಲ್ಲಿನ ಆನೆಯನ್ನು ಎದುರಿಸುವುದು ಹೇಗೆ ಎಂಬುದು. ●

JANASHAKTHI KANNADA VARA PATRIKE May 15-21, 2017 Price : Rs. 10/- Date of Publication : 12 May 2017 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ದುಂಡುಮೇಜಿನ ಸಭೆಯಲ್ಲಿ ವಿಜ್ಞಾನಿಗಳ ತೀವ್ರ ವಿರೋಧ
“ಪಾತಾಳ ಗಂಗೆ' ಕಾರ್ಯಸಾಧುವಲ್ಲ–ಅಪಾಯಕಾರಿ”

ಆರ್. ರಾಮಕೃಷ್ಣ


ಕರ್ನಾಟಕ ರಾಜ್ಯವನ್ನು ಕಾಡುತ್ತಿರುವ ಗಂಭೀರ ಬರದ ಪರಿಣಾಮವಾಗಿ ಉಂಟಾಗಿರುವ ನೀರಿನ ಕೊರತೆಗೆ ಪರಿಹಾರ ಎಂಬ ಹೆಸರಿನಲ್ಲಿ ರಾಜ್ಯ ಸರಕಾರವು ಇತ್ತೀಚೆಗೆ 'ಪಾತಾಳ ಗಂಗೆ' ಎಂಬ ಯೋಜನೆಯೊಂದನ್ನು ಪ್ರಕಟಿಸಿದೆ. ಭೂಗರ್ಭದೊಳಗಿನ ಸುಮಾರು 2000 ದಿಂದ 8000 ಮೀಟರ್ ಆಳದಲ್ಲಿ ಸಹಸ್ರಾರು ಅಥವಾ ಲಕ್ಷಾಂತರ ವರ್ಷಗಳ ಹಿಂದೆ ಸಂಗ್ರಹಗೊಂಡಿರುವ ಪಳಯುಳಿಕೆ ನೀರನ್ನು ಕೊಳವೆ ಬಾವಿಗಳ ಮೂಲಕ ಮೇಲಕ್ಕೆತ್ತುವ ಯೋಜನೆಯೇ 'ಪಾತಾಳ ಗಂಗೆ' ಯೋಜನೆ ಎಂದು ಹೇಳಲಾಗಿದೆ.

ಪ್ರತಿ ಬಾವಿಯನ್ನು ಕೊರೆಯಲು ಅಂದಾಜು 10 ರಿಂದ 12.48 ಕೋಟಿ ವೆಚ್ಚವಾಗುವ ಈ ಯೋಜನೆಯು ಯಶಸ್ವಿಯಾದಲ್ಲಿ ಗಂಟೆಗೆ ತಲಾ ಬಾವಿಯಿಂದ 80 ಸಾವಿರದಿಂದ 1 ಲಕ್ಷ ಲೀಟರ್‌ವರೆಗೆ ಶುದ್ಧ ನೀರನ್ನು ಪಡೆಯಬಹುದೆಂದು, ಇದರಿಂದ ಪರಿಸರಕ್ಕೆ ಯಾವುದೇ ಹಾನಿ ಇಲ್ಲವೆಂದು ಸರಕಾರ ಹೇಳಿಕೊಂಡಿದೆ. ಮೊದಲ ಹಂತದಲ್ಲಿ ನೀರಿನ ಕೊರತೆ ತೀವ್ರವಾಗಿರುವ ವಿಜಯಪುರದ ಇಂಡಿ, ಗುಲ್ಬರ್ಗಾದ ಅಳಂದ, ತುಮಕೂರಿನ ಪಾವಗಡ, ಚಿಕ್ಕನಾಯಕನಹಳ್ಳಿ, ಚಿತ್ರದುರ್ಗದ ಚಳ್ಳಕೆರೆ, ಬೆಂಗಳೂರು ನಗರ ಜಿಲ್ಲೆಯ ಆನೇಕಲ್, ಕೋಲಾರದ ಶ್ರೀನಿವಾಸಪುರ, ಗದಗ್‌ನ ಬೆಳದಡಿ, ಧಾರವಾಡ ಜಿಲ್ಲೆಯ ಅಣ್ಣಿಗೇರಿ, ಬಾಗಲಕೋಟೆಯ ಮಹಾಲಿಂಗಪುರ, ಮುಂತಾದ 10 ಪ್ರದೇಶಗಳಲ್ಲಿ ಆರು ತಿಂಗಳ ಕಾಲಮಿತಿಯಲ್ಲಿ ಯೋಜನೆಯನ್ನು ಜಾರಿಮಾಡಲು ಉದ್ದೇಶಿಸಲಾಗಿದೆ.

ಈ ಯೋಜನೆಯನ್ನು 'ವಾಟರ್ ಕ್ವೆಸ್ಟ್ ಹೈಡ್ರೋ ರಿಸೋರ್ಸಸ್ ಸಂಸ್ಥೆ' ಎಂಬ ಅಮೆರಿಕನ್ ಕಂಪನಿಯು ಜಾರಿ ಮಾಡುತ್ತದೆ ಎಂದು ಹೇಳಲಾಗಿದೆ. ಇದು ಜಾಗತಿಕ ಕಂಪನಿಯಾದ ಸ್ಕೈಕ್ವೆಸ್ಟ್ ಕಂಪನಿಯ ಒಂದು ಅಂಗಸಂಸ್ಥೆಯಾಗಿದೆ. ನೀರು ದೊರೆಯದೇ ಬಾವಿ ವಿಫಲವಾದಲ್ಲಿ ಕಂಪನಿಯು ಯಾವುದೇ ವೆಚ್ಚವನ್ನು ಪಡೆಯುವುದಿಲ್ಲವೆಂದು ಹೇಳಲಾಗಿದೆ. ಯೋಜನೆಯು ಸರಕಾರವು ಹೇಳುತ್ತಿರುವಷ್ಟು ಸರಳವಲ್ಲ ಎಂಬುದು ಮೇಲ್ನೋಟಕ್ಕೇ ಸ್ಪಷ್ಟವಾಗಿದೆ. ನಮ್ಮ ನಾಡಿನ ಹಲವು ಭೂವಿಜ್ಞಾನಿಗಳು, ಜಲತಜ್ಞರು, ಪರಿಸರ ತಜ್ಞರು ಈಗಾಗಲೇ ಈ ಯೋಜನೆಯ ಬಗೆಗೆ ತಮ್ಮ ಆತಂಕವನ್ನು ಬಹಿರಂಗ ಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯು ರಾಜ್ಯ ಸರಕಾರದ ಉದ್ದೇಶಿತ ಪಾತಾಳ ಗಂಗೆ ಯೋಜನೆಯ ಕುರಿತು ಭೂವಿಜ್ಞಾನಿಗಳು, ಅಂತರ್ಜಲ ವಿಜ್ಞಾನಿಗಳೂ, ಜಲತಜ್ಞರು, ಪರಿಸರ ತಜ್ಞರು ಮತ್ತು ಸಾಮಾಜಿಕ ಕಾರ್ಯಕರ್ತರನ್ನೊಳಗೊಂಡ ದುಂಡು ಮೇಜಿನ ಸಭೆಯೊಂದನ್ನು ಸಂಘಟಿಸಿತ್ತು. ಮೇ 6, 2017 ರಂದು ಸಂಜೆ ಬೆಂಗಳೂರಿನ ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಈ ಸಂವಾದದಲ್ಲಿ ಸರಕಾರದ ಯೋಜನೆಯು ಅಪಾಯಕಾರಿ ಮತ್ತು ಅದು ಕಾರ್ಯಸಾಧುವಲ್ಲ, ಸರಕಾರ ಇಂತಹ ಈ ಯೋಜನೆಯನ್ನು ತತ್‌ಕ್ಷಣ ಕೈಬಿಡಬೇಕು ಎಂಬ ಪ್ರಬಲವಾದ ಅಭಿಪ್ರಾಯವು ಮೂಡಿಬಂದಿತು.

ಬರ ಪರಿಹಾರ ಉಸ್ತುವಾರಿ ಕೋಶ ಹಾಗೂ ದೂರ ಸಂವೇದಿ ಕೇಂದ್ರ, ಇವುಗಳ ನಿವೃತ್ತ ನಿರ್ದೇಶಕರು ಹಾಗೂ ಭೂ ವಿಜ್ಞಾನಿಗಳೂ ಆದ ಡಾ. ಹೆಚ್. ಚಂದ್ರಶೇಖರ ಅವರು ಸಂವಾದದ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಅವರು ಮೊದಲಿಗೆ ಮಾತನಾಡಿ ಪಾತಾಳ ಗಂಗೆ ಯೋಜನೆಯು ಅತ್ಯಂತ ಅವೈಜ್ಞಾನಿಕವಾದುದು. ಅದಕ್ಕೆ ಯಾವುದೇ ತಳಹದಿ ಇಲ್ಲ. ಇದೊಂದು ಮೂರ್ಖತನದ ಯೋಜನೆ. ಭೂಗರ್ಭದಾಳದಿಂದ ಹೊರ ತೆಗೆಯುವ ನೀರು, ಲವಣಾಂಶಗಳು ಮತ್ತು ಅಪಾಯಕಾರಿ ರಾಸಾಯನಿಕಗಳಿಂದ ಕೂಡಿದ್ದು ಅದು ಕುಡಿಯಲು ಯೋಗ್ಯವಲ್ಲ. ಈ ನೀರನ್ನು 'ರಿವರ್ಸ್ ಆಸ್ಮೋಸಿಸ್'(ಆರ್. ಒ.) ತಂತ್ರಜ್ಞಾನದ ಮೂಲಕ ಸಂಸ್ಕರಿಸಬೇಕಾಗುತ್ತದೆ. ಲವಣಾಂಶ ಮತ್ತು ರಸಾಯನಿಕಗಳನ್ನು ಪ್ರತ್ಯೇಕಿಸಬೇಕಾಗುತ್ತದೆ. ಅದು ಮತ್ತಷ್ಟು ಸಮಸ್ಯೆಗಳನ್ನು ಸೃಷ್ಟಿಸುತ್ತದೆ ಎಂದರು. ಇಸ್ರೇಲ್‌ನಲ್ಲಿ ವಾರ್ಷಿಕ 30 ಮಿ.ಮಿ. ಮಾತ್ರ ಮಳೆ ಬೀಳುತ್ತದೆ. ಅಲ್ಲಿ ಒಂದು ಹನಿ ನೀರನ್ನು ವ್ಯರ್ಥ ಮಾಡುವುದಿಲ್ಲ. ಇಸ್ರೇಲ್ ದೇಶ ಯುರೋಪ್‌ಗೆ ಹಣ್ಣು ಪೂರೈಸುತ್ತದೆ ಎಂದೂ ಅವರು ಹೇಳಿದರು. “ ಭೂಗರ್ಭದ ಆಳದಲ್ಲಿ



ಸಮುದ್ರಗಳ ನಡುವೆ ಸಾಕಷ್ಟು ಜಲನಾಡಿಗಳಿವೆ. ಈ ಜಲನಾಡಿಗಳು ಭೂ ಪ್ರದೇಶದ ಮ್ಯಾಗ್ಮಾ ಪದರಿನ ಮೇಲೆ ಹಾಯ್ದು ಹೋಗುವಾಗ ಈ ಪದರಿನ ಹೆಚ್ಚಿನ ಉಷ್ಣತೆಯಿಂದ ಜಲನಾಡಿಗಳಲ್ಲಿ ಹರಿಯುವ ಉಪ್ಪು ನೀರು ಆವಿಯಾಗಿ ಮೇಲಿನ ಪೊಟರೆಗಳಲ್ಲಿ ಶಿಲಾ ಬಿರುಕು, ಕಂದಕಗಳಲ್ಲಿ ಸಂಗ್ರಹವಾಗುತ್ತದೆ. ಇಂತಹ ಜಲಮೂಲವನ್ನು ಗುರುತಿಸಿ ಮೇಲೆತ್ತಲಾಗುತ್ತದೆ ”ಎಂದು ಹೇಳಲಾಗುತ್ತಿದೆ. ಆದರೆ ಇದು ವಾಸ್ತವವಲ್ಲ. ಇದೊಂದು ತಪ್ಪು ಕಲ್ಪನೆ. ಆರ್ಥಿಕವಾಗಿಯೂ ಯೋಜನೆ ಕಾರ್ಯ ಸಾಧುವಲ್ಲ ಎಂದೂ ಹಿರಿಯ ಭೂ ವಿಜ್ಞಾನಿ ಹೇಳಿದರು.

ಜಲತಜ್ಞರು, ಕುಮುದ್ವತಿ ಮತ್ತು ಅರ್ಕಾವತಿ ನದಿ ಪುನಶ್ಚೇತನ ಆಂದೋಲನದಲ್ಲಿ ತೊಡಗಿರುವವರೂ ಆದ ಎಲೆ ಲಿಂಗರಾಜು ಅವರು ಮಾತನಾಡಿ ಪಾತಾಳ ಗಂಗೆಯ ಮೂಲಕ ನಿಸರ್ಗದ ಸ್ವಾಭಾವಿಕ ವ್ಯವಸ್ಥೆಯನ್ನು ಕದಡಲು ಸರಕಾರ ಮುಂದಾಗಿದೆ. ಪಾತಾಳ ಗಂಗೆ ಯೋಜನೆಯು ಜೀವ ಸಂಕುಲಕ್ಕೆ ಮಾರಕ. ಇಂತಹ ದುಸ್ಸಾಹಸಕ್ಕೆ ಕೈ ಹಾಕುವ ಬದಲು ಮಳೆ ನೀರು ಕೊಯ್ಲಿಗೆ ಸರಕಾರ ಹೆಚ್ಚಿನ ಆದ್ಯತೆ ನೀಡಲಿ ಎಂದು ಹೇಳಿದರು.

ಭೂವಿಜ್ಞಾನಿಗಳು, ವಿಜ್ಞಾನ ಬರಹಗಾರರೂ ಆದ ಟಿ.ಆರ್. ಅನಂತರಾಮ್ ಅವರು ಮಾತನಾಡಿ ಕರ್ನಾಟಕದ ಭೂಭಾಗವು ಗಟ್ಟಿಯಾದ ಶಿಲಾಪದರದ ಮೇಲೆ ನಿಂತಿದೆ. ಅಷ್ಟು ಆಳದಲ್ಲಿ ನೀರು ಇರುವುದೇ ಇಲ್ಲ. ಸರಕಾರದ ನಿರ್ಧಾರ ಘೋರವಾದುದು. ಅದರಿಂದ ಕೋಟ್ಯಂತರ ರೂಪಾಯಿ ನಷ್ಟವಾಗುತ್ತದೆಯೇ ಹೊರತು ಪ್ರಯೋಜನವಾಗುವುದಿಲ್ಲ. ಶತಶತಮಾನಗಳ ಹಿಂದೆ ಸಂಗ್ರಹವಾದ ನೀರಿನಲ್ಲಿ ಸಿಲಿಕಾರ್ಡ್, ಆರ್‌ಸೆನಿಕ್, ಅಧಿಕ ಫ್ಲೋರೈಡ್ ಮುಂತಾದ ಅಪಾಯಕಾರಿ ಅಂಶಗಳಿರುತ್ತವೆ. ಈ ನೀರು ಬಳಕೆಗೂ ಯೋಗ್ಯವಲ್ಲ. ಪಾತಾಳ ಗಂಗೆಯನ್ನು ಹೊರತೆಗೆದರೆ ಭೂಮಿಯ ಭದ್ರ ಬುನಾದಿಗೆ ಧಕ್ಕೆಯಾಗುತ್ತದೆ.

ಕೋಲಾರದ ಚಿನ್ನದ ಗಣಿಯಲ್ಲಿ 2.5 ಸಾವಿರ ಮೀಟರ್‌ಗಿಂತ ಹೆಚ್ಚಿನ ಆಳಕ್ಕೆ ಭೂಮಿಯನ್ನು ಕೊರೆಯಲಾಗಿದೆ. ಈಗ ಅಲ್ಲಿ ಸಾಕಷ್ಟು ನೀರು ತುಂಬಿಕೊಂಡಿದೆ. ಈ ನೀರು ಕುಡಿಯಲು ಯೋಗ್ಯ ಎಂದಾಗಿದ್ದಿದ್ದರೆ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನೀರಿಗೆ ಬರವೇ ಇರುತ್ತಿರಲಿಲ್ಲ ಎಂದು ಹೇಳಿದರು.

ವಿದೇಶಿ ಕಂಪನಿಯೊಂದು ಬಾಲಿಶವಾಗಿ ತಯಾರಿಸಿಕೊಟ್ಟಿರುವ ವರದಿಯನ್ನು ಆಧರಿಸಿ ಭೂಗರ್ಭದಿಂದ ನೀರು ತೆಗೆಯಲು ಹೊರಟಿರುವುದು ಮೂರ್ಖತನ ಎಂದ ಅವರು, ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಹಲವು ತಜ್ಞರಿದ್ದಾರೆ. ಯೋಜನೆಯ ಸಾಧ್ಯತೆಯ ಬಗೆಗೆ ಅವರ ವರದಿ ಕೇಳಿದ್ದರೆ ಸತ್ಯ ಗೊತ್ತಾಗುತ್ತಿತ್ತು. ಸರಕಾರ ಇದನ್ನು ಮಾಡುತ್ತಿಲ್ಲ ಎಂದೂ ಅವರು ಟೀಕಿಸಿದರು.

ಕರ್ನಾಟಕ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಪ್ರಕಾಶ ಕಮ್ಮರಡಿಯವರು ಮಾತನಾಡಿ ಕುಡಿಯುವ ನೀರಿಗೆ ತೀರಾ ತತ್ವಾ–ರ ಎದುರಾಗಿರುವ ಹಿನ್ನೆಲೆಯಲ್ಲಿ ಸರಕಾರ ಪಾತಾಳಗಂಗೆ ಯೋಜನೆ ಜಾರಿಗೆ ಮುಂದಾಗಿದೆ. ಜನ ಮತ್ತು ಜಾನುವಾರು ಉಳಿಸಲು ಇದು ಅಗತ್ಯ. ಈ ಯೋಜನೆ ಕೃಷಿ ಉದ್ದೇಶಕ್ಕೆ ಅಲ್ಲ. ಕುಡಿಯುವ ನೀರಿಗೆ ಮಾತ್ರ. ಎರಡು ಸಮುದ್ರಗಳ ನಡುವಿನ ಭೂಗರ್ಭದಾಳದಲ್ಲಿ ನೀರು ನೈಸರ್ಗಿಕವಾಗಿ ಶೋಧ ಗೊಂಡು ಸಂಗ್ರಹವಾಗಿರುತ್ತದೆ. ಅಂತಹ ನೀರನ್ನು ಬಳಕೆಗೆ ಹೊರತೆಗೆಯುವುದಾಗಿ ಯೋಜನೆಯನ್ನು ಜಾರಿಗೊಳಿಸುತ್ತಿರುವ 'ವಾಟರ್ ಕ್ವೆಸ್ಟ್ ಹೈಡ್ರೋ ರಿಸೋರ್ಸಸ್ ಕಂಪನಿ ತನ್ನ ವೆಬ್‌ಸೈಟ್‌ನಲ್ಲೇ ಹೇಳಿದೆ ಎಂದರು. ಆದರೆ ಸಂವಾದದಲ್ಲಿ ಪಾಲ್ಗೊಂಡ ಭೂವಿಜ್ಞಾನಿಗಳು, ಜಲತಜ್ಞರು ಅಮೆರಿಕನ್ ಕಂಪನಿ ಹೇಳುತ್ತಿರುವುದೆಲ್ಲ ನಿಜವಲ್ಲ. ವೈಬ್‌ಸೈಟ್ ಇರುವುದೆಲ್ಲವೂ ಸತ್ಯವೆಂದು ನಂಬಬಾರದು. ಹತ್ತಾರು ವರ್ಷಗಳ ಕಾಲ ಕ್ಷೇತ್ರಕಾರ್ಯ, ಅಧ್ಯಯನ ಮಾಡಿರುವ ವಿಜ್ಞಾನಿಗಳ ಸಲಹೆಗೆ ಬೆಲೆ ಕೊಡಬೇಕು ಎಂದು ಪ್ರತಿಪಾದಿಸಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪದಾಧಿಕಾರಿಗಳಾದ ಕೆ.ಎಸ್. ವಿಮಲ ಅವರು ಮಾತನಾಡಿ, ದೇಶದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಅಸ್ತಿತ್ವಕ್ಕೆ ಬಂದು ಹತ್ತು ವರ್ಷಗಳಾಗಿದೆ. ಈ ಯೋಜನೆಯ ಮೂಲಕ ಗ್ರಾಮೀಣ ಭಾಗಗಳಲ್ಲಿ ಕೆರೆ ಕಟ್ಟೆಗಳ ಹೂಳು ತೆಗೆದು ಅವುಗಳನ್ನು ಪುನಶ್ಚೇತನಗೊಳಿಸಲು ಯೋಜನೆಯಲ್ಲಿ ಅವಕಾಶ ಇದೆ. ತ್ರಿಪುರ ರಾಜ್ಯದಲ್ಲಿ ಈ ಯೋಜನೆಯನ್ನು ಬಳಸಿಕೊಂಡು ಜಲಸಂರಕ್ಷಣೆಯ ಸಂಬಂಧ ಉತ್ತಮವಾದ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತಿದೆ. ಆದರೆ ಕರ್ನಾಟಕ ರಾಜ್ಯ ಸರಕಾರ ಈ ಯೋಜನೆಯನ್ನು ಸಮರ್ಪಕವಾಗಿ ಜಾರಿ ಮಾಡುವ ಬಗೆಗೆ ಗಮನ ನೀಡುತ್ತಿಲ್ಲ. ಗ್ರಾಮೀಣ ಕೂಲಿಕಾರರಿಗೆ ಉದ್ಯೋಗವನ್ನೂ ನೀಡುತ್ತಿಲ್ಲ ಎಂದರು. ಅಭಿವೃದ್ಧಿ ಯೋಜನೆಗಳು ಪರಿಸರ ವಿರೋಧಿಯಾಗಬಾರದು. ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಎರಡೂ ಒಟ್ಟೊಟ್ಟಿಗೆ ಆಗಬೇಕು, ಸಾವಿರಾರು ಕೋಟಿ ರೂ ಖರ್ಚು ಮಾಡಿ ವಿಷ ಕುಡಿಸುವ ಬದಲು ಕೆರೆಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಪ್ರತಿಪಾದಿಸಿದರು.

ಸಾಂಸ್ಕೃತಿಕ ಸಂಘಟನೆ 'ಸಮುದಾಯ'ದ ರಾಜ್ಯ ಕಾರ್ಯದರ್ಶಿ ಟಿ. ಸುರೇಂದ್ರ ರಾವ್ ಅವರು ಮಾತನಾಡಿ, ದುಬೈ ದೇಶದಲ್ಲಿ ಇಂತಹ ಯೋಜನೆಯನ್ನು ಈ ಹಿಂದೆಯೇ ಜಾರಿ ಮಾಡಿದ್ದು ಈಗ ಆ ಕೊಳವೇ ಬಾವಿಗಳಲ್ಲಿ ನೀರಿಲ್ಲದೇ ಹಾಳಾಗಿವೆ. ಮತ್ತು ಅಲ್ಲಿನ ಪರಿಸರಕ್ಕೆ ಗಂಭೀರ ಹಾನಿಯಾಗಿದೆ ಎಂದು ಹೇಳಿದರು.

ಡಾ. ಶುಭಾಶ್ ಚಂದ್ರ, ಜಲತಜ್ಞರು, ಗಣಿ ಮತ್ತು ಭೂವಿಜ್ಞಾನ ಇಲಾಖೆ (ನಿವೃತ್ತರು), ಡಾ. ಡಿ.ವಿ. ಹೆಗಡೆ, ಹಿರಿಯ ಭೂವಿಜ್ಞಾನಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆ(ನಿವೃತ್ತರು) ಇವರು ಸಂವಾದದಲ್ಲಿ ಹಾಜರಾಗಲು ಸಾಧ್ಯವಾಗದ್ದರಿಂದ ಜಂಟಿಯಾಗಿ ಸಭೆಗೆ ತಮ್ಮ ಲಿಖಿತ ಸಂದೇಶವನ್ನು ನೀಡಿದ್ದರು. ಈ ಸಂದೇಶದ ಮೂಲಕ ಈ ಇಬ್ಬರೂ ವಿಜ್ಞಾನಿಗಳು ಪಾತಾಳಗಂಗೆ ಯೋಜನೆಯು ಕಾರ್ಯಸಾಧ್ಯವಾದ ಯೋಜನೆಯಲ್ಲ. ಈಗ ಹೇಳಲಾಗುತ್ತಿರುವಂತೆ ಭೂಗರ್ಭದಾಳದಲ್ಲಿ ನೀರಿನ ಹರಿವು ಅಥವಾ ನೀರಿನ ಪ್ರವಾಹ ಇರುತ್ತದೆ ಎಂಬುದೇ ಭ್ರಮಾತ್ಮಕ ಎಂದು ಹೇಳಿದ್ದಾರೆ. ಪ್ರಸ್ತಾವಿತ ಪಾತಾಳ ಗಂಗೆ ಯೋಜನೆಯನ್ನು ಈ ವಿಜ್ಞಾನಿಗಳು ಹೇಳಿಕೆಯಲ್ಲಿ ಸ್ಪಷ್ಟವಾಗಿ ವಿರೋಧಿಸಿದ್ದಾರೆ. ಸಂವಾದದಲ್ಲಿ ಈ ಲಿಖಿತ ಸಂದೇಶವನ್ನು ಓದಲಾಯಿತು. ಬಿಜಿವಿಎಸ್‌ನ ರಾಜ್ಯ ಜಂಟಿ ಕಾರ್ಯದರ್ಶಿ ಆರ್. ರಾಮಕೃಷ್ಣ ಕೊನೆಯಲ್ಲಿ ಮಾತನಾಡಿ ಸರಕಾರವು ಯೋಜನೆಯನ್ನು ಕೈಬಿಡದಿದ್ದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ವಿಶೇಷವಾಗಿ ಯೋಜನೆ ಜಾರಿಯಾಗಬೇಕೆಂದಿರುವ ಹತ್ತು ಪ್ರದೇಶಗಳಲ್ಲಿ ಬಿಜಿವಿಎಸ್ ಮತ್ತು ಸಮಾನ ಮನಸ್ಕ ಸಂಘಟನೆಯಿಂದ ಈ ಯೋಜನೆಯ ಅಪಾಯಗಳ ಬಗೆಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಆರಂಭದಲ್ಲಿ ಬಿಜಿವಿಎಸ್ ಸಂಘಟನೆಯ ಪರವಾಗಿ ಶುಭಂಕರ ಚಕ್ರವರ್ತಿ ಪ್ರಸ್ತಾವಿಕವಾಗಿ ಮಾತನಾಡಿದರು. ಬಿಜಿವಿಎಸ್ ರಾಜ್ಯ ಕಾಯದರ್ಶಿ ಎಚ್. ಎಸ್. ಜೈಕುಮಾರ್, ಮಳೆಕೊಯ್ಲು ತಜ್ಞ ಆನಂದ್, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಸೇರಿದಂತೆ ಹಲವು ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಸಂವಾದದಲ್ಲಿ ಪಾಲ್ಗೊಂಡಿದ್ದರು.

ದುಂಡು ಮೇಜಿನ ಸಭೆಯಲ್ಲಿ ಬಹುತೇಕ ತಜ್ಞರು, ಸಾಮಾಜಿಕ ಕಾರ್ಯಕರ್ತರು ಪಾತಾಳ ಗಂಗೆ ಯೋಜನೆಗೆ ತೀವ್ರ ವಿರೋಧ ಸೂಚಿಸಿದ ಹಿನ್ನೆಲೆಯಲ್ಲಿ ವಿವಿಧ ವಿಜ್ಞಾನಿಗಳು ಮತ್ತು ಸಂಘಟನೆಗಳ ಪರವಾಗಿ ನಿಯೋಗವೊಂದು ಸರಕಾರದ ಮುಖ್ಯಸ್ಥರನ್ನು ಭೇಟಿಯಾಗಿ ಸರಕಾರವು ಯೋಜನೆಯನ್ನು ಕೈಬಿಡುವಂತೆ ಒತ್ತಾಯಿಸಿ ಮನ ವಿಪತ್ರವೊಂದನ್ನು ನೀಡಬೇಕೆಂದು ನಿರ್ಧರಿಸಲಾಯಿತು.

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**